Editor: **NITYANANDASWAMI** Publisher: **U. BASAVARAJA** RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–43 ಅಕ್ಟೋಬರ್ 23–29, 2023 ಪುಟ 16 ರೂ. 10/–
Volume-17 Issue-43 October 23-29, 2023 Pages:16 Price: 10/-

ಮಹಿಳಾ ಕಟ್ಟಡ ಕಾರ್ಮಿಕರ ಬದುಕು ಹೀಗೇಕೆ?





ಮಂಗಳಾದೇವಿ ಜಾತ್ರೆಯಲ್ಲಿ ಸಾಮರಸ್ಯ ಕದಡುವ ಯತ್ನ ವಿಫಲಗೊಳಿಸಿದ ಜನ

ರೈತರ ಪಾಲಿಗೆ ಕಲ್ಪತರುವಾಗಿ ಉಳಿಯದ ತೆಂಗು: ಸಂಕಷ್ಟದಲ್ಲಿ ಬೆಳೆಗಾರರು

ಪ್ಯಾಲೆಸ್ಟೈನ್: ಕಾವ್ಯ ಸ್ಫುರಣ

ಅಧಿಕಾರಿಗಳಿಗೆ ಆಯಕಟ್ಟಿನ ಜಾಗ ಅಂದರೆ ಏನು?

ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತ ಮತ್ತಷ್ಟು ಕುಸಿತ ಜನರ ಬಗ್ಗೆ ಮೋದಿ ಸರ್ಕಾರದ ಉದಾಸೀನತೆ, ನಿರಾಸಕ್ತಿಯ ಪರಿಣಾಮ-ಎಐಕೆಎಸ್

ಕಳೆದ ವಾರ ಬಿಡುಗಡೆಯಾದ ಇತ್ತೀಚಿನ ಜಾಗತಿಕ ಹಸಿವಿನ ಸೂಚ್ಯಂಕ (ಜಿಎಚ್‌ಐ)ದಲ್ಲಿ ಭಾರತದ ಶ್ರೇಯಾಂಕವು 125 ದೇಶಗಳಲ್ಲಿ 111 ಕ್ಕೆ ಕುಸಿದಿರುವುದು ಭಾರತದಲ್ಲಿ ಆಹಾರ ಅಭದ್ರತೆ ಮತ್ತು ಅಪೌಷ್ಟಿಕತೆಯ ಪರಿಸ್ಥಿತಿ ಹದಗೆಟ್ಟಿರುವುದನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ ಎಂದು ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್) ಕಳವಳ ವ್ಯಕ್ತಪಡಿಸಿದೆ. ಮತ್ತೊಂದು ವಿಶ್ವ ಆಹಾರ ದಿನವನ್ನು (ಅಕ್ಟೋಬರ್ 16) ಆಚರಿಸುತ್ತಿರುವಾಗ, ಭಾರತದಲ್ಲಿ ಕೋಟ್ಯಂತರ ಜನರು ಆಹಾರದ ಕೊರತೆಯನ್ನು ಎದುರಿಸುತ್ತಿರುವ ಈ ಶೋಚನೀಯ ವಾಸ್ತವವನ್ನು ನಾವು ಎದುರಿಸುತ್ತಿದ್ದೇವೆ, ಬಹುಪಾಲು ಮಕ್ಕಳು ಮತ್ತು ಮಹಿಳೆಯರು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ ಮತ್ತು ಆರೋಗ್ಯಕರ ಆಹಾರಗಳು ಹೆಚ್ಚಿನ ಜನರನ್ನು ತಲುಪದೆ ದೂರವೇ ಉಳಿದಿವೆ ಎಂದು ಅದು ಖೇದ ವ್ಯಕ್ತಪಡಿಸಿದೆ.

ಜಾಗತಿಕ ಹಸಿವು ಸೂಚ್ಯಂಕದಲ್ಲಿ ಕಳೆದ ವರ್ಷ ಭಾರತ 121 ದೇಶಗಳಲ್ಲಿ 107 ನೇ ಸ್ಥಾನದಲ್ಲಿತ್ತು. 2014 ರಲ್ಲಿ, ಮೋದಿ ಆಡಳಿತಕ್ಕೆ ಬಂದಾಗ, ಭಾರತವು 120 ದೇಶಗಳಲ್ಲಿ 55 ನೇ ಸ್ಥಾನದಲ್ಲಿತ್ತು. ಅಂದರೆ ಮೋದಿ ಆಳ್ವಿಕೆಯ ಕಳೆದ 9 ವರ್ಷಗಳಲ್ಲಿ ಭಾರತದಲ್ಲಿ ಆಹಾರ ಅಭದ್ರತೆ ಮತ್ತು ಅಪೌಷ್ಟಿಕತೆಯ ಪರಿಸ್ಥಿತಿ ಎಷ್ಟೊಂದು ಹದಗೆಟ್ಟಿದೆ ಎಂಬುದನ್ನು ಕಾಣಬಹುದು ಎಂದು ಎಐಕೆಎಸ್ ಹೇಳಿದೆ.

ಕಳೆದ ವರ್ಷದಂತೆ, ಈ ವರ್ಷವೂ ಅಫ್ಘಾನಿಸ್ತಾನ ಹೊರತುಪಡಿಸಿ ದಕ್ಷಿಣ ಏಷ್ಯಾದ ಎಲ್ಲಾ ದೇಶಗಳು ಜಿಎಚ್‌ಐ ಪಟ್ಟಿಯಲ್ಲಿ ಭಾರತಕ್ಕಿಂತ ಮೇಲಿನ ಸ್ಥಾನದಲ್ಲಿವೆ. ಇದೇ ಜುಲೈನಲ್ಲಿ, ಐದು ವಿಶ್ವಸಂಸ್ಥೆಯ ಸಂಘಟನೆಗಳು ಜಂಟಿಯಾಗಿ ಬಿಡುಗಡೆ ಮಾಡಿದ 'ಆಹಾರ ಭದ್ರತೆ ಮತ್ತು ಪೋಷಣಾಂಶ ಸ್ಥಿತಿ'ಯ ವರದಿಯು 2019–21 ಮತ್ತು 2020–22 ರ ನಡುವೆ, ಮಧ್ಯಮ ಅಥವಾ ತೀವ್ರ ಆಹಾರ ಅಭದ್ರತೆಯನ್ನು ಎದುರಿಸುತ್ತಿರುವ ಜನರ ಸಂಖ್ಯೆಯು ಭಾರತದಲ್ಲಿ 57 ಕೋಟಿಗಳಿಂದ 59 ಕೋಟಿಗೆ ಏರಿದೆ ಮತ್ತು ಬಹುಕಾಲದಿಂದ ಹಸಿವು ಎದುರಿಸುತ್ತಿರುವ ಜನರ ಸಂಖ್ಯೆ 22 ಕೋಟಿಯಿಂದ 23 ಕೋಟಿಗೆ ಏರಿತು ಎಂದು ತೋರಿಸಿದೆ.

ಜಿಎಚ್‌ಐ ವಿಷಯದಲ್ಲಿ ಭಾರತದ ಕುಸಿತವು ಕೋವಿಡ್ ಮಹಾಸೋಂಕಿನ ಸಂದರ್ಭದಲ್ಲಿ 2020 ರಲ್ಲಿ ಮೋದಿ ಸರ್ಕಾರವು ಯಾವುದೇ ಯೋಜನೆ ಇಲ್ಲದೆ ಹೇರಿದ ಕರಾಳ ಲಾಕ್‌ಡೌನ್ ಜನರ ಜೀವನದ ಮೇಲೆ ವಿನಾಶಕಾರಿ ಪರಿಣಾಮವನ್ನು ಬೀರಿದೆ ಎಂಬುದನ್ನು ಮತ್ತೊಮ್ಮೆ ತೋರಿಸಿದೆ. ಸಾಂಕ್ರಾಮಿಕ ಮತ್ತು ಲಾಕ್‌ಡೌನ್‌ನಿಂದ ಉಂಟಾದ ಜೀವನೋಪಾಯಗಳ ಹಾನಿಯ ಪ್ರತಿಕೂಲ ಪರಿಣಾಮವನ್ನು ತಡೆಗಟ್ಟಲು ಮೋದಿ ಸರ್ಕಾರ ಅಗತ್ಯ ಕಲ್ಯಾಣ ಕಾರ್ಯಕ್ರಮಗಳನ್ನು ತರಲಿಲ್ಲ. ಗೋದಾಮುಗಳಲ್ಲಿ 10 ಕೋಟಿ ಟನ್‌ಗೂ ಹೆಚ್ಚು ಧಾನ್ಯಗಳಿದ್ದರೂ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ವ್ಯಾಪ್ತಿಯನ್ನು ವಿಸ್ತರಿಸಲು ಮತ್ತು ಸಾಂಕ್ರಾಮಿಕದ ಸಮಯದಲ್ಲಿ ಆಹಾರ ವಸ್ತುಗಳ ಲಭ್ಯತೆಯನ್ನು ಸಾರ್ವತ್ರಿಕಗೊಳಿಸಲು ಮೋದಿ ಸರ್ಕಾರ ನಿರಾಕರಿಸಿತು ಎಂಬುದನ್ನು ನೆನಪಿಸಿಕೊಳ್ಳಬೇಕಾಗಿದೆ ಎಂದಿರುವ ಎಐಕೆಎಸ್ ಭಾರತದಲ್ಲಿ ಆಹಾರದ ಅಭದ್ರತೆಯ ಪರಿಸ್ಥಿತಿಯ ನಿರಂತರವಾಗಿ ಹದಗೆಡುತ್ತಿರುವುದು ಭಾರತೀಯ ಜನರ ಬಗ್ಗೆ ಮೋದಿ ಸರ್ಕಾರದ ಉದಾಸೀನತೆ ಮತ್ತು ನಿರಾಸಕ್ತಿಯ ಪರಿಣಾಮವಾಗಿದೆ ಎಂದು ಅಭಿಪ್ರಾಯ ಪಟ್ಟಿದೆ.

ಭಾರತದಲ್ಲಿ ಲಕ್ಷಾಂತರ ಜನರು ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟು ಮತ್ತು ನಿರ್ದಿಷ್ಟವಾಗಿ ಕೃಷಿ ಬಿಕ್ಕಟ್ಟಿನ ಗಹನತೆಯನ್ನು ಗುರುತಿಸುವ ಬದಲು ಹಾಗೂ ಭಾರತದಲ್ಲಿ ಬಡತನ ಮತ್ತು ಆಹಾರದ ಅಭದ್ರತೆಯನ್ನು ನಿವಾರಿಸಲು ಕೆಲಸ ಮಾಡುವ ಬದಲು, ಮೋದಿ ಸರಕಾರ ಮಾಡಿದ ಕೆಲಸವೆಂದರೆ ಸಮೀಕ್ಷೆಗಳನ್ನು ನಡೆಸುವುದನ್ನು ನಿಲ್ಲಿಸುವುದು, ಎಲ್ಲಾ ಸ್ವತಂತ್ರ ಪುರಾವೆಗಳನ್ನು ತಿರಸ್ಕರಿಸುವುದು ಮತ್ತು ಸರ್ಕಾರದ ವೈಫಲ್ಯವನ್ನು ಬಯಲಿಗೆ ತಂದವರನ್ನು ಜೈಲಿಗಟ್ಟುವುದು.

ದೇಶದಲ್ಲಿ ನಿರುದ್ಯೋಗ, ಬಡತನ ಮತ್ತು ಆಹಾರದ ಅಭದ್ರತೆಯ ಪರಿಸ್ಥಿತಿ ಹದಗೆಟ್ಟಿದೆ ಎಂಬುದನ್ನು ಒಪ್ಪಿಕೊಳ್ಳಲು ನಿರಾಕರಿಸುವ ಮೋದಿ ಸರ್ಕಾರವು ಕಲ್ಯಾಣ ವೆಚ್ಚಗಳನ್ನು ಸತತವಾಗಿ ಕಡಿಮೆ ಮಾಡುತ್ತ ಬಂದಿದೆ. ಕಳೆದ ಬಜೆಟ್‌ನಲ್ಲಿ ಕೇಂದ್ರ ಸರ್ಕಾರವು ಆಹಾರ ಸಬ್ಸಿಡಿಯಲ್ಲಿ 90,000 ಕೋಟಿ ರೂ. ಕಡಿತ ಮಾಡಿತು. ಇತರ ಸಾಮಾಜಿಕ ಕಲ್ಯಾಣ ಯೋಜನೆಗಳ ವೆಚ್ಚವನ್ನು ಸಹ ತೀವ್ರವಾಗಿ ಕಡಿತಗೊಳಿಸಲಾಯಿತು. ಉದಾಹರಣೆಗೆ, ಮನರೇಗಕ್ಕೆ ಹಂಚಿಕೆಯನ್ನು ಶೇಕಡಾ 30 ರಷ್ಟು ಕಡಿತಗೊಳಿಸಲಾಯಿತು ಎಂಬ ಸಂಗತಿಯತ್ತ ಗಮನ ಸೆಳೆದಿರುವ ಅಖಿಲ ಭಾರತ ಕಿಸಾನ್ ಸಭಾ, ಈ ಜನವಿರೋಧಿ ಸರಕಾರವನ್ನು ಸೋಲಿಸಲು ಮುಂಬರುವ ತಿಂಗಳುಗಳಲ್ಲಿ ಎಐಕೆಎಸ್ ರೈತ ಸಮೂಹವನ್ನು ಅಣಿನೆರೆಸಲಿದೆ, ಮೋದಿ ಸರ್ಕಾರವು ತನ್ನ ಜನವಿರೋಧಿ ನೀತಿಗಳು ಮತ್ತು ಅದು ಜನರ ಮೇಲೆ ಹೇರಿದ ದುಃಸ್ಥಿತಿಗೆ ಉತ್ತರಕೊಡಬೇಕಾಗಿ ಬರಲಿದೆ ಎಂದು ಎಚ್ಚರಿಸಿದೆ.

ಭಾರತ ಸರಕಾರದ ಆಕ್ಷೇಪಣೆ–ತಿರಸ್ಕಾರ


ಈ ವರದಿಯ ಪ್ರಕಾರ, ಭಾರತವು ವಿಶ್ವದಾದ್ಯಂತ ಅತಿ ಹೆಚ್ಚು ಮಕ್ಕಳ 'ಕ್ಷೀಣಿಸುವಿಕೆ' (ವೇಸ್ಟಿಂಗ್–ಎತ್ತರಕ್ಕೆ ಕಡಿಮೆ ತೂಕ) ದರವನ್ನು ಹೊಂದಿದೆ, ಇದು 18.7%, ಇದು ತೀವ್ರವಾದ ಅಪೌಷ್ಟಿಕತೆಯನ್ನು ಪ್ರತಿಬಿಂಬಿಸುತ್ತದೆ. ಒಂದು ದೇಶವು ಶೇ. 15 ಕ್ಕಿಂತ ಹೆಚ್ಚು ಮಕ್ಕಳನ್ನು ಈ ವಿಧದಲ್ಲಿ ಹೊಂದಿದ್ದರೆ, ಅದನ್ನು ವರದಿಯಲ್ಲಿ 'ಅತಿ ಹೆಚ್ಚು' ಅಪಾಯದ ವಿಭಾಗದಲ್ಲಿ ಇಡಲಾಗುತ್ತದೆ.

ಕುಂಠಿತ ಬಾಲ್ಯ (ಸ್ಟಂಟಿಂಗ್–ವಯಸ್ಸಿಗೆ ಕಡಿಮೆ ಎತ್ತರ)ದ ಪ್ರಮಾಣ ಶೇ. 35 ಕ್ಕಿಂತ ಹೆಚ್ಚಿದ್ದು, ಇದೂ 'ಅತಿ ಹೆಚ್ಚು' ಅಪಾಯದ ವಿಭಾಗದಲ್ಲಿ ಬರುತ್ತದೆ.

ಭಾರತದ ಅಪೌಷ್ಟಿಕತೆಯ ಮಟ್ಟ ಒಟ್ಟಾರೆ ಜನಸಂಖ್ಯೆಯ ಸುಮಾರು 16.6% ರಷ್ಟಿದ್ದು, ಇದನ್ನು 'ಮಧ್ಯಮ' ಅಪಾಯವೆಂದು ಗುರುತಿಸಲಾಗಿದೆ.

5 ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣ ಶೇ. 3.1 ಇದ್ದು, ಭಾರತವನ್ನು 'ಕಡಿಮೆ ಅಪಾಯ' ವಿಭಾಗದಲ್ಲಿ ಇಡಲಾಗಿದೆ.

15–24 ವರ್ಷ ವಯಸ್ಸಿನ ಮಹಿಳೆಯರಲ್ಲಿ ರಕ್ತಹೀನತೆ ದೇಶದ ಪ್ರಮುಖ ಸಮಸ್ಯೆ ಎಂದು ವರದಿಯಾಗಿದೆ. ದೇಶದಲ್ಲಿ ಶೇ. 50 ಕ್ಕಿಂತ ಹೆಚ್ಚು ಮಹಿಳೆಯರು ಮತ್ತು ಹದಿಹರೆಯದವರು ರಕ್ತಹೀನತೆಯಿಂದ ಬಳಲುತ್ತಿದ್ದಾರೆ.




ಭಾರತ ಸರ್ಕಾರವು ಹಿಂದಿನ ಸಂದರ್ಭಗಳಲ್ಲಿ ಮಾಡಿದಂತೆ ಈ ವರ್ಷವೂ ಈ ವರದಿಯನ್ನು ತಿರಸ್ಕರಿಸಿದೆ. ಅಕ್ಟೋಬರ್ 12 ರಂದು ಹೇಳಿಕೆಯನ್ನು ಹೊರಡಿಸಿದ ಸರ್ಕಾರವು ವರದಿಯನ್ನು ಸಿದ್ಧಪಡಿಸುವ ವಿಧಾನವು ದೋಷಪೂರಿತವಾಗಿದೆ ಎಂದು ಕರೆದಿದೆ ಮತ್ತು ನಾಲ್ಕು ನಿಯತಾಂಕಗಳ ಆಯ್ಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದೆ.

ಆದರೆ ಹಸಿವಿನ ಸೂಚ್ಯಂಕದ ವರದಿ ತಯಾರಿಸಿದವರು ಭಾರತ ಸರ್ಕಾರದ ಆರೋಪಗಳನ್ನು ನಿರಾಕರಿಸಿದ್ದಾರೆ. ಈ ಸೂಚ್ಯಂಕವನ್ನು ಲೆಕ್ಕ ಹಾಕಲು ಬಳಸಿರುವ ವಿಧಾನದ ಬಗ್ಗೆ ಬೇರಾವ ದೇಶವೂ ಆಕ್ಷೇಪ ವ್ಯಕ್ತಪಡಿಸಿಲ್ಲ ಎಂದೂ ಅವರು ಹೇಳಿದ್ದಾರೆ.

ಪೌಷ್ಟಿಕತೆಯ ಕ್ಷೇತ್ರದಲ್ಲಿ ಭಾರತದ ಕಳಪೆ ಪ್ರದರ್ಶನವನ್ನು ಇತರ ವರದಿಗಳೂ ಗಮನಿಸಿವೆ. ಎಐಕೆಎಸ್ ಹೇಳಿಕೆಯಲ್ಲಿ ತಿಳಿಸಿರುವಂತೆ, ಇದೇ ಜುಲೈನಲ್ಲಿ, ಐದು ವಿಶ್ವಸಂಸ್ಥೆಯ ಸಂಘಟನೆಗಳು ಜಂಟಿಯಾಗಿ ಬಿಡುಗಡೆ ಮಾಡಿದ 'ಆಹಾರ ಭದ್ರತೆ ಮತ್ತು ಪೋಷಣಾಂಶ ಸ್ಥಿತಿ'ಯ ವರದಿಯು (ಎಸ್‌ಒಎಫ್‌ಐ–2023) ಕೂಡ ಭಾರತದ ಜನಸಂಖ್ಯೆಯ ಶೇ. 74.1 ಜನರು ಆರೋಗ್ಯಕರ ಆಹಾರವನ್ನು ಪಡೆಯಲು ಅಸಮರ್ಥರಾಗಿದ್ದಾರೆ ಎಂದು ಹೇಳಿದೆ. ನೇಪಾಳ, ಪಾಕಿಸ್ತಾನ, ಸಿಯೆರಾ ಲಿಯೋನ್, ನೈಜೀರಿಯಾ, ನೈಜರ್, ಬುರ್ಕಿನಾ–ಫಾಸೊ, ಘಾನಾ, ಲೈಬೀರಿಯಾ, ಗಿನಿಯಾ ಮತ್ತು ಗಿನಿಯಾ ಬಿಸ್ಸೌ ದೇಶಗಳಲ್ಲಿ ಮಾತ್ರ ಆರೋಗ್ಯಕರ ಆಹಾರವನ್ನು ಪಡೆಯಲು ಸಾಧ್ಯವಾಗದ ಜನಸಂಖ್ಯೆಯ ಪ್ರಮಾಣ ಇದಕ್ಕಿಂತ ಹೆಚ್ಚಿದೆ.

ಈ ವರದಿಯು ಭಾರತದಲ್ಲಿ 23.39 ಕೋಟಿಜನರು 'ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆ' ಎಂದೂ ಹೇಳಿದೆ. ಅಪೌಷ್ಟಿಕತೆ ಎಂದರೆ, ಒಬ್ಬ ವ್ಯಕ್ತಿಯ ಎಂದಿನ ಆಹಾರ ಸೇವನೆ ಸಾಮಾನ್ಯ, ಸಕ್ರಿಯ ಮತ್ತು ಆರೋಗ್ಯಕರ ಜೀವನವನ್ನು ನಡೆಸಲು ಅಗತ್ಯವಿರುವ ಶಕ್ತಿಯ ಪ್ರಮಾಣವನ್ನು ಒದಗಿಸಲು ಸಾಕಾಗದ ಮಟ್ಟದಲ್ಲಿರುವುದು ಎಂದು ಈ ವರದಿ ನಿರೂಪಿಸುತ್ತದೆ.



ಮನರೇಗಕ್ಕೆ ಹಂಚಿಕೆ ಕಡಿತದ ಪರಿಣಾಮ–6 ತಿಂಗಳಲ್ಲೇ ಬಜೆಟ್ ಹಣ ಖಾಲಿ!

ಈ ಹಣಕಾಸು ವರ್ಷಕ್ಕೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ(ಮನರೇಗ)ಕ್ಕೆ ಬಜೆಟಿನಲ್ಲಿ ಹಂಚಿಕೆಯಾಗಿರುವ 60,000 ಕೋಟಿ ರೂಪಾಯಿನಲ್ಲಿ ಸುಮಾರು ಶೇ. 93 ಅನ್ನು ವರ್ಷದ ಮೊದಲಾರ್ಧದಲ್ಲಿ ಬಳಸಲಾಗಿದೆ ವರದಿಯಾಗಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಗ್ರಾಮೀಣ ಉದ್ಯೋಗಯೋಜನೆಯಡಿ ಕೆಲಸ ಮಾಡುವ ಬೇಡಿಕೆಯೂ ಹೆಚ್ಚಿದ್ದು, ಕೈಗಾರಿಕಾ ರಂಗದಲ್ಲಿ ಚೇತರಿಕೆಯಾಗುತ್ತಿದೆ ಎಂಬ ಸರಕಾರದ ದಾವೆಯ ಬಗ್ಗೆಯೂ ಪ್ರಶ್ನೆಗಳನ್ನು ಎಬ್ಬಿಸಿದೆ.

ಪರಿಣಾಮವಾಗಿ, ಗ್ರಾಮೀಣಾಭಿವೃದ್ಧಿ ಸಚಿವಾಲಯವು ಈ ಆರ್ಥಿಕ ವರ್ಷದುದ್ದಕ್ಕೂ ಯೋಜನೆಯನ್ನು ನಡೆಸಲು "ಗಣನೀಯ" ಪೂರಕ ಹಣವನ್ನು ಹುಡುಕುತ್ತಿದೆ ಎಂದೂ ವರದಿಯಾಗಿದೆ.

ಯೋಜನೆಯಡಿಯಲ್ಲಿ ನಿರ್ಮಾಣಗೊಂಡಿರುವ ಕೆಲಸದ ಪ್ರಮಾಣ ಏಪ್ರಿಲ್ ಮತ್ತು ಸೆಪ್ಟಂಬರ್ ನಡುವೆ ಸುಮಾರು 187 ಕೋಟಿ ವ್ಯಕ್ತಿ–ದಿನಗಳಿಗೆ ಏರಿದೆ, ಅಂದರೆ ಹಿಂದಿನ ವರ್ಷಕ್ಕಿಂತ ಸುಮಾರು ಶೇ. 9 ರಷ್ಟು ಏರಿಕೆ ಉಂಟಾಗಿದೆ.

ಹಿಂದಿನ ವರ್ಷಕ್ಕೆ ಹೋಲಿಸಿದರೆ 2023 ರಲ್ಲಿ ಸೆಪ್ಟಂಬರ್ ವರೆಗೆ ಯೋಜನೆಯ ಅಡಿಯಲ್ಲಿ ಕೆಲಸ ಮಾಡಲು ಆಯ್ಕೆ ಮಾಡಿದ ವ್ಯಕ್ತಿಗಳ ಸಂಖ್ಯೆಯು ಶೇ. 4.6 ರಷ್ಟು 19 ಕೋಟಿಗೆ ಹೆಚ್ಚಾಗಿದೆ. ಹೆಚ್ಚುವರಿಯಾಗಿ, 15 ಕೋಟಿ ಕುಟುಂಬಗಳ ಸದಸ್ಯರು ಮೊದಲ ತ್ರೈಮಾಸಿಕದಲ್ಲಿ ಈ ಯೋಜನೆಯ ಅಡಿಯಲ್ಲಿ ಕೆಲಸ ಕೇಳಿದ್ದಾರೆ. ಇದು ಹಿಂದಿನ ವರ್ಷಕ್ಕಿಂತ ಶೇ. 8.5 ಹೆಚ್ಚಾಗಿದೆ ಎಂದು ಎಕನಾಮಿಕ್ ಟೈಮ್ಸ್ ವರದಿ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಪರಿಷ್ಕೃತ ಅಂದಾಜಿನ 89,400 ಕೋಟಿ ರೂ.ಗಿಂತ ಈ ವರ್ಷದ ಹಂಚಿಕೆ ಶೇ. 32 ಕಡಿಮೆ ಮತ್ತು 1,11,500 ರೂ.ಗಳ 2020–21ರ ಬಜೆಟ್ ಅಂದಾಜಿನ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಎಂದು ಡೆಕ್ಕನ್ ಹೆರಾಲ್ಡ್ ವರದಿ ಮಾಡಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಮ್ಮ ಸಮಾಜದ ಅತಿ ಬಡ ವಿಭಾಗಕ್ಕೆ ಜೀವನೋಪಾಯ ಕಲ್ಪಿಸುವ ಈ ಯೋಜನೆಗೆ ಈ ವರ್ಷ ನೀಡಿರುವ ಹಣ ಒಟ್ಟು ಜಿಡಿಪಿಯ ಶೇ. 0.2 ದಷ್ಟು ಮಾತ್ರ, ಇದು ಮನರೇಗಕ್ಕೆ ನೀಡಿರುವ ಅತಿ ಕಡಿಮೆ ಹಂಚಿಕೆ ಎನ್ನಲಾಗಿದೆ.

ಸಂಪಾದಕೀಯ

ಭೀಕರ ಬರದತ್ತ ರಾಜ್ಯ ಕೇಂದ್ರದ ಅನಾದಾರ

ರಾಜ್ಯದಲ್ಲಿ ಮುಂಗಾರು ಕೈಕೊಟ್ಟ ಬೆನ್ನಲ್ಲೇ ಈಗ ಹಿಂಗಾರು ಕೂಡ ಕ್ಷೀಣವಾಗಲಿದೆ ಎಂದು ತಜ್ಞರು ಹೇಳುತ್ತಿರುವುದು ಆತಂಕದ ಸಂಗತಿಯಾಗಿದೆ. ಸದ್ಯಕ್ಕೆ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆ ಬಂದಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಗಂಭೀರವಾಗಲಿದೆ.

ರಾಜ್ಯದಲ್ಲಿ ಬರಗಾಲದಿಂದ ಉಂಟಾಗಿರುವ ಬೆಳೆಹಾನಿಗೆ ಪರಿಹಾರ ನೀಡುವಲ್ಲಿ ಕೇಂದ್ರ ಸರ್ಕಾರ ಅನಾದಾರ ತೋರುತ್ತಿರುವುದು ಆಕ್ಷೇಪಾರ್ಹವಾಗಿದೆ. ಬರಪೀಡಿತ ಪ್ರದೇಶಗಳಿಗೆ ಬೇಟಿ ನೀಡಿ ಪರಿಶೀಲನೆ ನಡೆಸಿರುವ ಕೇಂದ್ರ ಅಧ್ಯಯನ ತಂಡ ರಾಜ್ಯದ ಬರಪೀಡಿತ ಪ್ರದೇಶಗಳಿಗೆ ಮೂರು ತಂಡಗಳಾಗಿ ಬೇಟಿ ನೀಡಿದ್ದಾರೆ. ಆದರೆ, ಬೆಳೆಹಾನಿಗೆ ಪರಿಹಾರ ನೀಡುವ ಕುರಿತಂತೆ ಕೇಂದ್ರ ಸರಕಾರ ಸಕಾರಾತ್ಮಕವಾಗಿ ಸ್ಪಂಧಿಸುತ್ತಿಲ್ಲ. ಈ ಮೊದಲು 195 ತಾಲೂಕುಗಳನ್ನು ಬರಪೀಡಿತ ತಾಲೂಕುಗಳೆಂದು ಘೋಷಿಸಲಾಗಿತ್ತು. ಎರಡನೇ ಹಂತದಲ್ಲಿ ಹೆಚ್ಚುವರಿಯಾಗಿ 21 ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಲಾಯ್ತು. ಆದರೆ, ರಾಜ್ಯದ ಬರಪರಿಹಾರ ಸಂಬಂಧ ಕೇಂದ್ರಕ್ಕೆ ಸಲ್ಲಿಸಲಾದ ಮನವಿಗೆ ಕೇಂದ್ರದ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ಸ್ಪಂಧಿಸುತ್ತಿಲ್ಲ.

ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ನಷ್ಟ ಅಂದಾಜು 33,770 ಕೋಟಿ ಆಗುತ್ತದೆ. ಕೇಂದ್ರ ಸರ್ಕಾರದ ಮಾನದಂಡಗಳ ಅನ್ವಯ 4,414 ಕೋಟಿ ರೂ.ಗಳಿಗೆ ಕೃಷಿ ನಷ್ಟ ಪರಿಹಾರಕ್ಕೆ ಪ್ರಸ್ತಾವ ಇಡಲಾಗಿದೆ. ಪಶುಸಂಗೋಪನೆಗೆ 355 ಕೋಟಿ ರೂ. ಗಳ ಬೇಡಿಕೆ ಇಡಲಾಗಿತ್ತು. ಒಟ್ಟು 5,325.87 ಕೋಟಿ ರೂ.ಗಳನ್ನು ಕೇಂದ್ರದಿಂದ ನೀಡಲು ಒತ್ತಾಯಿಸಲಾಗಿತ್ತು. ಆದರೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕರ್ನಾಟಕಕ್ಕೆ ನೀಡಬೇಕಾದ ಆರ್ಥಿಕ ನೆರವು ನೀಡಲು ಮುಂದಾಗಲಿಲ್ಲ. ಕೇಂದ್ರ ಬರ ಅಧ್ಯಯನ ತಂಡವು ಉತ್ತರದ ಕೆಲವು ಜಿಲ್ಲೆಗಳಲ್ಲಿ ಬರಗಾಲ ಪರಸ್ಥಿತಿಯ ಸಮೀಕ್ಷೆ ನಡೆಸಿತ್ತು. ಬಾಗಲಕೋಟೆ, ವಿಜಯನಗರ, ಧಾರವಾಡ ಮೊದಲಾದ ಕೆಲವು ಜಿಲ್ಲೆಗಳ ಕೆಲವು ಗ್ರಾಮಗಳಿಗೆ ಬೇಟಿ ನೀಡಿ, ಹಾಳಾದ ಬೆಳೆಗಳನ್ನು ವೀಕ್ಷಣೆ ಮಾಡಿತ್ತು. ಸಾಲ ಮಾಡಿ ಬೆಳೆದ ಬೆಳೆ ಮಳೆಯಿಲ್ಲದೆ ಹಾನಿಗೊಳಗಾದ ರೈತರ ಸಂಕಷ್ಟ ಪರಿಸ್ಥಿತಿಯನ್ನು ಪರಿಶೀಲಿನೆ ಮಾಡಿತ್ತು. ಕೆಲವು ಕಡೆ ರೈತರೇ ಮುಂದೆ ಬಂದು ತಮ್ಮ ಸಂಕಷ್ಟದ ಪರಿಸ್ಥಿತಿಯನ್ನು ಅಧಿಕಾರಿಗಳಿಗೆ ಮನವರಿಕೆ ಮಾಡಿದರು. ಆದರೆ, ಅದರಿಂದ ಏನೂ ಪ್ರಯೋಜನ ಆಗಲಿಲ್ಲ. ನೆಲಕ್ಕೆ ಬಿತ್ತಿದ ಕಾಳನ್ನು ತೋರಿಸಿ ರೈತರು ತಮ್ಮ ಚಿಂತಾಜನಕ ಪರಿಸ್ಥಿತಿಯನ್ನು ಕೇಂದ್ರದ ತಂಡಕ್ಕೆ ಮನವರಿಕೆ ಮಾಡಿದರೂ ಅಧಿಕಾರಿಗಳು ಸ್ಪಂಧಿಸಲಿಲ್ಲ. ಕೆಲವು ಕಡೆ ಕಾಟಾಚಾರಕ್ಕೆ ರೈತರನ್ನು ಉದ್ದೇಶಿಸಿ ಮಾತನಾಡಿದ ತಂಡದ ನಡೆ ರೈತರ ಕೋಪಕ್ಕೆ ಕಾರಣವಾಯಿತು. ನೊಂದ ರೈತರು ತಮ್ಮ ನಷ್ಟವನ್ನು ವಿವರಿಸಿ ಕಣ್ಣೀರು ಹಾಕಿದರು. ಕನಿಷ್ಟ 30 ಸಾವಿರ ಕೋಟಿ ರೂ. ಮೌಲ್ಯದ ಫಸಲು ನಾಶವಾಗಿದೆ.

ರೈತರಿಗೆ ಗರಿಷ್ಠ ಬೆಳೆ ಪರಿಹಾರ ನೀಡಬೇಕು. ನರೇಗಾ ಯೋಜನೆ ಅಡಿಯಲ್ಲಿ ಪ್ರತಿಯೊಬ್ಬ ಕೃಷಿಕಾರ್ಮಿಕರಿಗೆ 150 ದಿನಗಳ ಕೆಲಸ ಕೊಡಬೇಕು. ಪ್ರತಿ ದುಡಿಮೆಗಾರರಿಗೆ ದಿನಕ್ಕೆ ತಪ್ಪದೆ 200 ರೂ. ವೇತನ ನೀಡಬೇಕು. ಪ್ರತಿಯೊಬ್ಬ ದುಡಿಮೆಗಾರರಿಗೆ ಕಾಮಗಾರಿಯನ್ನು ಒದಗಿಸಬೇಕು. ಮಳೆಯ ಕೊರತೆಯಿಂದ ಜನರು ಸಂಕಷ್ಟ ಅನುಭವಿಸುವುದು ಹೊಸದೇನಲ್ಲ. ಅವರನ್ನು ಪರೀಕ್ಷೆಗೆ ಒಳಪಡಿಸಬಾರದು. ಸರ್ಕಾರ ಅವರ ಬದುಕಿನ ಬಗ್ಗೆ ಚಿಂತನೆ ನಡೆಸಲಿ. ಕುಡಿಯುವ ನೀರು ಮತ್ತು ದನಕರುಗಳಿಗೆ ಮೇವು ಒದಗಿಸಲು ಸರ್ಕಾರ ಅಗತ್ಯ ಹಣಕಾಸು ಪೂರೈಸಬೇಕು. ಪ್ರತಿಯೊಂದು ಗ್ರಾಮದಲ್ಲಿ ಗ್ರಾಮಸಭೆ ನಡೆಸಿ ಬರಪೀಡಿತ ಜನರ ಸಮಸ್ಯೆಗಳನ್ನು ಪಟ್ಟಿಮಾಡಬೇಕು. ಪಡಿತರ ಮೂಲಕ ಆಹಾರ ದಾನ್ಯಗಳನ್ನು ಒದಗಿಸಬೇಕು. ಸರ್ಕಾರಿ ಶಾಲೆಗಳನ್ನು ಮುಂದುವರಿಸಬೇಕು. ಕೇಂದ್ರ–ರಾಜ್ಯ ಸರ್ಕಾರಗಳು ಪರಸ್ಪರ ದೂಷಣೆ ಮಾಡುವುದನ್ನು ಬಿಟ್ಟು ಬರಪೀಡಿತ ಜನರಿಗೆ ಪರಿಹಾರ ನೀಡುವತ್ತ ಗಮನಹರಿಸಬೇಕು. ಗ್ರಾಮೀಣ ಪ್ರಧೇಶದಲ್ಲಿರುವ ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿಗೆ ನೆರವು ನೀಡಬೇಕು. ರಸಗೊಬ್ಬರ ಒದಗಿಸಲು 200 ಕೋಟಿ ರೂ. ಮತ್ತು ಬೀಜ ನಿಗಮಕ್ಕೆ 200 ಕೋಟಿ ರೂ. ಒದಗಿಸಬೇಕು. ರೈತರು ನಿರ್ಗತಿಕರಾಗುವುದನ್ನು ತಪ್ಪಿಸಬೇಕು. ರಾಜ್ಯ ಸರ್ಕಾರಕ್ಕೆ ಕೇಂದ್ರದಿಂದ ಕೋರಿಕೆಗೆ ತಕ್ಕಂತೆ ಅಗತ್ಯ ಪರಿಹಾರವನ್ನು ವಿಳಂಬ ಮಾಡದೆ ಕೊಡಬೇಕು. ರಾಜ್ಯ ಸರ್ಕಾರ ಕೋರಿರುವ ಪ್ರಮಾಣದಲ್ಲಿ ಗರಿಷ್ಠ ಪ್ರಮಾಣದ ಪರಿಹಾರವನ್ನು ವಿಳಂಬ ಮಾಡದೆ ಸಂದಾಯ ಮಾಡಬೇಕು. ಯಾವುದೇ ರೀತಿಯ ಪಕ್ಷಪಾತ ಮಾಡದೆ ರಾಜ್ಯಕ್ಕೆ ಪರಿಹಾರ ದೊರಕಿಸಬೇಕು. ಪದೇ ಪದೆ ಎದುರಾಗುತ್ತಿರುವ ಬರವನ್ನು ಎದುರಿಸಿ ಹಿಮ್ಮೆಟ್ಟಿಸಲು ಚಿಕ್ಕ ನೀರಾವರಿ ಯೋಜನೆಗಳನ್ನು ಕೈಗೊಳ್ಳಬೇಕು ಮಾತ್ರವಲ್ಲ ಪೂರ್ಣಗೊಳ್ಳುವ ನೀರಾವರಿ ಯೋಜನೆಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಬೇಕು.

ಬಿಜೆಪಿಯೊಂದಿಗೆ ಜೆಡಿಎಸ್ ನ ಮೈತ್ರಿ ವಿರೋಧದ ಬಲ ಬೆಳೆದೀತೇ?

ಈ ವಾರ

ಎಸ್.ವೈ.ಗುರುಶಾಂತ್

ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡ ಜೆಡಿಎಸ್ ಪಕ್ಷದ ನಾಯಕರ ನಿಲುವಿನ ಬಗ್ಗೆ ಅವರೊಳಗೆ ಇದ್ದ ವಿರೋಧ ಮತ್ತು ತಳಮಳಗಳು ಸಾರ್ವಜನಿಕವಾಗಿ ಸಂಘಟನಾತ್ಮಕ ಸಂಘರ್ಷದ ಸ್ವರೂಪದಲ್ಲಿ ವ್ಯಕ್ಯವಾಗುತ್ತಿವೆ. ಈ ಮೈತ್ರಿ ಕುರಿತು ಪಕ್ಷದೊಳಗಡೆಯಲ್ಲಿ ಚರ್ಚೆಯಾಗಿಲ್ಲ ನಿರ್ಧಾರವನ್ನು ಕೈಗೊಂಡಿಲ್ಲ ಎನ್ನುವುದರ ಮೂಲಕ ಪಕ್ಷದ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ ರವರು ಅದರ ಸಂಪೂರ್ಣ ಹೊಣೆಯನ್ನು ಕುಮಾರಸ್ವಾಮಿಯವರ ಮೇಲೆ ಹೊರಸಿದ್ದರು. ಮಾತ್ರವಲ್ಲ, ಈ ಕುರಿತಾದಂತೆ 'ತಂದೆಯ ಸಮಾನರಾಗಿರುವ ಹಿರಿಯ ನಾಯಕರಾದ ದೇವೇಗೌಡರವರು ಸಹ ಮರು ಆಲೋಚನೆ ಮಾಡಬೇಕು ಮತ್ತು ಮಾರ್ಗದರ್ಶನ ನೀಡಬೇಕು' ಎಂದು ಸಹ ಹೇಳಿದ್ದರು. ಈ ಮೂಲಕ ಆಗಲೇ ಪಕ್ಷದ ಒಳಗೆ ಇದ್ದ ಅಲ್ಪಸಂಖ್ಯಾತ ಸಮುದಾಯದ ಬಹಳಷ್ಟು ಮುಖಂಡರು ಪಕ್ಷ ತೊರೆಯುವ, ಬಿಜೆಪಿಯೊಂದಿಗಿನ ಮೈತ್ರಿಯನ್ನು ವಿರೋಧಿಸುವ ಇಂಗೀತವನ್ನು ವ್ಯಕ್ತಪಡಿಸಿದ್ದರು. ಅಂತಹ ನಿರ್ಧಾರ ಕೈಗೊಂಡು ಶಾಲು ಹೊಂದಿಸಿಕೊಂಡು ಕುಮಾರಸ್ವಾಮಿ ಅವರು ವಾಪಸ್ ಆದ ಕೂಡಲೇ ಕೆಲವರು ಹೊರ ನಡೆದಿದ್ದರು. ಈ ಪ್ರಕ್ರಿಯೆಗೆ ಇಂಬು ಕೊಡುವಂತೆ ಸಿ.ಎಂ. ಇಬ್ರಾಹಿಂ ರವರು ಬಹಿರಂಗವಾಗಿಯೇ ಈ ಮೈತ್ರಿಯನ್ನು ವಿರೋಧಿಸಿದ್ದರು. ಸಿಎಂ ಇಬ್ರಾಹಿಂ ರವರ ಈ ನಡೆಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದ ಕುಮಾರಸ್ವಾಮಿ ಯವರು ಮುಖಂಡರೊಂದಿಗೆ ಸಮಾಲೋಚನೆ ಮಾಡುವ ಸಭೆಯನ್ನು ಕರೆದಿದ್ದ ಇಬ್ರಾಹಿಂ ರವರ ನಡೆಯನ್ನು ಗಂಭೀರವಾಗಿ ಪರಿಗಣಿಸಿದ್ದರು. ಇದೇ ಅಕ್ಟೋಬರ್ 16 ರಂದು ಇಬ್ರಾಹಿಂ ಕರೆದ ಸಮಾನ ಮನಸ್ಕರ ಸಭೆ ಮೈತ್ರಿಯನ್ನು ವಿರೋಧಿಸಿದ್ದು ಮಾತ್ರವಲ್ಲ ಅಖಿಲ ಭಾರತ ಮಟ್ಟದಲ್ಲಿ ಬಿಜೆಪಿಯನ್ನು ಸೋಲಿಸಲು ಇಂಡಿಯಾ ಮೈತ್ರಿಕೂಟದೊಂದಿಗೆ ಕೈಜೋಡಿಸುವುದಾಗಿಯೂ ತಿಳಿಸಿತ್ತು. ಮತ್ತು ತಮ್ಮದೇ ನಿಜವಾದ ಜಾತ್ಯಾತೀತ ಜನತಾದಳ ಎಂದು ಸಹ ಇಬ್ರಾಹಿಂ ರವರು ಘೋಷಿಸಿದ್ದರು. ಇದರಿಂದ ಕೆರಳಿದ್ದ ಮಾಜಿ ಮುಖ್ಯಮಂತ್ರಿ ಎಚ್ ಡಿ ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಮತ್ತೊಂದು ಸಭೆಯೂ ನಡೆಯಿತು ಮತ್ತು ರಾಷ್ಟ್ರೀಯ ಅಧ್ಯಕ್ಷರಾದ ಎಚ್ ಡಿ ದೇವೇಗೌಡ ರವರು ಸಿ.ಎಂ. ಇಬ್ರಾಹಿಂ ಅವರು ಅಧ್ಯಕ್ಷರಾಗಿದ್ದ ಇಡೀ ಘಟಕವನ್ನು ವಿಸರ್ಜಿಸಿ ಅಡ್ಹಾಕ್ ಸಮಿತಿಯೊಂದನ್ನು ರಚಿಸಿ ಎಚ್ ಡಿ ಕುಮಾರಸ್ವಾಮಿ ಅವರನ್ನು ಅಧ್ಯಕ್ಷರು ಎಂದು ಘೋಷಿಸಿದ್ದಾರೆ. ಈ ಕ್ರಮವನ್ನು ಜೆಡಿಎಸ್ ರಾಜ್ಯಾಧ್ಯಕ್ಷರಾಗಿರುವ ಸಿ.ಎಂ. ಇಬ್ರಾಹಿಂ ರವರು ತೀವ್ರವಾಗಿ ವಿರೋಧಿಸಿದ್ದಾರೆ ಮತ್ತು ಕಾನೂನಾತ್ಮಕವಾಗಿ ಈ ಬಗ್ಗೆ ಹೋರಾಟ ನಡೆಸುವುದಾಗಿಯೂ ತಿಳಿಸಿದ್ದಾರೆ.

ಮೈತ್ರಿಯ ವಿಷಯ ಎಲ್ಲಾ ಶಾಸಕರೊಂದಿಗೆ ಮತ್ತು ತಮ್ಮೊಂದಿಗೆ ಸಮಿತಿಯ ಸಮ್ಮುಖದಲ್ಲಿ ಚರ್ಚೆಯಾಗಿತ್ತು ಎನ್ನುವ ಎಚ್ ಡಿ ರೇವಣ್ಣ, ಕುಮಾರಸ್ವಾಮಿ ಹಾಗೂ ದೇವೇಗೌಡರ ಮಾತುಗಳನ್ನು ಇಬ್ರಾಹಿಂ ತೀವ್ರವಾಗಿ ವಿರೋಧಿಸಿದ್ದಾರೆ ಮತ್ತು ಅಲ್ಲಗೆಳೆದಿದ್ದಾರೆ. ಉತ್ತರ ವ್ಯಮೋಹಕ್ಕಾಗಿ ದೇವೇಗೌಡರಂತಹ ಹಿರಿಯರು ಸುಳ್ಳು ಆಡಬಾರದು ಎನ್ನುವುದನ್ನು ಹೇಳಿದ್ದಾರೆ. ಏನು ಎಂಬುದು ಅವರಿಗೇ ಗೊತ್ತು. ಹೀಗೆ ಜೆಡಿಎಸ್ ಪಕ್ಷದ ಒಳಗಡೆಯಲ್ಲಿ ಸಂಘಟನಾತ್ಮಕವಾದ ಒಂದು ಬಿಕ್ಕಟ್ಟು ಅಥವಾ ವಿರೋಧದ ಹೊಸ ಬೆಳವಣಿಗೆ ಸಂಘಟನಾ ಮಟ್ಟದಲ್ಲಿ ವ್ಯಕ್ತಗೊಂಡಿದೆ ಮತ್ತು ಪಕ್ಷ ಒಡೆಯುವ ಹಶದಿಯಲ್ಲಿರುವುದು ಕಾಣುತ್ತದೆ. ಈ ವಿಷಯದಲ್ಲಿ ಯಾರ ಬಲಾಬಲ ಎಷ್ಟು ಎನ್ನುವುದು ನಿರ್ದಿಷ್ಟವಾಗಿ ತಿಳಿಯದಿದ್ದರೂ ಸಿಎಂ ಇಬ್ರಾಹಿಂ ಅವರ ಜೊತೆಯಲ್ಲಿ ಎಷ್ಟು ಜನ ನಿಲ್ಲುತ್ತಾರೆ ಎನ್ನುವುದು ಒಂದು ಪ್ರಶ್ನೆಯೂ ಆಗಿದೆ. ಜೆ ಡಿ ಎಸ್ ಎಂದರೆ ದೇವೇಗೌಡರ ಕುಟುಂಬ ಮತ್ತು ಒಕ್ಕಲಿಗರ ಬೆಂಬಲದ ನೆಲೆ ಎನ್ನುವುದೇ ಹೆಚ್ಚಾಗಿ ಇಲ್ಲಿವರೆಗೂ ಕಂಡು ಬಂದಿರುವ ಅಂಶ. ವ್ಯಕ್ತಿಗತವಾಗಿ ಸಿಎಂ ಇಬ್ರಾಹಿಂ ರವರು ಬಿಜೆಪಿಯನ್ನು ನಿಜಕ್ಕೂ ವಿರೋಧಿಸುತ್ತಾರೆಯೇ ಎನ್ನುವ ಪ್ರಶ್ನೆಯನ್ನು ಎತ್ತಿರುವ ಕೆಲವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ಒಂದು ವೇಳೆ ಅವಕಾಶ ಸಿಕ್ಕರೆ ಬಿಜೆಪಿಯೊಂದಿಗೆ ಸೇರಿ ಸರ್ಕಾರವನ್ನು ಜೆಡಿಎಸ್

ರಚಿಸುವ ಬಗ್ಗೆ ಅವರಿಗೂ ಒಂದು ಒಲವು ಇತ್ತು ಅಲ್ಲವೇ ಎನ್ನುವ ಪ್ರಶ್ನೆಯನ್ನು ಕೇಳಿದ್ದಾರೆ. ಆದರೆ ಇಬ್ರಾಹಿಂ ಅಥವಾ ಅಂಥವರ ಅಂದಿನ ನಿಲುವುಗಳು ಇಂದಿನ ಬೆಳವಣಿಗೆಯಲ್ಲಿ ಎಷ್ಟು ಪ್ರಸ್ತುತತೆಯನ್ನು ಪಡೆಯುತ್ತವೆ ಎನ್ನುವುದಕ್ಕಿಂತ ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಳ್ಳುವ ಪ್ರಶ್ನೆಗೆ ವಿರೋಧದ ಶಕ್ತಿ ಹೇಗೆ ಹೆಚ್ಚುತ್ತದೆ ಎನ್ನುವುದು ಕೂಡ ಮುಖ್ಯವಾಗುತ್ತದೆ. ಸಿಎಂ ಇಬ್ರಾಹಿಂ ಮತ್ತು ಬಿಜೆಪಿಯನ್ನು ವಿರೋಧಿಸುವ ಅಂತಹದೇ ತಂಡ ಜೆಡಿಎಸ್ ಅನ್ನು ಅದರಲ್ಲಿರುವ ಕಾರ್ಯಕರ್ತರು ಮತ್ತು ಜನರನ್ನು ನಿಜಕ್ಕೂ ಸೆಕ್ಯುಲರ್ ಆಗಿ ಉಳಿಸಿಕೊಳ್ಳಲು ಅದೆಷ್ಟು ಪ್ರಯತ್ನ ಮಾಡಬಲ್ಲರು ಮತ್ತು ಸಫಲರಾಗಬಲ್ಲರು ಎನ್ನುವುದು ಕೂಡ ಮುಂದಿನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇಂತಹ ಸನ್ನಿವೇಶದಲ್ಲಿ ಮುಂದಿನ ಬೆಳವಣಿಗೆಗಳು ಯಾವ ಸ್ವರೂಪವನ್ನು ಪಡೆಯುತ್ತವೆ ಎನ್ನುವುದನ್ನು ನೋಡಬೇಕಿದೆ ಅಷ್ಟೇ.

* * *

ಕಾವೇರಿ ನೀರಿಗಾಗಿ ಕೂಗು ಗೌಣವಾದರೂ ಜನರ ಸಂಕಷ್ಟಕ್ಕೆ ಪರಿಹಾರ ಇಲ್ಲವೇ?

'ಕಾವೇರಿ ನೀರು ನಮ್ಮದು'
'ತಮಿಳುನಾಡಿಗೆ ಒಂದು ಹನಿ ನೀರನ್ನು ಬಿಡಕೂಡದು'
'ಅಯ್ಯಯ್ಯೋ ಅನ್ಯಾಯ'
'ನ್ಯಾಯಕ್ಕಾಗಿ ಹೋರಾಟ'

ಹೀಗೆ ಮಂಡ್ಯ, ಬೆಂಗಳೂರು ಪ್ರದೇಶಗಳಲ್ಲಿ ಪ್ರತಿದಿನವೂ ನಡೆಯುತ್ತಿದ್ದ ಹೋರಾಟ, ಕೇಳಿ ಬರುತ್ತಿದ್ದ ಘೋಷಣೆಗಳು ನಿಂತು ಮೂರು ವಾರಗಳೇ ಸರಿದಿವೆ. ಆರಂಭದಲ್ಲಿ 24,000 ಕ್ಯೂಸೆಕ್ಸ್ ಹೊಸ ನೀರು ಬಿಡಬೇಕು ಎನ್ನುವ ಬೇಡಿಕೆಯ ಬಗ್ಗೆ ಕಾವೇರಿ ನೀರು ನಿಯಂತ್ರಣಾ ಪ್ರಾಧಿಕಾರವು ವಾಸ್ತವ ವರದಿಗಳನ್ನು ಅನುಸರಿಸಿ ಕಡಿಮೆ ಮಾಡುವುದಾಗಿ ಹೇಳಿತು. ಮತ್ತು ಅಂತಿಮವಾಗಿ 3000 ಕ್ಯೂಸೆಕ್ಸ್ ನೀರನ್ನು ಬಿಡಬೇಕೆಂದು ಆದೇಶಿಸಿತ್ತು. ಆಗಲೂ ಜನ ಸಂಘಟನೆಗಳಿಂದ ಅದಕ್ಕೆ ವಿರೋಧ ವ್ಯಕ್ತಗೊಂಡಿತ್ತು. ಎರಡು ರಾಜ್ಯಗಳ ನಡುವೆ ಬಿಕ್ಕಟ್ಟು ಬಿರುಸಾಗಿದ್ದರೂ ಕೇಂದ್ರ ಸರ್ಕಾರ ಮಧ್ಯಸ್ಥಿಕೆ ವಹಿಸಿ ಸಂಕಷ್ಟದಲ್ಲಿರುವ ರಾಜ್ಯಗಳೊಂದಿಗೆ ಮಾತುಕತೆಯನ್ನು ನಡೆಸಿ ಸಮಾಧಾನಕರ ಪರಿಹಾರವನ್ನು ರೂಪಿಸಲು ಪ್ರಯತ್ನಿಸಲೇ ಇಲ್ಲ. ಈ ಬಳಿಕ ಚಳುವಳಿ ಕೆಲವು ದಿನ ಮುಂದುವರಿದಾಗ 3000 ಕ್ಯೂಸೆಕ್ಸ್ ನೀರು ಬಿಡುವ ಬಗ್ಗೆ ಪುನರ್ವಿಮರ್ಶಿಸಲು ರಾಜ್ಯ ಸರ್ಕಾರ ಕಾವೇರಿ ನೀರು ನಿಯಂತ್ರಣ ಪ್ರಾಧಿಕಾರಕ್ಕೆ ಮರು ಮನವಿ ಸಲ್ಲಿಸಿದೆ. ಹೀಗಾಗಿ ಕಾವೇರಿ ಬಂಧುಗಳ ಹೋರಾಟದ ಅಬ್ಬರ ನಿಂತಿದೆ. ಇದರರ್ಥ ಕಾವೇರಿ ನದಿಯನ್ನೇ ನಂಬಿ ಬದುಕುತ್ತಿರುವ ರೈತರ ಮತ್ತು ಜನಸಾಮಾನ್ಯರ ಬವಣೆಗಳು ಮರೆಯಾದವೇ ಎನ್ನುವುದು ಮುಖ್ಯ ಪ್ರಶ್ನೆ.

ವಾಸ್ತವದಲ್ಲಿ, ಅಂತಹ ಪರಿಸ್ಥಿತಿಯೊಂದು ನಿರ್ಮಾಣಗೊಳ್ಳುವುದು ಅಸಾಧ್ಯವೇ ಸರಿ. ಏಕೆಂದರೆ

ಪುಟ 6 ಕ್ಕೆ

ಶರಣ್ ಪಂಪ್ ವೆಲ್ ಅವರೇ,
ನಿಮ್ಮ ಮೇಲೆ "ಮುಸ್ಲಿಮರಿಗೆ ವ್ಯಾಪಾರ ಬಹಿಷ್ಕಾರ ಕರೆ" ಗಾಗಿ ಮಂಗಳೂರು ಪೊಲೀಸರು ಹಾಕಿರುವ ಮೊಕದ್ದಮೆಗೆ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿರಬಹುದು. ಹೈಕೋರ್ಟ್ ಮಟ್ಟದಲ್ಲಿ "ಪ್ರಭಾವಿ" ವಕೀಲರೂ ನಿಮ್ಮ ಇಂತಹ ದ್ವೇಷಕಾರ್ಯದಲ್ಲಿ ಸಹಾಯ ಮಾಡಲು ಜೊತೆಗಿರಬಹುದು. ಆದರೆ, ಜನತಾ ನ್ಯಾಯಾಲಯ ನಿಮ್ಮನ್ನು ಖಳನಾಯಕ ಎಂದು ಘೋಷಿಸಿದೆ. ನಿಮ್ಮ ಮಾತುಗಳಿಗೆ ಕಿಮ್ಮತ್ತಿಲ್ಲ ಎಂದು ಸಾರ್ವಜನಿಕವಾಗಿಯೇ ಧರ್ಮಬೇಧ ಮರೆತು ವ್ಯಾಪಾರ ನಡೆಸುವ ಮೂಲಕ ನಿಮ್ಮ ಕೃತ್ಯಕ್ಕೆ ಶಿಕ್ಷೆ ವಿಧಿಸಿದೆ.

ಇದು ನಿಮಗೆ (ಶರಣ್ ಪಂಪ್ ವೆಲ್ ಹಾಗೂ ಬಜರಂಗ ದಳದ ಗ್ಯಾಂಗ್) ಮಾತ್ರ ಜನತಾ ನ್ಯಾಯಾಲಯ ನೀಡಿದ ಉತ್ತರ (ಶಿಕ್ಷೆ) ಅಲ್ಲ. ನಿಮ್ಮ ಹಿಂದಿರುವ ಬಿಜೆಪಿ ಸಂಸದ ನಳಿನ್ ಕುಮಾರ್ ಕಟೀಲ್, ಶಾಸಕ ವೇದವ್ಯಾಸ ಕಾಮತರಿಗೂ, ಬಿಜೆಪಿ ನಾಯಕತ್ವಕ್ಕೂ ಸೇರಿ ನೀಡಿರುವಂತದ್ದು. ಜನತೆಗೆ ಎಲ್ಲವೂ ಅರ್ಥ ಆಗುತ್ತದೆ. ನೀವು ನಿಮ್ಮ ದ್ವೇಷ ರಾಜಕರಾಣದ ಅಮಾನವೀಯ ವಿಭಜನೆಯ ರಾಜಕಾರಣ ಮುಂದುವರಿಸಿ, ನಾವು ಜನರ ಬದುಕಿನ ಪ್ರಶ್ನೆಗಳ ಆಧಾರದಲ್ಲಿ ಜೋಡಿಸುವ ಕೆಲಸದೊಂದಿಗೆ ಮುಂದುವರಿಯುತ್ತೇವೆ. ಜನರು ಕೊನೆಗೆ ಎಲ್ಲವನ್ನೂ ನಿರ್ಧರಿಸುತ್ತಾರೆ. ಹಸಿವಿಗಿಂತ ದೊಡ್ಡ ಪ್ರಶ್ನೆಯಿಲ್ಲ. ಅದರ ನಿವಾರಣೆಗಾಗಿ ದುಡಿಯುವುದಕ್ಕಿಂತ ದೊಡ್ಡ ಧರ್ಮವಿಲ್ಲ, ಪುಣ್ಯವಿಲ್ಲ. ನಿಮಗೂ ಇದುಜನ ಅರ್ಥವಾಗುವ ದಿನ ಬರಲಿ.

–ಮುನೀರ್ ಕಾಟಿಪಳ್ಳ, ಡಿ.ವೈ.ಎಫ್.ಐ. ರಾಜ್ಯ ಅಧ್ಯಕ್ಷರು, (ಫೇಸ್ ಬುಕ್ನಿಂದ)

ಮಂಗಳಾದೇವಿ ಉತ್ಸವದಲ್ಲಿ ಸಾಮರಸ್ಯ ಕದಡುವ ಯತ್ನ: ವಿಫಲಗೊಳಿಸಿದ ಜನತೆ

ಪ್ರಮೀಳಾ ದೇವಾಡಿಗ

ಮಂಗಳೂರು ನಗರದ ಹೃದಯ ಭಾಗದಲ್ಲಿ 9 ನೇ ಶತಮಾನದಲ್ಲಿ ಸ್ಥಾಪಿಸಲಾಗಿದೆ ಎಂದು ಹೇಳಲಾಗುತ್ತಿರುವ ಶ್ರೀ ಮಂಗಳಾದೇವಿ ದೇವಾಲಯವಿದೆ. ಇತಿಹಾಸ ಪ್ರಕಾರ ಮಂಗಳೂರಿಗೆ ಹಿಂದೆ ಮಂಗಳಾಪುರ ಎಂಬ ಹೆಸರಿತ್ತು. ಮಂಗಳಾದೇವಿ ಪ್ರತಿಷ್ಠಾಪನೆಯಿಂದಲೇ ಈ ಹೆಸರು ಬಂದಿರುವುದು ಎಂದು ಹೇಳಲಾಗುತ್ತದೆ. ವಯಸ್ಸಿಗೆ ಬಂದಿರುವ ಹೆಣ್ಣು ಮಕ್ಕಳಿಗೆ ವಿವಾಹವಾಗುವುದು ವಿಳಂಬವಾದರೆ ಈ ದೇವಿಯ ದರುಶನದಿಂದ ಅಥವಾ ಸ್ವಯಂವರ ಪೂಜೆಯಿಂದ ಬೇಗನೆ ವಿವಾಹವಾಗುವುದು ಎಂಬ ವಿಶೇಷ ನಂಬಿಕೆ ಭಕ್ತಾಭಿಮಾನಿಗಳಲ್ಲಿದೆ.


ಜಾತ್ರೆ ವ್ಯಾಪಾರ: 'ಧರ್ಮ'ಕ್ಕೆ ಸೊಪ್ಪುಹಾಕದ ಗ್ರಾಹಕರು
Published 20 ಅಕ್ಟೋಬರ್ 2023, 1:59 IST
Last Updated 20 ಅಕ್ಟೋಬರ್ 2023, 1:59 IST

ಈ ದೇವಾಲಯದಲ್ಲಿ ವರ್ಷಂಪ್ರತಿ ಮಾರ್ಚ್ ತಿಂಗಳಿನಲ್ಲಿ ವಾರ್ಷಿಕ ಜಾತ್ರೋತ್ಸವ, ಹಾಗೂ ದಸರಾ ಸಮಯದಲ್ಲಿ 9 ದಿನಗಳು ನವರಾತ್ರಿ ಉತ್ಸವವು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ದೇವಾಲಯಕ್ಕೆ ಅಗತ್ಯಕ್ಕೆ ಬೇಕಾಗುವಷ್ಟು ಸ್ಥಳದ ಅಭಾವವಿರುವುದರಿಂದ ರಸ್ತೆಯಲ್ಲೇ ರಥೋತ್ಸವ ನಡೆಯುವುದಲ್ಲದೆ, ರಸ್ತೆಯ ಇಕ್ಕೆಲಗಳಲ್ಲಿ ಉದ್ದಕ್ಕೂ ಸಂತೆ ವ್ಯಾಪಾರವಿರುತ್ತದೆ. ಯಾವುದೇ ಜಾತಿ, ಮತ, ಧರ್ಮ ಬೇಧವಿಲ್ಲದೆ ಸಾಮರಸ್ಯದಿಂದ ಎಷ್ಟೋ ವರ್ಷಗಳಿಂದ ಈ ಸಂತೆ ವ್ಯಾಪಾರ ನಡೆದು ಕೊಂಡು ಬಂದಿರುವುದರಿಂದ ಜಾತ್ರೆಗೆ ಬರುವ ಭಕ್ತಾಭಿಮಾನಿಗಳು ಸಂತೆಯಲ್ಲಿ ವ್ಯಾಪಾರಿಯ ಮತಧರ್ಮ ಯಾವುದೆಂದು ನೋಡದೆ ಕಡಿಮೆ ದರದಲ್ಲಿ ಸಿಗುವ ಅಂಗಡಿಗಳಲ್ಲಿ ವ್ಯಾಪಾರ ಮಾಡುವುದು ವಾಡಿಕೆಯಾಗಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ಕರಾವಳಿಯಲ್ಲಿ ರಾಜಕೀಯ ಲಾಭಕ್ಕಾಗಿ ಬಿಜೆಪಿ ಸಂಘಪರಿವಾರವು ಕೋಮುವಾದವನ್ನು ಮುನ್ನೆಲೆಗೆ ತಂದು ಮುಸ್ಲಿಮರು ಹಿಂದೂ ದೇವಾಲಯಗಳಲ್ಲಿ ವ್ಯಾಪಾರ ಮಾಡಬಾರದು ಎಂದು ತಾಕೀತು ಮಾಡುವುದಲ್ಲದೆ ವ್ಯಾಪಾರವನ್ನು ನಿಷೇಧಿಸುತ್ತಿದೆ. ಸಾಮರಸ್ಯನ್ನು ಕದಡಿ ಜನರ ಮಧ್ಯೆ ಧರ್ಮದ ಹೆಸರಿನಲ್ಲಿ ಗೋಡೆಯನ್ನಿಟ್ಟು ವಿಕೃತಿ ಮೆರೆಯುತ್ತಿರುವುದು ಕಾಣುತ್ತಿದ್ದೇವೆ.

ಅಂತೆಯೇ, ಈ ಸಲ ಮಂಗಳಾದೇವಿ ದೇವಸ್ಥಾನದಲ್ಲೂ ವಿಶ್ವಹಿಂದೂ ಪರಿಷತ್ ಮುಖಂಡ ಶರಣ್ ಪಂಪುವೆಲ್ ಎಂಬ ಕೋಮುವಾದಿ ನವರಾತ್ರಿ ಉತ್ಸವದಲ್ಲಿ ಮುಸ್ಲಿಮರಿಗೆ ವ್ಯಾಪಾರಕ್ಕೆ ಅವಕಾಶ ಕೊಡಬಾರದೆಂದು ಮನವಿ ಮಾಡಿರುವ ಹಿನ್ನೆಲೆಯಲ್ಲಿ ಆಡಳಿತ ಮಂಡಳಿಯು ಮುಸ್ಲಿಮರಿಗೆ ವ್ಯಾಪಾರ ಮಾಡುವುದನ್ನು ನಿರಾಕರಿಸಿತ್ತು. ಈ ವಿಷಯದಲ್ಲಿ ಜಿಲ್ಲಾಡಳಿತ, ಜಿಲ್ಲಾಧಿಕಾರಿಯವರು ಸುಮ್ಮನೆ ಇದ್ದಿರುವುದು ಖೇದಕರ. ದೇವಸ್ಥಾನಕ್ಕೆ ಸಂಬಂಧ ಪಡದ ಸಾರ್ವಜನಿಕ ಸ್ಥಳಗಳಲ್ಲಿ ಯಾರಿಗೆ ಬೇಕಾದರೂ ವ್ಯಾಪಾರ ಮಾಡುವ ಹಕ್ಕಿದೆ. ಈ ಕಾರಣಕ್ಕಾಗಿ ಬೀದಿಬದಿ ವ್ಯಾಪಾರಸ್ಥರ ಸಂಘದ ಮುಖಂಡ ಬಿ.ಕೆ. ಇಮ್ತಿಯಾಜ್ ರವರ ನೇತೃತ್ವದಲ್ಲಿ ಪ್ರತಿಭಟನೆ ಹಾಗೂ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವ ಮುಖಾಂತರ ದೇವಸ್ಥಾನದ ಆಡಳಿತ ಮಂಡಳಿಯಿಂದ ಮರು ಟೆಂಡರ್ ಮೂಲಕ ಮುಸ್ಲಿಮರಿಗೂ ವ್ಯಾಪಾರ ಮಾಡುವ ಅವಕಾಶ ಸಿಕ್ಕುವಂತಾಯಿತು.

ಇದರಿಂದ ಹತಾಶೆ ಗೊಂಡ ಶರಣ್ ಪಂಪುವೆಲ್ ಹಿಂದೂಗಳ ಅಂಗಡಿಗಳಲ್ಲಿ ಭಗವಾಧ್ವಜ ಹಾರಿಸುವಂತೆ ಸೂಚಿಸಿದನು. ಇವನ ಸಾಮರಸ್ಯ ಕದಡುವ ಈ ಅಪರಾಧಕ್ಕೆ ಕಾನೂನು ಕ್ರಮ ಕೈಗೊಳ್ಳುವಂತೆ ದ.ಕ.ಜಿಲ್ಲಾ ಜಾತ್ಯಾತೀತ ಪಕ್ಷಗಳು ಮತ್ತು ಸಮಾನ ಮನಸ್ಕ ಸಂಘಟನೆ ಜಂಟಿ ವೇದಿಕೆಯ ವತಿಯಿಂದ ಗೃಹ ಸಚಿವರಿಗೆ ಮನವಿ ಸಲ್ಲಿಸಿತ್ತು.

ನವರಾತ್ರಿ ಉತ್ಸವ ಆರಂಭವಾಗಿ ಸಂತೆ ವ್ಯಾಪಾರ ನಡೆಯುತ್ತಿದೆ. ಶರಣ್ ಪಂಪುವೆಲ್ ನ ಮಾತಿಗೆ ಕಿಮ್ಮತ್ತಿಲ್ಲ ಎಂದು ಸಾರ್ವಜನಿಕವಾಗಿಯೇ ಮತಧರ್ಮ ಬೇಧ ಮರೆತು ವ್ಯಾಪಾರ ಮಾಡುವ ಮೂಲಕ 'ಜನತಾ ನ್ಯಾಯಾಲಯ' ಶಿಕ್ಷೆ ವಿಧಿಸಿದೆ. ಸೌಹಾರ್ದತೆ ಕದಡುವ ಕುತಂತ್ರಕ್ಕೆ ಜನಾದೇಶ ವಿರುದ್ಧವಾಗಿತ್ತು. ಹಸಿವಿಗೆ ದುಡಿಮೆಯೇ ಧರ್ಮ ಎಂದು ಸಾಬೀತಾಯಿತು.





ಶರಣ್ ಪಂಪ್ ವೆಲ್ ಹಾಗೂ ಜೊತೆಗಾರರ ಬಂಧನಕ್ಕೆ ಆಗ್ರಹಿಸಿ ಉಸ್ತುವಾರಿ ಸಚಿವರೊಂದಿಗೆ ಸಮಾನ ಮನಸ್ಕರ ಸಭೆ

ಮಂಗಳಾ ದೇವಿ ದೇವಸ್ಥಾನದ ದಸರಾ ಜಾತ್ರೆಯಲ್ಲಿ ಹಿಂದು ವ್ಯಾಪಾರಸ್ಥರ ಮಳಿಗೆಗಳಿಗೆ ಬಲವಂತದಿಂದ ಕೇಸರಿ ಬಾವುಟ ಕಟ್ಟಿ, "ಮುಸ್ಲಿಂ ವ್ಯಾಪಾರಿಗಳಲ್ಲಿ ಹಿಂದುಗಳು ವ್ಯಾಪಾರ ನಡೆಸಬಾರದು" ಬಹಿರಂಗವಾಗಿ ಕರೆ ನೀಡಿರುವ ಬಜರಂಗ ದಳದ ಶರಣ್ ಪಂಪ್ ವೆಲ್ ಮತ್ತು ಗ್ಯಾಂಗನ್ನು ಕೋಮು ಪ್ರಚೋದಕ ಕಠಿಣ ಸೆಕ್ಷನ್ ಗಳಡಿ ಬಂಧಿಸಿ ಕಾನೂನು ಪ್ರಕಾರ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಇಂದು ದ ಕ ಜಿಲ್ಲಾ ಜಾತ್ಯಾತೀತ ಪಕ್ಷಗಳು ಹಾಗೂ ಸಮಾನ ಮನಸ್ಕ ಸಂಘಟನೆಗಳ ಜಂಟಿ ವೇದಿಕೆಯ ವತಿಯಿಂದ ಮನವಿ ಸಲ್ಲಿಸಲಾಯಿತು. ಜಾತ್ರೆ ವ್ಯಾಪಾರಿಗಳು, ಬೀದಿ ಬದಿ ವ್ಯಾಪಾರಸ್ಥರಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಲಾಯಿತು. ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಕಾರ್ಡ್ ವಿತರಣೆಯನ್ನು ಈ ತಿಂಗಳಾತ್ಯದ ಒಳಗಡೆ ಒದಗಿಸಿ ಸಮಸ್ಯೆ ಬಗೆಹರಿಸಲು ಕೇಳಿಕೊಳ್ಳಲಾಯಿತು.

ನಿಯೋಗದಲ್ಲಿ ಜಂಟಿ ವೇದಿಕೆಯ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ, ಸಿಪಿಐಎಂ ಜಿಲ್ಲಾ ಕಾರ್ಯದರ್ಶಿ ಕೆ. ಯಾದವ ಶೆಟ್ಟಿ, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ. ಶೇಖರ್, ದಲಿತ ಸಂಘರ್ಷ ಸಮಿತಿಯ ಎಂ ದೇವದಾಸ್, ರಘು ಕೆ ಎಕ್ಕಾರು, ಸಾಮಾಜಿಕ ಕಾರ್ಯಕರ್ತರಾದ ಎಂ ಜಿ ಹೆಗ್ಡೆ, ಯಾಸೀನ್ ಕುದ್ರೋಳಿ, ದ. ಕ, ಉಡುಪಿ ಜಿಲ್ಲಾ ಜಾತ್ರೆ ವ್ಯಾಪಾರಸ್ಥರ ಸಂಘದ ಗೌರವಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್, ಬೀದಿ ಬದಿ ವ್ಯಾಪಾರಸ್ಥರ ಶ್ರೇಯೋಭಿವೃದ್ಧಿ ಸಂಘದ ಗೌರವಾಧ್ಯಕ್ಷ ಬಿ ಕೆ ಇಮ್ತಿಯಾಜ್, ಪದಾಧಿಕಾರಿಗಳಾದ ಮುಸ್ತಫಾ, ಶ್ರೀನಿವಾಸ್, ಹಿರಿಯ ಕಾರ್ಮಿಕ ನಾಯಕರಾದ ವಿ ಕುಕ್ಯಾನ್, ಕರುಣಾಕರ ಮಾರಿಪಳ್ಳ, ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ಸಂತೋಷ್ ಬಜಾಲ್, ಸಾಮರಸ್ಯ ಮಂಗಳೂರು ಇದರ ಮಂಜುಳಾ ನಾಯಕ್, ಸಮರ್ಥ್ ಭಟ್ ಸಹಿತ ಹಲವು ಪ್ರಮುಖರು ಉಪಸ್ಥಿತರಿದ್ದರು.

ದ.ಕ. ಜಿಲ್ಲಾ ಜಾತ್ಯಾತೀತ ಪಕ್ಷಗಳು ಹಾಗೂ ಸಮಾನಮನಸ್ಕ ಸಂಘಟನೆಗಳ ಜಂಟಿ ವೇದಿಕೆ, ಮಂಗಳೂರು.



ಸೌಹಾರ್ದ ಸಾಹಿತ್ಯ ಓದು ಮತ್ತು ಸೌಹಾರ್ದ ತಾಣಗಳ ಭೇಟಿ ಅಭಿಯಾನ

2023 ಅಕ್ಟೋಬರ್ 2 ರಿಂದ ಚಾಲನೆ–2024 ರ ಜನವರಿ 30 ರವರೆಗೆ ಯಶಸ್ವಿಗೊಳಿಸಲು ಮನವಿ

ಕರ್ನಾಟಕದ ಸಾಮಾನ್ಯ ಜನರಿಗೆ ಬಹಳ ಮುಖ್ಯವಾದುದು ನೆಮ್ಮದಿಯ ಬದುಕು. ಆದರೆ ಇತ್ತೀಚಿನ ದಿನಗಳಲ್ಲಿ ಈ ನೆಮ್ಮದಿಯನ್ನು ಕದಡಿ ರಾಡಿ ಎಬ್ಬಿಸಲು ಹಲವು ರೀತಿಯ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಶತಶತಮಾನಗಳಿಂದ ಕರ್ನಾಟಕದ ಜನರು ಈ ನಾಡನ್ನು ಸರ್ವ ಜನಾಂಗದ ತೋಟವನ್ನಾಗಿ ಬೆಳೆಸಿದ್ದಾರೆ. ಹಿಂದೂ–ಮುಸ್ಲಿಂ–ಕ್ರೈಸ್ತ–ಜೈನ–ಪಾರಸಿಕರ ಈ ಉದ್ಯಾನವನ್ನು ಇಂದು ಹಾಳುಗೆಡವುವ, ದ್ವೇಷದ ಮುಳ್ಳುಕಂಟಿಗಳಿಂದ ತುಂಬುವ ಪ್ರಯತ್ನ ನಡೆದಿರುವುದು ಜನರ ನೆಮ್ಮದಿಗೆ ಮಾತ್ರವಲ್ಲ, ನಿತ್ಯದ ಬದುಕಿಗೂ ಹಾನಿಯುಂಟು ಮಾಡಿದೆ. ಜನರ ನಡುವೆ ಕೋಮುದ್ವೇಷದ ವಿಷ ಹಬ್ಬುತ್ತಿದೆ.

ಇದಕ್ಕೆ ಮುಖ್ಯ ಕಾರಣ, ನಮ್ಮ ಜನರ ಶತಶತಮಾನಗಳ ಸೌಹಾರ್ದದ ಬದುಕಿನ ವಿಸ್ತಾರವಾದ ಅರಿವನ್ನು ಮೂಡಿಸದಿರುವುದು. ಕೋಮು ದಾವಾನಲದಲ್ಲಿ ಅನುಭವಿಸಿದ ಅಸಂಖ್ಯ ಬೇನೆ, ಸಂಕಟಗಳ ಬಗ್ಗೆ ಮಾಹಿತಿ, ತಿಳುವಳಿಕೆ ಇಲ್ಲದಿರುವುದು.

ಈ ಬಹುಮುಖ್ಯ ಕೊರತೆಯನ್ನು ನಿವಾರಿಸುವುದು, ಸೌಹಾರ್ದ ಮನಸ್ಥಿತಿಯನ್ನು ರೂಢಿಸುವುದು ಕೋಮುವಾದದ ವಿರುದ್ಧದ ಹೋರಾಟದಲ್ಲಿ ತುರ್ತು ವಿಷಯವಾಗಿದೆ. ಆದ್ದರಿಂದ 'ಸೌಹಾರ್ದ ಕರ್ನಾಟಕ' ವೇದಿಕೆಯು ಸೌಹಾರ್ದ ಓದು ಮತ್ತು ಸೌಹಾರ್ದ ತಾಣಗಳ ಭೇಟಿಯ ಆಂದೋಲನವನ್ನು ಗಾಂಧೀಜಿ ಜಯಂತಿಯ ದಿನದಿಂದ ರಾಜ್ಯೋತ್ಸವ ಮಾಸವಾದ ನವೆಂಬರ್ ಕೊನೆಯವರೆಗೆ ಎರಡು ತಿಂಗಳ ಕಾಲ ಹಮ್ಮಿಕೊಂಡಿದೆ ಮತ್ತು ಅದು ಜನರನ್ನು ಒಳಗೊಳ್ಳುವ ಕಾರ್ಯಕ್ರಮವಾಗಿ ಮುಂದುವರೆಯಲಿದೆ.

ಈ ಕಾರ್ಯಕ್ರಮದ ಗುರಿ ಕರ್ನಾಟಕದ ವಿಶಾಲ ಜನ ಸಮುದಾಯ. ಹಲವು ಚಳುವಳಿಗಳಲ್ಲಿ ಭಾಗವಹಿಸುವ ಜನ ವಿಭಾಗವನ್ನು ಮೀರಿ ಎಲ್ಲ ಜನರ ಮನಸ್ಸಿನಾಳದಲ್ಲಿ ಸೌಹಾರ್ದ ಸಂದೇಶವನ್ನು ಬೇರೂರಿಸುವ ಪ್ರಯತ್ನ. ಪರಂಪರೆಯ ಪ್ರಜ್ಞೆಯನ್ನು ಬಲಗೊಳಿಸುವುದು.

ಈ ಆಂದೋಲನ ಓದು ಬಲ್ಲವರೆಲ್ಲರನ್ನೂ ಒಳಗೊಳ್ಳಬೇಕು. ಓದು ಬಾರದವರಿಗೂ ಮುಟ್ಟಬೇಕು. ಸಾವಿರಾರು ಶಾಲೆ, ನೂರಾರು ಕಾಲೇಜು, ವಿಶ್ವವಿದ್ಯಾಲಯಗಳನ್ನು ಪುಟ 07 ಕ್ಕೆ

ರಾಜ್ಯದಲ್ಲಿ 'ವೀರಶೈವ-ಲಿಂಗಾಯತ' ಅಧಿಕಾರಿಗಳಿಗೆ ಅನ್ಯಾಯವಾಗಿದೆಯೇ?

'ಆಯಕಟ್ಟಿನ ಜಾಗ' ಅಂದರೆ ಏನು?

ವಿಶ್ಲೇಷಕ

ಇತ್ತೀಚೆಗೆ ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಆಡಳಿತದಲ್ಲಿ ವೀರಶೈವ-ಲಿಂಗಾಯತ ಸಮುದಾಯದ ಅಧಿಕಾರಿಗಳು 'ಆಯಕಟ್ಟಿನ ಜಾಗ'ಗಳಿಂದ ವಂಚಿತರಾಗಿದ್ದಾರೆ ಎಂದ ಹಿರಿಯ ಕಾಂಗ್ರೆಸ್ ಮುಖಂಡರಾದ ಶಾಮನೂರು ಶಿವಶಂಕರಪ್ಪ ಅವರು, ಎಲ್ಲ ಪಕ್ಷಗಳು ಸೇರಿ ರಾಜ್ಯ ವಿಧಾನ ಸಭೆಯಲ್ಲಿ ಒಟ್ಟು 74 ಜನ ವೀರಶೈವ-ಲಿಂಗಾಯತರು ಇದ್ದಾರೆ ಎಂಬುದನ್ನು ಹೇಳಿದ್ದಲ್ಲದೆ, ಅಗತ್ಯ ಬಂದರೆ ಈ 74 ನಾಲ್ಕು ಶಾಸಕರ ಬಲದೊಂದಿಗೆ, ಈಗಿನ ಸರಕಾರವನ್ನು ಬೀಳಿಸಿ ಬದಲಿ ಸರಕಾರವನ್ನೇ ರಚಿಸಲು ಬಲ್ಲೆವು ಎಂಬಂತೆ ಬೆದರಿಕೆ ಹಾಕುವ ಅರ್ಥದಲ್ಲಿ ಮಾತನಾಡಿದ್ದಾರೆ. ಈ ಬೆಳವಣಿಗೆ ಯಾಕೆ? ಇದರ ಹಿಂದೆ ನಿಜಕ್ಕೂ ಏನಿದೆ? ಎಂದು ತಿಳಿಸುವ ಈ ಒಳನೋಟವನ್ನು ಓದಿ ನೋಡಿ.

'ಆಯಕಟ್ಟಿನ ಜಾಗ' ಎಂಬ ಬಗ್ಗೆ ರಾಜ್ಯದಲ್ಲಿ ಇತ್ತೀಚೆಗೆ ಸಾಕಷ್ಟು ಚರ್ಚೆಯಾಯಿತು. ಈ 'ಆಯಕಟ್ಟಿನ ಜಾಗ' ಎಂದರೆ ನಿಜಕ್ಕೂ ಏನು? ಆಡಳಿತಾತ್ಮಕವಾಗಿ ರಾಜ್ಯದ ಜನರ ಹಿತ ಕಾಪಾಡುವ ಪ್ರಮುಖ ಜಾಗಗಳೇ? ರಾಜ್ಯವನ್ನು ಅಭಿವೃದ್ಧಿ ಮಾರ್ಗದಲ್ಲಿ ಕೊಂಡೊಯ್ಯುವ, ತೊಡಗಿಸುವ ಜಾಗಗಳೇ? ಅಥವಾ ಹೆಚ್ಚಿನ ಲಂಚ, ಅಧಿಕಾರ ಸಿಗುವ ಜಾಗಗಳೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

'ಸರ್ಕಾರಿ ಕೆಲಸ ದೇವರ ಕೆಲಸ', 'ಕಾಯಕವೇ ಕೈಲಾಸ' ಎಂಬ ಮಾತುಗಳು ಸೂಚಿಸುವ ಅರ್ಥವನ್ನು ನಿಜವಾಗಿಯೂ ಸರಿಯಾಗಿ ಗ್ರಹಿಸಿ ನೋಡುವುದಾದರೆ, ಯಾರೂ ಕೂಡ ಈ 'ಆಯಕಟ್ಟಿನ ಜಾಗ' ಹುಡುಕಿಕೊಂಡು ಹೋಗುವ ಪ್ರಶ್ನೆ ಉದ್ಭವಿಸುವುದಿಲ್ಲ. ಏಕೆಂದರೆ ಯಾವ ಕೆಲಸವಾದರೂ 'ಸರ್ಕಾರದ ಕೆಲಸ'. ಆದರೆ ಇದು ಭ್ರಷ್ಟ ಮನಸ್ಥಿತಿಯವರಿಗೆ ಇದು ಹಿಡಿಸುವುದಿಲ್ಲ. ಸರ್ಕಾರದ ಆಯಕಟ್ಟಿನ ಜಾಗದಲ್ಲಿ ಕುಳಿತು ಜಾಸೂಸಿ ಮಾಡಿ, ಸರ್ಕಾರದ ಕಡತಗಳ ಮಾಹಿತಿ ಹೊರಗೆ ಕಳಿಸುವುದಕ್ಕೆ, ಅಧಿಕಾರ ಹಾಗು ದರ್ಪ ತೋರಿಸಿ, ಹಣ ಕಮಾಯಿಸುವ ಆಯಕಟ್ಟಿನ ಸ್ಥಾನಗಳ ಹುಡುಕಾಟದ ಪ್ರಯತ್ನ ಇದಾಗಿದೆ. ಕೇವಲ ನೂರು ವೀರಶೈವ ಅಧಿಕಾರಿಗಳು ಆಯಕಟ್ಟಿನ ಸ್ಥಳದಲ್ಲಿ ಇರುವುದರಿಂದ, ಸಾಮಾನ್ಯ ವೀರಶೈವ-ಲಿಂಗಾಯತರಿಗೆ ಏನು ಲಾಭ!! 'ಯಾರೇ ರಾಜರಾದರೂ ದುಡಿದು ತಿನ್ನುವವರಿಗೆ ರಾಗಿ ಬಿಸೋದು ತಪ್ಪುವುದಿಲ್ಲ' ಎನ್ನುವ ಗಾದೆ ಮಾತಿದೆ. ಲಿಂಗಾಯತ ಮುಖ್ಯಮಂತ್ರಿಯಾದರೂ ಬರಿಯ ಲಿಂಗಾಯತರ ಆರ್ಥಿಕ ಸ್ಥಿತಿ ಬದಲು ಮಾಡಲು ಸಾಧ್ಯವೆ?

ಈ ದೃಷ್ಟಿಯಿಂದ ನೋಡಿದಾಗ, ಇದೆಲ್ಲವೂ 'ವೀರಶೈವ-ಲಿಂಗಾಯತ'ರ ಹೆಸರು ಹೇಳಿಕೊಂಡು ಭ್ರಷ್ಟ ಮತ್ತು ಜಾತಿ ರಾಜಕೀಯ ಮಾಡುವವರ ಲಾಬಿ ಮತ್ತು ಕರಾಮತ್ತು ಅಷ್ಟೇ ಎಂಬುದು ಗೊತ್ತಾಗುತ್ತದೆ. ಇಂತಹ 'ರಾಜಕೀಯ'ಕ್ಕೆ ಒಂದು ದೊಡ್ಡ ಇತಿಹಾಸವೇ ಇದೆ.!

ಇದು ಮೊದಲು ಶುರು ಆಗೋದೇ ವೈದಿಕ ಬ್ರಾಹ್ಮಣ್ಯಕ್ಕೆ ತಮ್ಮ ಮಿದುಳನ್ನು ಅರ್ಪಿಸಿರುವ ಮೈಸೂರು ಸಮುದಾಯದ ಕೆಲವು ವಿಭಾಗಗಳಿಂದ. ಬಹುತೇಕ ಈಗಲೂ ಈ ಲಾಭಿ ಅಲ್ಲಿಂದಲೇ ಪ್ರಾರಂಭವಾಗಿದೆ. ಬಸವಾದಿ ಶರಣರ ಸಾಮಾಜಿಕ ಸಮಾನತೆಯ ತತ್ವ ಸಿದ್ಧಾಂತಗಳನ್ನು ಸರಿಯಾಗಿ ಅರಿಯದೇ, ಬ್ರಾಹ್ಮಣ್ಯದ ವೇದ, ಶಾಸ್ತ್ರ ಆಗಮ, ಪುರಾಣಗಳ, ವೈದಿಕ ಪುರೋಹಿತಶಾಹಿ ವ್ಯವಸ್ಥೆಗೆ ಜೋತು ಬಿದ್ದಿರುವ ಈ ವಿಭಾಗದ ಜನರಿಗೆ ಸಾಮಾಜಿಕ ನ್ಯಾಯ, ನೀತಿಗಳು ಅರ್ಥವಾಗದಂತಾಗಿರುವುದು ವಿಷಾದನೀಯ. ಹೀಗೆ ತತ್ವ ಭ್ರಷ್ಟರಾದ ಜನರನ್ನು ವೈದಿಕ ಶ್ರೇಷ್ಠತೆಯ ವಿಚಾರಧಾರೆಯ ಬಿಜೆಪಿ-ಆರೆಸ್ಸೆಸ್‌ಗಳು ತಮ್ಮ ಕುತಂತ್ರದ ರಾಜಕೀಯಕ್ಕೆ ಇಂದು ಉಪಯೋಗಿಸುತ್ತಿವೆ.

ಹಿಂದಿನ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪನವರ ಆಡಳಿತ ಹಾಗೂ ನಂತರ ಬಸವರಾಜ ಬೊಮ್ಮಾಯಿಯವರ ಬಿಜೆಪಿ ಆಡಳಿತದಲ್ಲಿ ಕೆಲವು ವೀರಶೈವ ಲಿಂಗಾಯತರು ಪಡೆದ ಆಯಕಟ್ಟಿನ ಸ್ಥಳಗಳು ಇಂದಿನ ಸರ್ಕಾರದಲ್ಲಿ ಸಿಕ್ಕಿಲ್ಲ ಎಂಬುದರಿಂದಾಗಿ, ಇಂದು ತಮ್ಮ 'ವೀರಶೈವ-ಲಿಂಗಾಯತ'ದ ಜಾತಿವಾದಿ 'ಅಸ್ಮಿತೆ'ಯನ್ನು ಮುಂದು ಮಾಡಿದ್ದಾರೆ.



ನಮ್ಮ ಈಗಿನ ವ್ಯವಸ್ಥೆಯಲ್ಲಿ ಆಡಳಿತ ಪಕ್ಷಗಳು ಬದಲಾದಾಗ, ಸರ್ಕಾರಿ ಸೇವೆಯಲ್ಲಿ ತಮ್ಮ 'ಧೋರಣೆ' ಮತ್ತು 'ಆದ್ಯತೆ'ಗಳಿಗೆ ತಕ್ಕಂತೆ ಆಡಳಿತ ಪಕ್ಷದ ಅವಧಿಯ ಅಧಿಕಾರಿಗಳನ್ನು ಬದಲಾಯಿಸುವುದು ಸಾಮಾನ್ಯ. ಈ 'ಧೋರಣೆ' ಮತ್ತು 'ಆದ್ಯತೆ'ಗಳು ಮೇಲು ನೋಟಕ್ಕೆ ಪ್ರಗತಿಪರವೋ, ಜನಪರವೋ, ದಕ್ಷತೆಯ ಪರವೋ, ಜಾತಿವಾದಿಯೋ, ಭ್ರಷ್ಟವೋ ಹೇಗಾದರೂ ಕಾಣಲಿ, ಅದರ ಒಳಗಿನ ಮರ್ಮದಲ್ಲಿ ಅಂದರೆ ಅಂತಿಮ ಅರ್ಥದಲ್ಲಿ ನಮ್ಮ ಸಮಾಜದ ಮೇಲೆ ಕಪಿಮುಷ್ಟಿಯ ಹಿಡಿತ ಹೊಂದಿರುವ ಬಲಾಢ್ಯ ಶಕ್ತಿಗಳಾದ ಭೂಮಾಲಕರು-ಬಂಡವಾಳಶಾಹಿಗಳು ಮುಂತಾದ ಹಣವಂತ ಮತ್ತು ಆಸ್ತಿವಂತ ವಿಭಾಗದ ಹಿತಾಸಕ್ತಿಗಳನ್ನು ರಕ್ಷಿಸುವುದೇ ಆಗಿರುತ್ತವೆ.

ಎಚ್.ಡಿ. ಕುಮಾರಸ್ವಾಮಿಯವರ ಆಡಳಿತದಲ್ಲಿಯೂ ದೊಡ್ಡ ಪ್ರಮಾಣದಲ್ಲಿ ಬದಲಾವಣೆ ನಡೆದಿತ್ತು. ಆಗಲೂ 'ವೀರಶೈವ-ಲಿಂಗಾಯತ'ರ ಹೆಸರಿನಲ್ಲಿ ಇದೇ ರೀತಿಯ ಮಾತುಗಳು ಕೇಳಿ ಬಂದಿದ್ದವು. ಆದರೆ, ಯಾರು 'ವೀರಶೈವ-ಲಿಂಗಾಯತ'ರನ್ನು ಮೂಲೆಗುಂಪು ಮಾಡಿದ್ದರೋ, ಅವರೇ ಇಂದು 'ವೀರಶೈವ-ಲಿಂಗಾಯತ'ರ ಬಗೆಗೆ 'ಕನಿಕರ' ತೋರುತ್ತಿರುವುದು ವಿಪರ್ಯಾಸ. ಅಂದು, ಶಾಮನೂರುರವರು ಹಾಗು ಬಿಜೆಪಿಯವರು ಈ ಪ್ರಶ್ನೆ ಎತ್ತಲೇ ಇಲ್ಲ. ಆಡಳಿತ ಪಕ್ಷದ ಹತ್ತಿರದವರಿಗೆ, ಅಥವಾ ಮಂತ್ರಿಗಳ ಹತ್ತಿರದವರಿಗೆ ಅಥವಾ ಅವರ ಜಾತಿಯ, ಧರ್ಮದ ನೌಕರರಿಗೆ ಪ್ರಾಧಾನ್ಯತೆ ಸಿಗುವುದನ್ನು ಕಂಡಿದ್ದೇವೆ. ಹೀಗಾಗಿ, ಅಂತಹ ಅಧಿಕಾರಿಗಳನ್ನು ಹೊಸ ಆಡಳಿತದಲ್ಲಿ ಸ್ವಲ್ಪ ಮಟ್ಟಿಗೆ ಸ್ಥಳಾಂತರಿಸುವುದು 'ಸಹಜ' ವಿದ್ಯಮಾನವಾಗಿದೆ. ಇಂದಿನ ಹೊಸ ಆಡಳಿತದಲ್ಲಿ, ಹಿಂದಿನ ಆಡಳಿತದಲ್ಲಿ 40% ಸರಕಾರ ಎಂದೇ ಕುಖ್ಯಾತಿ ಪಡೆದಿದ್ದ ಸರ್ಕಾರದಲ್ಲಿ 'ಮೃಷ್ಟಾನ್ನ ಭೋಜನ' ಮಾಡಿದವರಿಗೆ ಈಗ ಪ್ರಾತಿನಿಧ್ಯ ಕಡಿಮೆಯಾದರೆ ಬೇಸರ 'ಸಹಜ'ವಾಗಿದೆ. ಇದನ್ನೇ ಒಂದು ಅನ್ಯಾಯ ಎಂಬಂತೆ ತೋರಿಸಿ, ಸಿದ್ದಾರಾಮಯ್ಯರವರ ಸರ್ಕಾರವನ್ನು 'ವೀರಶೈವ-ಲಿಂಗಾಯತ ವಿರೋಧಿ' ಎಂಬಂತೆ ಬಿಂಬಿಸಲು ಮಾಡಿರುವ ಒಂದು ರಾಜಕೀಯ ಪ್ರಯತ್ನ ಇದು ಎಂಬಂತೆ ಕಾಣುತ್ತಿದೆ. ಈ ಉದ್ದೇಶಕ್ಕೆ 'ಪಟ್ಟಭದ್ರ' ಶಕ್ತಿಗಳು, ವೀರಶೈವ-ಲಿಂಗಾಯತ ಸಮುದಾಯದ ಮುಖಂಡರು ಹಾಗು ಹಿರಿಯರೂ ಆದ ಶಾಮನೂರು ಶಿವಶಂಕರಪ್ಪನವರನ್ನು ಉಪಯೋಗಿಸಿಕೊಂಡಿರುವುದು ಸ್ಪಷ್ಟವಾಗಿದೆ.

ಕೇಂದ್ರ ಸರಕಾರದಲ್ಲಿ ಮೇಲ್ಜಾತಿ, ಪ್ರಾಬಲ್ಯದ ಬಗ್ಗೆ ಸಾಕಷ್ಟು ದೂರುಗಳಿವೆ. ಅಲ್ಲಿಯೂ ದಲಿತ ಮತ್ತು ಹಿಂದುಳಿದ ಹಾಗು ಅಲ್ಪ ಸಂಖ್ಯಾತ ಸಮುದಾಯಗಳವರಿಗೆ ಆಡಳಿತದ ಮೇಲಿನ ಸ್ತರದಲ್ಲಿ ಸರಿಯಾದ ಪ್ರಾತಿನಿಧ್ಯ ಸಿಕ್ಕಿಲ್ಲ ಎನ್ನುವ ಶೋಷಿತ ತಳ ಸಮುದಾಯಗಳ ಕೂಗೂ ಇದೆ.

> **ಆಡಳಿತ ಪಕ್ಷಗಳು ಬದಲಾದಾಗ, ಸರ್ಕಾರಿ ಸೇವೆಯಲ್ಲಿ ತಮ್ಮ 'ಧೋರಣೆ' ಮತ್ತು 'ಆದ್ಯತೆ'ಗಳಿಗೆ ತಕ್ಕಂತೆ ಆಡಳಿತ ಪಕ್ಷದ ಅವಧಿಯ ಅಧಿಕಾರಿಗಳನ್ನು ಬದಲಾಯಿಸುವುದು ಸಾಮಾನ್ಯ. ಈ 'ಧೋರಣೆ' ಮತ್ತು 'ಆದ್ಯತೆ'ಗಳು ಮೇಲು ನೋಟಕ್ಕೆ ಪ್ರಗತಿಪರವೋ, ಜನಪರವೋ, ದಕ್ಷತೆಯ ಪರವೋ, ಜಾತಿವಾದಿಯೋ ಹೇಗಾದರೂ ಕಾಣಲಿ, ಅದರ ಒಳಗಿನ ಮರ್ಮದಲ್ಲಿ ಅಂದರೆ ಅಂತಿಮ ಅರ್ಥದಲ್ಲಿ ನಮ್ಮ ಸಮಾಜದ ಮೇಲೆ ಕಪಿಮುಷ್ಟಿಯ ಹಿಡಿತ ಹೊಂದಿರುವ ಬಲಾಢ್ಯ ಶಕ್ತಿಗಳಾದ ಭೂಮಾಲಕರು-ಬಂಡವಾಳಶಾಹಿಗಳು ಮುಂತಾದ ಹಣವಂತ ಮತ್ತು ಆಸ್ತಿವಂತ ವಿಭಾಗದ ಹಿತಾಸಕ್ತಿಗಳನ್ನು ರಕ್ಷಿಸುವುದೇ ಆಗಿರುತ್ತವೆ.**

ಪ್ರಸ್ತುತ ರಾಜ್ಯ ಸರಕಾರದಲ್ಲಿ ಏಳು ಜನ ಲಿಂಗಾಯತ ಶಾಸಕರಿಗೆ ಮಂತ್ರಿ ಸ್ಥಾನ ನೀಡಲಾಗಿದೆ. ಮಂತ್ರಿಗಿರಿ ಸಿಗದ ಕೆಲವು ಶಾಸಕರಲ್ಲಿ ಅಸಮಾಧಾನ ಇದೆ. ಇದು ಕಾಂಗ್ರೆಸ್, ಬಿಜೆಪಿ, ಜನತಾ ದಳ ಮುಂತಾದ ಪಕ್ಷಗಳಲ್ಲೂ, ಎಲ್ಲಾ ಸಮಯದಲ್ಲೂ ಇರುವ ಸಮಸ್ಯೆ. ಇಂತಹ ಅತೃಪ್ತರನ್ನು ಬಳಸಿ, ಕಾಂಗ್ರೆಸ್ ಪಕ್ಷ ಒಡೆದು, ಬಿಜೆಪಿ-ಜನತಾದಳ-ಕಾಂಗ್ರೆಸ್‌ನ ಇನ್ನೊಂದು 'ಬಾಂಬೆ ಬಾಯ್ಸ್' ಗುಂಪು (ಪಕ್ಷ ಒಡಕರನ್ನು) ಒಳಗೊಂಡ ಸರ್ಕಾರ ರಚಿಸಲು ಬಿಜೆಪಿಯು ಹೊಂಚು ಹಾಕಿರಬಹುದು. ಈ ರೀತಿಯಾಗಿ ಮಹಾರಾಷ್ಟ್ರದಲ್ಲಿ ಸರ್ಕಾರ ರಚಿಸಿದ್ದು ಅವರಿಗೆ ಪ್ರೇರಣೆ ಆಗಿರಬಹುದು.

ಆದರೆ ದುರಂತ ಏನೆಂದರೆ, ಬಿಜೆಪಿ-ಆರೆಸ್ಸೆಸ್‌ನ ಹಿಂದುತ್ವದ ಕಪಿಮುಷ್ಟಿಯಿಂದ ಹೊರಬಂದು, ಅದರ ಸಮಾಜದ್ರೋಹಿ ಕೋಮುವಾದಿತನವನ್ನು ಹಿಮ್ಮೆಟ್ಟಿಸುವ ಪ್ರಬಲ ಇಚ್ಛಾ ಶಕ್ತಿ ಕಾಂಗ್ರೆಸ್‌ಗಿಲ್ಲ. ವೈಯುಕ್ತಿಕ ಧಾರ್ಮಿಕ ನಂಬಿಕೆ -ಆಚರಣೆಗಳನ್ನು ರಾಜಕೀಯದಲ್ಲಿ ಬೆರೆಸದೇ ಖಾಸಗಿಯಾಗಿ ಮಾತ್ರ ಇಟ್ಟುಕೊಳ್ಳುವ ಬದಲು, ತಾವೂ ಸಹ ಹಿಂದುಗಳು, ಎಂದು ತೋರಿಸಿಕೊಳ್ಳಲು ಬಹಿರಂಗವಾಗಿ ಪೂಜೆ, ಪುನಸ್ಕಾರ, ಹೋಮ ಹವನ, ದೇವಸ್ಥಾನ ಸುತ್ತುವುದು, ಮಠಗಳಿಗೆ ಅಲೆಯುವುದು, ಮತಧರ್ಮ ಮತ್ತು ರಾಜಕೀಯವನ್ನು ಬೆರೆಸುವುದು, ಹೀಗೆ ಹೊರ ಆಡಂಬರ ಹೆಚ್ಚಾಗಿದೆ. ಜಾತಿ, ಮತ, ಧರ್ಮಗಳು ಸಾರ್ವಜನಿಕ ಸೇವೆಯಲ್ಲಿರುವವರಿಗೆ, ಅದು ಅವರ ವೈಯಕ್ತಿಕ ನಂಬಿಕೆ ಆಗಿರಬೇಕೆ ಹೊರತಾಗಿ, ಮತ ಗಳಿಕೆಗೆ ಸಾರ್ವಜನಿಕವಾಗಿ ತೋರಿಸಿಕೊಳ್ಳುವ ಸಾಧನವಲ್ಲ. ಹೀಗಾಗಿ, ಬಿಜೆಪಿ-ಆರೆಸ್ಸೆಸ್‌ನ ಕೋಮುವಾದಿ ಹಿಂದುತ್ವ ಹಾಗು ಕಾಂಗ್ರೆಸ್‌ನ ಮೃದು ಹಿಂದುತ್ವ ಆಚರಣೆಯ ತೋರಿಕೆಯಲ್ಲಿ ಜನರು ಯಾವ ವ್ಯತ್ಯಾಸ ಕಾಣುತ್ತಿಲ್ಲ. ಹೀಗಾಗಿ ಇದೊಂದು, ಸಮಾಜವನ್ನು ಒಡೆಯುವ ಕೋಮುವಾದಿಗಳ ವಿರುದ್ದದ ಸಂವಿಧಾನಾಧಾರಿತ ವೈಚಾರಿಕ ಸಂಘರ್ಷವಾಗಿ ಕಾಂಗ್ರೆಸ್‌ನಲ್ಲಿ ಮೂಡಿ ಬರುತ್ತಿಲ್ಲ. ಇದರಿಂದ ಅಮಾಯಕ ಜನರು ಬಿಜೆಪಿಯ ಹಿಂದುತ್ವಕ್ಕೆ ಮೋಸ ಹೋಗಿದ್ದಾರೆ. ತತ್ವ ಸಿದ್ಧಾಂತಗಳಿಲ್ಲದ ಜನದ್ರೋಹಿ ರಾಜಕಾಣಿಗಳು ಹಾಗು ಅವರು ಮಾಡಿಕೊಂಡಿರಬಹುದಾದ ಅಕ್ರಮ ಆಸ್ತಿ ಹಾಗು ಸಂಪತ್ತುಗಳನ್ನು ಐ.ಟಿ., ಇ.ಡಿ., ಸಿ.ಬಿ.ಐ., ಗಳಿಂದ ಉಳಿಸಿಕೊಳ್ಳಲು ಹಾಗು ಜೈಲುವಾಸ ತಪ್ಪಿಸಿಕೊಳ್ಳಲು, ಬಿಜೆಪಿಗೆ ಜಾರಿದರೂ ಆಶ್ಚರ್ಯವಿಲ್ಲ. ಇದೇ ರೀತಿ ದೇಶದಲ್ಲಿ ಈಗಾಗಲೇ 880 ಕ್ಕೂ ಅಧಿಕ ಕಾಂಗ್ರೆಸ್ ಹಾಗು ಇತರ ಪಕ್ಷದ ಶಾಸಕರು, ಎಂ.ಪಿ.ಗಳು, ನಾಯಕರು ಬಿಜೆಪಿ ಸೇರಿ 'ಶುದ್ಧೀಕರಣ'ಗೊಂಡಿದ್ದಾರೆ. ಹಲವಾರು ಸಣ್ಣ ಪುಟ್ಟ ಪಕ್ಷಗಳು ಎನ್.ಡಿ.ಎ. ಸೇರಿವೆ. ಮತ್ತೊಂದೆಡೆ ಜನಾದೇಶದಿಂದ ಆಯ್ಕೆಯಾದ ಸರ್ಕಾರಗಳನ್ನು ಉರುಳಿಸುವುದು ಬಿಜೆಪಿಯ ದಂಧೆಯಾಗಿದೆ.

ಬಹುಶಃ ಇಂತಹ ಮತ್ತೊಂದು ಕಾರ್ಯಾಚರಣೆಯ ತಯಾರಿಯಲ್ಲಿರುವ, ಬಿಜೆಪಿ-ಜೆಡಿಎಸ್‌ನ್ನು, ಕಾಂಗ್ರೆಸ್ ಪಕ್ಷ ಹೇಗೆ ನಿಭಾಯಿಸುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಕಾಂಗ್ರೆಸನ್ನು ತ್ಯಜಿಸಲು ವೀರಶೈವ-ಲಿಂಗಾಯತ ಎನ್ನುವವರೂ ಈ ಸಂಚಿನಲ್ಲಿ ಸೇರಬಹುದೇ? 'ವೀರಶೈವ-ಲಿಂಗಾಯತ' ಅಧಿಕಾರಿಗಳಿಗೆ 'ಆಯಕಟ್ಟಿ'ನ ಹುದ್ದೆಗಳು ಸಿಗದಿರುವ ಸಮಸ್ಯೆ, ಈಗ ರಾಜಕೀಯ ಸಮಸ್ಯೆಯೂ ಆಗಿದೆ. ಈ ಬಗ್ಗೆ ವಿರೋಧ ಪಕ್ಷ ಬಿಜೆಪಿ-ಜೆಡಿ(ಎಸ್) ಪದೆ ಪದೇ, ಹೆಚ್ಚಾಗಿ ಮಾತನಾಡುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಕಾಂಗ್ರೆಸ್‌ನಲ್ಲಿನ ಲಿಂಗಾಯತರು ಪ್ರಾಮಾಣಿಕವಾಗಿ, ಒಗ್ಗಟ್ಟಿನಿಂದ ಇಂತಹ ಪಕ್ಷ ಒಡಕರ, ಅನೈತಿಕರ ಪ್ರಜಾಪ್ರಭುತ್ವ ವಿರೋಧಿಗಳನ್ನು ಹೇಗೆ ಎದುರಿಸುತ್ತಾರೆ ಎಂಬ ಬಗ್ಗೆ ಹಾಗು ಜನಸಾಮಾನ್ಯರಲ್ಲಿ ಇವರ ಕುತಂತ್ರ ಹೇಗೆ ಬಯಲಿಗೆ ಎಳೆಯುತ್ತಾರೆ ಎಂಬುದು ಸ್ಪಷ್ಟವಾಗಬೇಕಾಗಿದೆ. ಇದು ಹೇಗೆ ಅಂತಿಮವಾಗಿ ಬಿಜೆಪಿ-ಆರೆಸ್ಸೆಸ್‌ನ ಹಿಂದುತ್ವವನ್ನು ಸೋಲಿಸಲು ಹಾಗು ದೇಶದ ಸಂವಿಧಾನ ಕಾಪಾಡಲು ಹಾಗು ದೇಶದ ಸಾರ್ವಜನಿಕ ಸಂಪತ್ತನ್ನು ಉಳಿಸಲು ನಡೆಯುವ ಹೋರಾಟ ಏನು ರೂಪ ಪಡೆಯುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ●

ಬರಿಯ ನೆನಪಲ್ಲ! ಪ್ಯಾಲೆಸ್ತೇನಿ ಕವಿತೆಗಳು



ಬರಿಯ ನೆನಪಲ್ಲ

(ಪ್ಯಾಲೆಸ್ತೇನಿ ಭಾವುಕ ಕಥನ)

ಕುಸಿದ ಕಟ್ಟಡದ ಅವಶೇಷಗಳಿಂದ ಹೊರಬಂದ
ಮಗುವಿನ ಕೈ ನೋಡಿದಾಗೆಲ್ಲ
ನನ್ನ ಮೂರು ಮಕ್ಕಳ ಕೈಗಳನ್ನು
ಪರಿಶೀಲಿಸುತ್ತೇನೆ
ಕೈಬೆರಳುಗಳನ್ನು, ಕಾಲ್ಬೆರಳುಗಳನ್ನು
ಬಾಯಲ್ಲಿರುವ ಹಲ್ಲುಗಳನ್ನು!
ಕಡುಗಪ್ಪು ಹುಬ್ಬಿನ ತುಂಬೆಲ್ಲಇರುವ
ಒಂದೊಂದು ಕೂದಲನ್ನು ಎಣಿಸುತ್ತೇನೆ
ಅಲ್ ಯರ್ಮುಕ್ ಕ್ಯಾಂಪ್‌ನಲ್ಲಿ ಮಗುವೊಂದು
ಮೌನವಾದಾಗೆಲ್ಲ
ಟಿವಿ ರೇಡಿಯೋಗಳಲ್ಲಿ ಪ್ರಸಾರವಾಗುತ್ತಿರುವ
ಹಾಡುಗಳ ವಾಲ್ಯೂಮ್ ಹೆಚ್ಚಿಸುತ್ತೇನೆ
ನನ್ನ ಮೂರು ಮಕ್ಕಳನ್ನು ಚಿವುಟಿ,
ನೋಯಿಸಿ , ಅಳಿಸಿ ಬದುಕಿಗೆ ಮರಳಿಸುತ್ತೇನೆ
ಕಲಂದಿಯ ಚೆಕ್ಪಾಯಿಂಟ್‌ನಲ್ಲಿ
ನನ್ನ ಹುಣ್ಣಾದ ಹೃದಯಕ್ಕೆ ಹಸಿವಾದಾಗಲೆಲ್ಲ
ನೆಮ್ಮದಿಗಾಗಿ ತಿನ್ನುತ್ತೇನೆ
ಭಾವಾವೇಶದಲ್ಲಿ ಕೊಂಚ ಹೆಚ್ಚೇ ತಿನ್ನುತ್ತೇನೆ–
ಉಪ್ಪಿನ ಕಡುಬಯಕೆ
ಆಗ ನಾನು ಹೇಗಾದರೂ ಹೇಳಬಹುದು;
'ಸಾಕು ನನ್ನ ಸುತ್ತ ಅಳುತ್ತಿರುವ ಎಲ್ಲರ
ಕಣ್ಣೀರಲ್ಲಿ
ಕಿಡಿಯಾಗಿ ಹೊಮ್ಮುವ ಉಪ್ಪನ್ನು ತಡೆಗಟ್ಟಿ

ಮೂಲ : ಮಾಯಾ ಅಬು ಅಲ್–ಹಯ್ಯತ್
ಕನ್ನಡಕ್ಕೆ : ಆಕರ್ಷ ರಮೇಶ್ ಕಮಲ

ಆಟವೇ ಮುಗಿದಿತ್ತು

ಆಕಾಶದಿಂದ ಆಟಿಕೆಗಳು ಬೀಳುತ್ತಿವೆ ಎಂದು
ನೋಡುವಷ್ಟರಲ್ಲಿ

ಆಡಲು ಕೈ ಕಾಲುಗಳಿಲ್ಲ
ಮೈದಾನವೆಲ್ಲ ಹೆಣದ ರಾಶಿ
ನಿನ್ನ ಆಡಲು ಬಂದವರು ಇಂದು ಯಾರೂ
ಕಾಣುತ್ತಿಲ್ಲ.

ಇದ್ದಕ್ಕಿದ್ದಂತೆ ಬಂದೆರಗಿದ ಆ ಸದ್ದು, ಬೆಳಕು
ಏನೆಂದು ನೋಡುವಷ್ಟರಲ್ಲಿ
ಎಲ್ಲವೂ ಬೂದಿ

ನಿಮ್ಮ ಮನೆಯ ಮಕ್ಕಳು ಆಟವಾಡುವುದನ್ನೊಮ್ಮೆ
ನೆನೆಯಿರಿ
ನೀವು ಮಕ್ಕಳಾಗಿದ್ದಾಗ ಆಡಿದ್ದನ್ನೂ ಒಮ್ಮೆ
ನೆನೆಯಿರಿ

ನಿಮಗಿಲ್ಲದ ಶಿಕ್ಷೆ ನಮಗೇಕೆ
ನಾವು ಮಾಡಿದ ತಪ್ಪಾದರೂ ಏನು
ಈ ಭೂಮಿಯಲ್ಲಿ ತಪ್ಪಾಗಿ ಹುಟ್ಟಿದೆವಾ

ನಮ್ಮನ್ನು ಶಾಶ್ವತವಾಗಿ ಮಲಗಿಸಿ ನೀವು
ಸಾಧಿಸುವುದಾದರೂ ಏನನ್ನ
ನಾವಿಲ್ಲದ, ಸಾವೇ ತುಂಬಿರುವ ಸಮಾಜದಲ್ಲಿ
ನಿಮ್ಮ ದರ್ಬಾರು ಜೋರಾಗಿ ನಡೆಯಲ್ಲಿ

ಬಿದ್ದ ಗೋಡೆಗಳಿಗೆ, ಕರುಕಲಾದ ವಾಹನಗಳಿಗೆ
ನಿಮ್ಮ ರಾಜಕೀಯ ದ್ವೇಶದ ಆದೇಶವನ್ನು ನೀಡಿ
ಬೋಪರಾಕ್ ಹಾಕಿಸಿಕೊಳ್ಳಿ. ಪ್ಯಾಲೆಸ್ತೇನಿ

–ಎಚ್.ಆರ್.ನವೀನ್ ಕುಮಾರ್, ಹಾಸನ.

ಪ್ಯಾಲಿಸ್ತೇನ್ ಯುದ್ಧ ಆರಂಭ ಬಳಿಕ ನಿತ್ಯ
ಸಾವನಪ್ಪುವ ಕಹಾಗೂ ದಾಳಿಗೀಡಾಗುತ್ತಿರುವ
ಮುದ್ದು ಕಂದಮ್ಮಗಳಿಗೆ ಈ ಕವನ ಅರ್ಪಣೆ
ನೀವು ತಮ್ಮದಲ್ಲದ ತಪ್ಪಿಗೆ ಬಲಿಪಶುವಾಗುತ್ತಿರುವ
ಕಂದಮ್ಮಗಳಿಗೆ ಎರಡು ಸಾಂತ್ವಾನ ಮಾತುಗಳನ್ನು
ಹೇಳಿ

ಓ ನನ್ನ ಪ್ರೀತಿಯ
ಪ್ಯಾಲೆಸ್ತೇನ್ ಮಗುವೆ
ಅರಾಫತ್ ಎನ್ನುವ
ಕನಸುಗಾರನ ಕುಡಿಯೇ
ನೀ ನಿಂತಿರುವೆ
ಮನೆಯ ಮಹಡಿಗಳ
ಮೇಲೆ ಎತ್ತಿದಂಲೋ
ಹಾರಿಬರಹುದು ರಾಕೆಟ್‌ಗಳ ದಾಳಿ
ಆದರೆ .
ನಾ ಕುಂತಿರುವ ಮನೆಯಲ್ಲಿ
ಭಾರತದ ಬೌಲರ್‌ಗಳು ಕೂಡ
ಸಿಡಿಸುತ್ತಿದ್ದಾರೆ ರನ್‌ಗಳ ಮಹಾದಾಳಿ
ವ್ಯತ್ಯಾಸವಿಷ್ಟೇ ನೀ ಯುದ್ದವೆಂಬ ರಣಾಂಗದಲ್ಲಿ
ಏಕಾಂಗಿಯಾಗಿ ಅಳುತ್ತಿರುವೆ
ನಾ ಲಕ್ಷಾಂತರ ಜನರ ಜಯದ ಕೇಕೆಯಲ್ಲಿ ಮೈ
ಮರೆತಿರುವ ದೇಶಲ್ಲಿರುವೆ



ಈ ಸಂತಸದ ಗಳಿಗೆಯಲ್ಲಿ
ನಾ ಹೇಗೆ ತಾನೇ
ಬರೆಯಲಿ ನಿನ್ನ ಸಂಕಟದ
ಬಗೆಗಿನ ಕವಿತೆ ?

ಓ ನನ್ನ ಪ್ರೀತಿಯ
ಪ್ಯಾಲಿಸ್ಟೈನ್ ಮಗುವೆ
ನೀ ನಿಂತ ಅ ಮನೆಯ ಸುತ್ತಲು
ಕವಿದಿದೆ ಕತ್ತಲೆಯ ಕಾರ್ಮೋಡ
ಯಾವ ಕ್ಷಣದಲ್ಲಾದರೂ ಚಿಮ್ಮಬಹುದು
ಕೆಂಡದಂತ ಕ್ಷಿಪಣಿಗಳ ಕ್ರೋಧ
ಆದರೆ .
ನಾನೀರುವ ಊರಿನಲ್ಲೀಗ
ನವರಾತ್ರಿ–ವಿಜಯದಸಮಿಯ ಸಂಭ್ರಮ
ಕೋಟೆ ಕೊತ್ತಲಗಳಿಗೂ, ಗೋಡೆ ಗುಮ್ಮಟಗಳಿಗೂ
ಅರಮನೆ ಗುರುಮನೆಗೂ ಬಣ್ಣ ಬಣ್ಣದ ಅಲಂಕಾರ
ಹೇಳು ಮಗುವೆ
ನಾ ಹೇಗೆ ತಾನೇ
ನೀನಿರುವ ಕತ್ತಲ ಕೋಣೆಯ
ಬಗ್ಗೆ ಬರೆಯಲಿ ಕವಿತೆ ?

ಓ ನನ್ನ ಪ್ರೀತಿಯ
ಪ್ಯಾಲಿಸ್ಟೈನ್ ಮಗುವೆ
ನನಗೆ ಗೊತ್ತು ಈ ಯುದ್ದದಲಿ
ನಿನ್ನದಲ್ಲದ ತಪ್ಪಿನಿಂದ ಹೆತ್ತವರನ್ನು ಕಳಕೊಂಡು
ರೋಧಿಸುತ್ತಿರುವ
ಅನಾಥ ನೀನೆಂದು
ಆದರೆ .
ನಾವೀಗ ನಮ್ಮಯ ಹಿರಿಕರ ಪಿತೃಪಕ್ಷ ನೆಪದಲಿ ಥರ
ಥರದ ಭಕ್ಷ್ಯಗಳನ್ನು ಮಾಡಿ
ಹತ್ತಾರು ಜನರ ಹೊಟ್ಟೆ ತುಂಬಿಸಿದ
ಭಾವ ಬಂಧಿಯಲ್ಲಿ ಮೈಮರೆತಿರುವೆವು
ಹೇಳು ಮಗುವೆ
ದೂರದಲಿ ಒಡಹುಟ್ಟಿದವ
ಕಳೆದುಕೊಂಡು ಅನಾಥನಾಗಿರುವ
ನಿನ್ನ ನೋವಿನ ಬಗ್ಗೆ ನಾ
ಹೇಗೆ ಬರೆಯಲಿ ಕವಿತೆ..?

ಓ ನನ್ನ ಪ್ರೀತಿಯ
ಪ್ಯಾಲಿಸ್ಟೈನ್ ಮಗುವೆ
ಅರಾಫತ್ ಎನ್ನುವ
ಕನಸುಗಾರನ ಕುಡಿಯೇ
ಅಲ್ಲಿ ನಿನಗೆ
ನಾಳೆಗಳೆಂಬುದೇ ಮರೀಚಿಕೆಯಾಗಿದೆ
ಬಂಧುಗಳೆಂಬರು ಇಲ್ಲವಾಗುತಿಹರು
ಮನೆಗಳೆಂಬುದೇ ನಾಶವಾಗುತ್ತಿವೆ
ರಾತ್ರಿ ಬೆಳಗಾಗುವ ಖಾತ್ರಿಯೇ ಇಲ್ಲ ನಿನಗೆ
ಆದರೆ .
ನಮಗೋ ಇಲ್ಲಿ
ಮನೆಗಳ ಕಟ್ಟುವ ಭವಿಷ್ಯದ ಕನಸುಗಳಿವೆ
ನಾಳಿನ ದೀಪಾವಳಿಗೆ ದೀಪ ಹಚ್ಚುವ
ಬಣ್ಣ ಬಣ್ಣದ ಪಟಾಕಿಗಳ ಸಿಡಿಸುವ ಆಸೆಗಳಿವೆ
ಸಾಲದೆಂಬಂತೆ .
ಊರೂರು ತಿರುಗುತ್ತಾ ಬಿರುದು
ಬಾವಲಿಗಳನು ಪಡೆಯುವ ನಾ ಬರೆದ ಕಾವ್ಯಕ್ಕೆ
ಪ್ರಶಸ್ತಿಗಳ ಕಿರೀಟ ಧರಿಸುವ ಕನವರಿಕೆ ಮತ್ತು
ಬಯಕೆಗಳಿವೆ
ಇಂತಹ ಸುಮಧುರ ಈ ಗಳಿಗೆಯಲ್ಲಿ
ನಾ ಹೇಗೆ ತಾನೇ
ನಿನ್ನ ನೋವಿನ ಬಗ್ಗೆ
ನಿನ್ನ ಸಂಕಟಗಳ ಬಗ್ಗೆ
ನಿನ್ನ ಹೆತ್ತವರು ಕಳಕೊಂಡು ನೀ ಒಬ್ಬಂಟಿಯಾಗಿರುವ
ಬಗ್ಗೆ
ನಿನ್ನ ಹಸಿವು ಹಾಗೂ ಕೆನ್ನೆ ಮೇಲೆ
ಇಳಿದು ಒಣಗಿನಿಂತ ನಿನ್ನ ಕಣ್ಣೀರ ಬಗ್ಗೆ
ಹೇಗೆ ಬರೆಯಲಿ ನಾ ಕವಿತೆ..?
ಹೇಳು ಮಗುವೆ
ನಾ ಹೇಗೆ ಬರೆಯಲಿ
ಕವಿತೆ?–***ಕೆ. ಮಹಾಂತೇಶ್***

ಕಾವೇರಿ ನೀರಿಗಾಗಿ ಕೂಗು ಗೌಣವಾದರೂ........ ಪುಟ 3 ರಿಂದ

ಈ ಅವಧಿಯಲ್ಲಿ ಮತ್ತೆ ಮಳೆಯನ್ನು ಬರಲಿಲ್ಲ, ನೀರಿನ ಕೊರತೆಯನ್ನು ನೀಗಿಸಲಿಲ್ಲ. ಅಂದರೆ ಈಗಲೂ ಜನಗಳಿಗೆ ಜಾನುವಾರುಗಳಿಗೆ ಹಾಗೂ ಅಷ್ಟು ಇಷ್ಟು ಚಿಗುರಿ ನಿಂತಿರುವ ಪೈರಿಗೆ ನೀರು ಇಲ್ಲ ಅಥವಾ ಕೊರತೆ ಇದೆ. ಕಾವೇರಿ ನೀರು ಬಿಡುವ ಬಿಡದೇ ಇರುವ ಪ್ರಶ್ನೆ ಏನೇ ಇದ್ದರೂ ಒಟ್ಟು ಅರ್ಥದಲ್ಲಿ ಈಗ ಬಂದಿರುವ ಬರದ ಪರಿಣಾಮ ಅದರ ತೀವ್ರತೆ ಕಡಿಮೆಯಲಾಗಿಲ್ಲ. ಬದಲಾಗಿ, ಬೆಳೆಯುತ್ತಾ ಹೊರಟಿದೆ.

ವಿಚಿತ್ರ ಎಂದರೆ ಕಾವೇರಿ ನದಿಯ ನೀರಿಗಾಗಿ ನಡೆಯುತ್ತಿದ್ದ ಹೋರಾಟ ಕೊನೆಗೊಂಡ ಬಳಿಕ ಸರ್ಕಾರವು ಎಲ್ಲವೂ ಮುಗಿದಿದೆ, ಸುಖಾಂತ್ಯವಾಗಿದೆ ಎನ್ನುವಂತಹ ಭಾವನೆಯಲ್ಲಿರುವುದನ್ನು ಕಾಣುತ್ತೇವೆ. ಹಾಗೆ ನೋಡಿದರೆ ಬವಣೆಗಳು ಬದಲಾಗದ ಈ ಸ್ಥಿತಿಯಲ್ಲಿ ನಿಜಕ್ಕೂ ಜನತೆಯ ಬದುಕನ್ನು ಉಳಿಸಲು ಸರ್ಕಾರಗಳು ಮುತುವರ್ಜಿಯನ್ನು ವಹಿಸಲೇಬೇಕಿದೆ. ಕಾವೇರಿ ನದಿಯ ನೀರು ಹಂಚಿಕೆಯ ಸಮಸ್ಯೆ ತಾತ್ಕಾಲಿಕವಾಗಿ ಬಗೆಹರಿದರೂ, ಮರೆಯಾದರೂ ಜನರು ಎದುರಿಸುತ್ತಿರುವ ಸಮಸ್ಯೆಗಳೇನೂ ಮರೆಯಾಗುವುದಿಲ್ಲ, ಮರೆಯಾಗಿಲ್ಲ.

ಆದ್ದರಿಂದ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಜನರ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಉದ್ಯೋಗವಿಲ್ಲದೆ, ಆದಾಯವಿಲ್ಲದೆ ವ್ಯವಸಾಯವು ಇಲ್ಲವಾಗಿರುವುದರ ಹಿನ್ನೆಲೆಯಲ್ಲಿ ಬಹಳ ಮುಖ್ಯವಾಗಿ ಪರಿಹಾರದ ಪ್ಯಾಕೇಜ್ ನ್ನು ಪ್ರತಿ ಕುಟುಂಬಗಳಿಗೂ ನೀಡಬೇಕು. ಮತ್ತು ಸಂಕಷ್ಟದಿಂದ ಜನತೆಯನ್ನು ಕಾಪಾಡಬೇಕು. ಇದು ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳ ಹೊಣೆಗಾರಿಕೆಯಾಗಿದೆ. ಈ ದೆಸೆಯಲ್ಲಿ ಜನತೆಯ ಚಳುವಳಿಗಳು ಸಹ ಯೋಚಿಸಿ ಹಕ್ಕಿಗಾಗಿ ಕ್ರಿಯಾಶೀಲ ಪಾತ್ರ ವಹಿಸಬೇಕಿದೆ, ಹೋರಾಡಬೇಕಿದೆ. ಬೇಜವಾಬ್ದಾರಿಯುತ ಸರ್ಕಾರದಗಳ ಜವಾಬ್ದಾರಿಯನ್ನು ಎಚ್ಚರಿಸಬೇಕಿದೆ.

* * *

ಬರ: ಬಾರದ ಪರಿಹಾರ

ಮುಂಗಾರು ಮತ್ತು ಹಿಂಗಾರು ಮಳೆಯ ಅಭಾವದಿಂದ ಒಟ್ಟಾರೆಯಾಗಿ ಇಡೀ ಕರ್ನಾಟಕವೇ ತೀವ್ರ ಬರದ ದವಡೆವರೆಗೆ ಸಿಲುಕಿದೆ. ರಾಜ್ಯ ಸರ್ಕಾರ ಕೊಂಚ ತಡವಾಗಿಯಾದರೂ ಮೊದಲ ಹಂತದಲ್ಲಿ 195 ತಾಲೂಕುಗಳು ಬರಗಾಲದಿಂದ ಬಾದಿತವಾಗಿದೆ ಎಂದು ಘೋಷಿಸಿತು. ನಂತರ ಎಲ್ಲ ಜಿಲ್ಲೆಗಳಲ್ಲಿನ ವಾಸ್ತವಿಕ ಅಧ್ಯಯನ ಮತ್ತು ಪರಿಶೀಲನಾ ವರದಿ ಪಡೆದು ಮತ್ತೆ 41 ತಾಲೂಕುಗಳು ಬರದ ದವಡೆಗೆ ಸಿಲುಕಿವೆ ಎನ್ನುವುದು ಖಚಿತವಾಯಿತು. ಇನ್ನು ಉಳಿದವೆಂದರೆ ಸುಮಾರು 20 ತಾಲೂಕುಗಳು ಮಾತ್ರ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಕೋರಿಕೆಯಂತೆ ಕೇಂದ್ರದಿಂದ ಬರ ಅಧ್ಯಯನ ತಂಡಗಳು ರಾಜ್ಯದಲ್ಲಿ ಹತ್ತು ದಿನಗಳ ವಿಸ್ತೃತ ಪ್ರವಾಸವನ್ನು ಮಾಡಿದವು. ಮತ್ತು ಆಗಿರುವ ಹಾನಿಯ ಅಂದಾಜನ್ನು ಮಾಡುತ್ತೇವೆ ಎಂದಿದೆ. ಹೀಗೆ ಇಲ್ಲಿಗೆ ಬಂದ ಬರ ಅಧ್ಯಯನ ತಂಡಗಳು ದೆಹಲಿಗೆ ಹೋಗಿ ಸರ್ಕಾರಕ್ಕೆ ವರದಿಯನ್ನು ಕೊಟ್ ಬಳಿಕ ಭಾರತ ಸರ್ಕಾರ ಈ ನೈಸರ್ಗಿಕ ವಿಕೋಪಕ್ಕೆ ಪರಿಹಾರದ ಮೊತ್ತವನ್ನು ಕೊಡಲೇಬೇಕಾಗುತ್ತದೆ. ಆದರೆ ಕೇಂದ್ರ ಸರ್ಕಾರ ವರದಿಯನ್ನು ಪಡೆಯಲು, ಸಂಪುಟದಲ್ಲಿ ಚರ್ಚಿಸಲು, ಹಣಕಾಸು ಒದಗಿಸಲು ಇನ್ನೆಷ್ಟು ದಿನಗಳನ್ನು ಅದು ತೆಗೆದುಕೊಳ್ಳುತ್ತದೆ ಎನ್ನುವುದೇ ಬಹುದೊಡ್ಡ ಪ್ರಶ್ನೆ. ಈ ಲೆಕ್ಕಾಚಾರಗಳು ಏನೇ ನಡೆಯುತ್ತಿದ್ದರೂ ಜನತೆಗೆ ಪರಿಹಾರ ಕೂಡಲೇ ಒದಗಿಸುವ ಅವಶ್ಯಕತೆ ಇದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ 475 ಕೋಟಿ ರೂಪಾಯಿಗಳನ್ನು ಬಾಕಿ ಇರಿಸಿಕೊಂಡಿರುವ ಕೇಂದ್ರ ಸರ್ಕಾರವು ಕೂಡಲೇ ಅದನ್ನು ಬಿಡುಗಡೆ ಮಾಡಬೇಕು ಎಂದು ಕರ್ನಾಟಕ ಸರ್ಕಾರ ಕೇಳಿದೆ. ಈ ಹಣವನ್ನು ನೀಡುವುದರ ಜೊತೆಗೆ ಈಗಾಗಲೇ ಅಧ್ಯಯನ ಮಾಡಿರುವ ತಂಡಗಳಿಂದ ಕೂಡಲೇ ವರದಿಯನ್ನು ಆಧರಿಸಿ ತಕ್ಷಣದಲ್ಲಿ ಹಣವನ್ನು ನೀಡಬೇಕು. ಆಗಿರುವ ಹಾನಿಯ ಅಂದಾಜಿನ ಯಾವುದೋ ಒಂದು ಸಣ್ಣ ಭಾಗವನ್ನು ಮಾತ್ರ ಕೊಟ್ಟು ಕೈ ತೊಳೆದುಕೊಳ್ಳುವ ಹೊಣೆಗೇಡಿತನವನ್ನು ಹಿಂದೆ ಕೇಂದ್ರ ಸರ್ಕಾರಗಳು ಅನುಸರಿಸಿವೆ. ಇದು ಕೂಡದು. ಸಂಕಷ್ಟದಲ್ಲಿರುವ ರಾಜ್ಯಗಳಿಗೆ ಹಣಕಾಸಿನ ಸಂಪೂರ್ಣ ನೆರವನ್ನು ಮತ್ತು ಆಹಾರದ ಧಾನ್ಯಗಳನ್ನು ಕೇಂದ್ರ ಸರ್ಕಾರ ಒದಗಿಸಬೇಕು.

ಇಸ್ರೇಲ್ ಯುದ್ಧಾಪರಾಧಗಳಲ್ಲಿ ಅಮೆರಿಕ ಶಾಮೀಲು



ಪ್ರಕಾಶ್ ಕಾರತ್

ಅಮೆರಿಕ ಅಧ್ಯಕ್ಷ ಜೋ ಬೈಡೆನ್ ಅಕ್ಟೋಬರ್ 18ರಂದು ಟೆಲ್ ಅವೀವ್‌ಗೆ ನೀಡಿದ ಭೇಟಿಯು ಇಸ್ರೇಲಿ ವಸಾಹತುಗಾರ–ವಸಾಹತು ಪ್ರಭುತ್ವಕ್ಕೆ ಅಚಲವಾದ ಹಾಗೂ ಅಂಧ ಬೆಂಬಲದ ಪ್ರದರ್ಶನವಲ್ಲದೆ ಬೇರೇನೂ ಅಲ್ಲ. ಈ ಭೇಟಿಯು 1948ರಿಂದ ಬದಲಾಗದ ವಾಸ್ತವವನ್ನು ಮತ್ತೆ ಎತ್ತಿ ತೋರಿಸಿದೆ–ಪಶ್ಚಿಮ ಏಷ್ಯಾದಲ್ಲಿ ತನ್ನ ಹೊರ ಠಾಣೆಯಾಗಿ ಇಸ್ರೇಲ್‌ಅನ್ನು ಬೆಳೆಸಿ ಪೋಷಿಸಿದ್ದೇ ಆ ವಾಸ್ತವವಾಗಿದೆ. ಇಸ್ರೇಲನ್ನು ಒಂದು ಮಿಲಿಟರಿ–ದಂಡು ಪ್ರದೇಶವಾಗಿ (ಗ್ಯಾರಿಸನ್) ಮಾಡಲು ಅದಕ್ಕೆ ಅಮೆರಿಕ ಶತಕೋಟಿ ಗಟ್ಟಲೆ ಡಾಲರ್ ನೆರವನ್ನು ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರ ಹಾಗೂ ಸಾಧನ–ಸಲಕರಣೆಗಳನ್ನು ಹರಿಸಿದೆ.

ಹಾಗೆ ಮಾಡುವ ಮೂಲಕ ಪ್ಯಾಲೆಸ್ತೀನಿ ಜನರಿಗಾದ ದೌರ್ಜನ್ಯವನ್ನು, ಅವರು ಅನುಭವಿಸಿದ ದಬ್ಬಾಳಿಕೆಗಳನ್ನು ಮತ್ತು ಪಶ್ಚಿಮ ದಂಡೆಯಂಥ ಆಕ್ರಮಿತ ಪ್ರದೇಶಗಳಲ್ಲಿ ಈಗಲೂ ಮುಂದುವರಿದಿರುವ ಜನಾಂಗೀಯ ಶುದ್ಧಿಕರಣ (ಕ್ಲೀನ್ಸಿಂಗ್) ಪ್ರಕ್ರಿಯೆಯನ್ನು ಅಮೆರಿಕ ಸಂಪೂರ್ಣವಾಗಿ ನಿರ್ಲಕ್ಷಿಸಿದೆ. 23 ಲಕ್ಷ ಪ್ಯಾಲೆಸ್ತೀನಿ ಜನರ ವಾಸಸ್ಥಳವಾಗಿರುವ ಗಾಜಾಕ್ಕೆ ಕಳೆದ 16 ವರ್ಷದಿಂದ ಹಾಕಲಾಗಿರುವ ಅಮಾನವೀಯ ದಿಗ್ಬಂಧನಕ್ಕೆ ಅದು ಬೆಂಬಲ ನೀಡಿದೆ.

ಪಶ್ಚಿಮ ದಂಡೆಯಲ್ಲಿ ಯೆಹೂದಿ ವಸಾಹತುಗಳನ್ನು ವಿಸ್ತರಿಸುವ ಹಾಗೂ ಜನಾಂಗಭೇದದಂಥ ವ್ಯವಸ್ಥೆಯನ್ನು ಹೇರುವ ಮೂಲಕ ಇಸ್ರೇಲ್ ಪ್ರಭುತ್ವ ಇತ್ತೀಚಿನ ವರ್ಷಗಳಲ್ಲಿ ಎರಡು–ರಾಷ್ಟ್ರ ಸೂತ್ರವನ್ನು ಸಕ್ರಿಯವಾಗಿ ದುರ್ಬಲಗೊಳಿಸುತ್ತಿದೆ. ಎರಡು–ರಾಷ್ಟ್ರ ಪರಿಹಾರಕ್ಕೆ ಬರಿ ಮಾತಿನ–ಸಹಾನುಭೂತಿ ತೋರಿಸುತ್ತಲೇ ಪಶ್ಚಿಮ ದಂಡೆಯಲ್ಲಿ ಯೆಹೂದಿಗಳ ನೆಲೆಯನ್ನು ವಿಸ್ತರಿಸುತ್ತಾ ಮತ್ತು ವರ್ಣಬೇಧ ನೀತಿಯಂತಹ ವ್ಯವಸ್ಥೆಯನ್ನು ಹೇರುತ್ತಿದೆ. ಈ ನಿರ್ದಯ, ಪೈಶಾಚಿಕ ಕಾರ್ಯದಲ್ಲಿ ಅಮೆರಿಕ ಹಾಗೂ ಅದರ ಪಾಶ್ಚಿಮಾತ್ಯ ಮಿತ್ರರು ಈ ಶಾಮೀಲಾಗಿದ್ದಾರೆ.

ಬೈಡೆನ್ ಭೇಟಿಗೂ ಮುನ್ನ, ಅವರ ವಿದೇಶಾಂಗ ಕಾರ್ಯದರ್ಶಿ ಅಂತೋನಿ ಬ್ಲಿಂಕೆನ್ ಇಸ್ರೇಲ್ ಮಾತ್ರವಲ್ಲದೆ ಐದು ಅರಬ್ ದೇಶಗಳಿಗೆ ಸುತ್ತಾಡಿ, ಗಾಜಾದಲ್ಲಿ ಭೂ ದಾಳಿ ನಡೆಸಲು ಸಜ್ಜಾಗುತ್ತಿರುವ ಇಸ್ರೇಲ್‌ಗೆ ಈಜಿಪ್ಟ್ ಮತ್ತು ಜೋರ್ಡಾನ್‌ನಂಥ ನೆರೆಯ ದೇಶಗಳ ಸಹಕಾರ ಕ್ರೋಡೀಕರಿಸಲು ಪ್ರಯತ್ನಿಸಿದರು. ಪ್ಯಾಲೆಸ್ತೀನಿಯರು ರಫಾ ಕ್ರಾಸಿಂಗ್ ಮೂಲಕ ಗಾಜಾದಿಂದ ಈಜಿಪ್ಟ್‌ಗೆ ತೆರಳುವ ಕ್ರಮಕ್ಕೆ ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತಾ ಎಲ್–ಸಿಸಿ ಅವರ ಮನವೊಲಿಸಲು ಬ್ಲಿಂಕೆನ್ ವಿಫಲರಾದರು. ಸಿಸಿ ಹೇಳಿದ ಹಾಗೆ, ಪ್ಯಾಲೆಸ್ತೀನಿಯರನ್ನು ಒಮ್ಮೆ ಈಜಿಪ್ಟ್‌ನೊಳಗೆ ಬಿಟ್ಟರೆ ಅವರು ಗಾಜಾಕ್ಕೆ ಮರಳಲು ಅವಕಾಶ ನೀಡುವುದಿಲ್ಲ. ಇದರಿಂದಾಗಿ ಅವರು ಈಜಿಪ್ಟ್‌ನ ಕಾಯಂ ನಿರಾಶ್ರಿತರಾಗುತ್ತಾರೆ. ತಮ್ಮ ದೇಶದೊಳಗೆ ಪ್ಯಾಲೆಸ್ತೀನಿಯರ ಆಗಮನವನ್ನು ಜೋರ್ಡಾನ್ ಕೂಡ ತಿರಸ್ಕರಿಸಿತು.

ಗಾಜಾ ಮೇಲೆ ಆಕ್ರಮಣ ಮಾಡಿದ್ದು ಇಸ್ರೇಲ್‌ನ ಸ್ವಯಂ–ರಕ್ಷಣೆಯ ಹಕ್ಕು ಎಂಬುದನ್ನು ಸಂಪೂರ್ಣವಾಗಿ ಅನುಮೋದಿಸಿದ ಮೇಲೆ ಅಮೆರಿಕ ಮುಂದೆ ನಡೆಯಲಿರುವ ಮಾನವ ಮಹಾದುರಂತವನ್ನು ತಡೆಯಲು ದಿಕ್ಕೆಟ್ಟು ಓಡಾಡುತ್ತಿದೆ.

ಬೈಡೆನ್ ಟೆಲ್ ಅವೀವ್ ತಲುಪುವ ಮುನ್ನಾ ದಿನ ರಾತ್ರಿ ದಕ್ಷಿಣ ಗಾಜಾದಲ್ಲಿ ಅಲ್–ಅಹ್ಲಿ ಆಂಗ್ಲಿಕನ್ ಆಸ್ಪತ್ರೆ ಮೇಲೆ ನಡೆದ ಅಮಾನವೀಯ ಬಾಂಬ್ ದಾಳಿಯಲ್ಲಿ 471 ಜನರು ಮೃತಪಟ್ಟಿದ್ದಾರೆ. ಉತ್ತರ ಗಾಜಾದ 22 ಆಸ್ಪತ್ರೆಗಳಿಂದ ರೋಗಿಗಳು ಮತ್ತು ಸಿಬ್ಬಂದಿಯನ್ನು 24 ಗಂಟೆಯೊಳಗೆ ತೆರವು ಮಾಡುವಂತೆ ಇಸ್ರೇಲಿ ಮಿಲಿಟರಿ ಆದೇಶಿಸಿದ ಹಿನ್ನೆಲೆಯಲ್ಲಿ ಈ ಘೋರ ದಾಳಿ ನಡೆದಿದೆ. ತೆರವು ಮಾಡದಿದ್ದರೆ ಆಗುವ ಅನಾಹುತಗಳಿಗೆ ನೀವೇ ಹೊಣೆ ಎಂದೂ ಮಿಲಿಟರಿ ಬೆದರಿಕೆ ಹಾಕಿತ್ತು. ಅಕ್ಟೋಬರ್ 12ರ ಸಂಜೆ ತೆರವು ಆದೇಶ ಹೊರಡಿಸಲಾಗಿತ್ತು ಹಾಗೂ ಅಕ್ಟೋಬರ್ 15ರಂದು ಅಲ್–ಅಹ್ಲಿ ಆಸ್ಪತ್ರೆ ಮೇಲೆ ಮೊದಲ ರಾಕೆಟ್ ಅಪ್ಪಳಿಸಿದೆ. ಆಸ್ಪತ್ರೆ ಮೇಲಿನ ಬಾಂಬ್ ದಾಳಿಗೆ ತಾನು ಹೊಣೆಯಲ್ಲ ಎಂದು ಇಸ್ರೇಲ್ ಈಗ ಹೇಳಿಕೊಳ್ಳುತ್ತಿದೆ. ಇಸ್ಲಾಮಿಕ್ ಜಿಹಾದ್ ಸಂಘಟನೆ ಹಾರಿಸಿದ ರಾಕೆಟ್ ಗುರಿತಪ್ಪಿ ಈ ದುರಂತ ಸಂಭವಿಸಿದೆ ಎಂದು ಅದು ಹೇಳಿದೆ. ಗಾಜಾ ಉಗ್ರಗಾಮಿಗಳ ಬಳಿ ಇಷ್ಟು ಪ್ರಬಲವಾದ ಸ್ಫೋಟಕಗಳ ರಾಕೆಟ್‌ಗಳೇ ಇಲ್ಲ ಎನ್ನುವುದು ಮಿಲಿಟರಿ ತಜ್ಞರು ಮತ್ತು ಮಾಧ್ಯಮ ವಿಶ್ಲೇಷಕರ ಅಭಿಪ್ರಾಯವಾಗಿದೆ. ಇಸ್ರೇಲಿ ಮಿಲಿಟರಿ ಬಳಿ ಮಾತ್ರವೇ ಇಂಥ ಪ್ರಬಲ ಬಾಂಬ್‌ಗಳಿವೆ.

ಇಷ್ಟಾಗಿಯೂ ಅಮೆರಿಕ ಅಧ್ಯಕ್ಷ ಬೈಡೆನ್ ನಾಚಿಕೆ ಬಿಟ್ಟು ಇಸ್ರೇಲ್‌ನ ನಿಲುವನ್ನು ಬೆಂಬಲಿಸಿದ್ದಾರೆ. 'ಬೇರೆ ತಂಡದವರು' ಈ ಕೃತ್ಯ ನಡೆಸಿದ್ದಾರೆ ಎಂದವರು ಹೇಳಿದ್ದಾರೆ. ಈ ರೀತಿಯಾಗಿ, ಇಸ್ರೇಲ್‌ನ ಯುದ್ಧಾಪರಾಧಗಳಲ್ಲಿ ಬೈಡೆನ್ ಶಾಮೀಲಾಗಿದ್ದಾರೆ. ಜೋರ್ಡಾನ್, ಈಜಿಪ್ಟ್ ಮತ್ತು ಪ್ಯಾಲೆಸ್ತೀನಿ ಪ್ರಾಧಿಕಾರದ ನಾಯಕರೊಂದಿಗೆ ಅಮ್ಮಾನ್‌ನಲ್ಲಿ ನಡೆಯಬೇಕಿದ್ದ ಸಭೆಯನ್ನು ರದ್ದುಪಡಿಸುವ ಮೂಲಕ ಬೈಡೆನ್ ಮುಖಕ್ಕೆ ಮಂಗಳಾರತಿ ಮಾಡಲಾಗಿದೆ. ಇಸ್ರೇಲ್ ಈ ಭಯಾನಕ ಅಪರಾಧ ನಡೆಸಿರುವಾಗ ಅಮೆರಿಕದ ಮಿತ್ರ ದೇಶದವರ ಸಹಿತ ಯಾವುದೇ ಅರಬ್ ನಾಯಕರು ಕೂಡ ಬೈಡೆನ್‌ರನ್ನು ಭೇಟಿಯಾಗಲಿಲ್ಲ. ಇಸ್ರೇಲನ್ನು ರಕ್ಷಿಸಲು ಅಮೆರಿಕ ಯಾವ ಮಟ್ಟಕ್ಕೂ ಇಳಿಯುತ್ತದೆನ್ನುವುದು ಬೈಡೆನ್‌ರ ಇಸ್ರೇಲ್ ಭೇಟಿಯ ಮೊದಲ ದಿನವೇ ಸ್ಪಷ್ಟವಾಗಿತ್ತು.

ವಿಶ್ವ ಸಂಸ್ಥೆಯ ನಿರ್ಣಯದ ವಿರುದ್ಧ ಅಮೆರಿಕದ ವಿಟೋ

ಜೀವರಕ್ಷಕ ಸಾಮಗ್ರಿಗಳನ್ನು ಗಾಜಾದೊಳಗೆ ಒಯ್ಯಲು ಅನುಕೂಲವಾಗುವಂತೆ 'ಮಾನವೀಯ ವಿರಾಮ' ನೀಡಬೇಕೆಂದು ಕರೆ ನೀಡಿ ವಿಶ್ವ ಸಂಸ್ಥೆ ಭದ್ರತಾ ಮಂಡಳಿಯಲ್ಲಿ ಬ್ರೆಜಿಲ್ ಮಂಡಿಸಿದ್ದ ನಿರ್ಣಯದ ವಿರುದ್ದ ಅಮೆರಿಕ ವಿಟೋ ಚಲಾಯಿಸಿತ್ತು. ಮಾನವೀಯ ಸರಬರಾಜುಗಳಿಗೆ ಅವಕಾಶ ಕೋರುವ ಗೊತ್ತುವಳಿಗೆ ನೀಡಿದ ವಿಟೋ ಗಾಜಾದಲ್ಲಿ ಜನರು ಆಹಾರ ಮತ್ತು ಔಷಧಿಗಳಿಲ್ಲದೆ ಹಸಿವಿನಿಂದ ನರಳುವಲ್ಲಿ ಅಮೆರಿಕ ಶಾಮೀಲಾಗಿರುವುದು ಸಾಬೀತಾಗುತ್ತದೆ.

ರಫಾ ಕ್ರಾಸಿಂಗ್ ಮೂಲಕ ಜೀವರಕ್ಷಕ ಸಾಮಗ್ರಿಗಳನ್ನು ಸಾಗಿಸಲು ಅವಕಾಶ ನೀಡುವಂತೆ ಇಸ್ರೇಲಿ 'ಯುದ್ಧ ಸಂಪುಟ'ಕ್ಕೆ ತಾನು ಸೂಚಿಸಿರುವುದಾಗಿ ತನ್ನ ಭೇಟಿಯ ನಂತರ ಬೈಡೆನ್ ಹೇಳಿದ್ದಾರೆ. ಅದರ ಫಲವಾಗಿ, ಸಾಮಗ್ರಿಗಳನ್ನು ಹೊತ್ತಿರುವ 20 ಟ್ರಕ್‌ಗಳು ದಾಟಿ ಸಾಗಲು ಅಕ್ಟೋಬರ್ 20ರಂದು ಅವಕಾಶ ನೀಡುವ ಸಾಧ್ಯತೆಯಿದೆ. ಅದರಲ್ಲೂ ಕ್ರಾಸಿಂಗ್‌ನಲ್ಲಿವ ರಸ್ತೆಗಳನ್ನು ಈಜಿಪ್ಟ್ ರಿಪೇರಿ ಮಾಡಿದರೆ ಮಾತ್ರವೇ ಇದು ಸಾಧ್ಯವಾಗಲಿದೆ. ಸಂತ್ರಸ್ತರಿಗೆ ಕೆಲವು ಕನಿಷ್ಠ ಪರಿಹಾರಗಳನ್ನಾದರೂ ಒದಗಿಸಬೇಕಾದರೆ ಪ್ರತಿ ದಿನ ಕನಿಷ್ಠ 100 ಟ್ರಕ್‌ಗಳಾದರೂ ಹಾದು ಹೋಗಬೇಕು ಎಂದು ವಿಶ್ವ ಸಂಸ್ಥೆಯ ಪರಿಹಾರ ಸಂಸ್ಥೆ ಹೇಳಿದೆ.

ಗಾಜಾ ಮೇಲೆ ಇಸ್ರೇಲ್ ನಡೆಸುವ ಭೂ ಆಕ್ರಮಣವು ಈ ವಲಯದಲ್ಲಿ ಸಂಘರ್ಷವನ್ನು ಇನ್ನಷ್ಟು ವಿಸ್ತರಿಸಲಿದೆ. ಈ ರೀತಿಯ ದಾಳಿ ನಡೆದರೆ ತಾನು ಸುಮ್ಮನಿರುವುದಿಲ್ಲ ಎಂದು ಲೆಬನಾನ್‌ನ ಹೆಜ್ಬುಲ್ಲಾ ಸಂಘಟನೆ ಈಗಾಗಲೇ ಘೋಷಿಸಿದೆ. ಅರಬ್ ಜಗತ್ತು ಮತ್ತು ಪಶ್ಚಿಮ ಏಷ್ಯಾದ್ಯಂತ ಜನರು ಬೀದಿಗಿಳಿದು ಗಾಜಾದಲ್ಲಿ ಇಸ್ರೇಲ್‌ನ ಬರ್ಬರ ಆಕ್ರಮಣವನ್ನು ಪ್ರತಿಭಟಿಸುತ್ತಿದ್ದಾರೆ. ಸಂಘರ್ಷದ 11ನೇ ದಿನದ ವರೆಗೆ, 1,000ಕ್ಕೂ ಹೆಚ್ಚು ಮಕ್ಕಳ ಸಹಿತ 3,000ಕ್ಕೂ ಅಧಿಕ ಜನರು ಪ್ರಾಣ ಕಳೆದು ಕೊಂಡಿದ್ದಾರೆ. ಇಸ್ರೇಲ್‌ಗೆ ರಾಜಕೀಯ ಮತ್ತು ಮಿಲಿಟರಿ ಬೆಂಬಲ ಒದಗಿಸಿರುವ ಅಮೆರಿಕ ಇಡೀ ಜಗತ್ತಿನ ಕಣ್ಣಿನಲ್ಲಿ ಅಪರಾಧಿಯಾಗಿದೆ.

ಅನು: ವಿಶ್ವ

ಸೌಹಾರ್ದ ಸಾಹಿತ್ಯ ಓದು ಮತ್ತು ಸೌಹಾರ್ದ ತಾಣಗಳ ಭೇಟಿ ಅಭಿಯಾನ... ಪುಟ 4 ರಿಂದ

ಆವರಿಸಬೇಕು. ಹಳ್ಳಿಹಳ್ಳಿಗಳಲ್ಲಿ, ನಗರ ಪಟ್ಟಣಗಳ ವಿಸ್ತರಣಗಳಲ್ಲಿ ಜನರನ್ನು ಒಳಗೊಳಿಸಿ ಓದು ಕಾರ್ಯಕ್ರಮ ನಡೆಯಬೇಕು. ಓದು ಕಾರ್ಯಕ್ರಮದಲ್ಲಿ ಆಯಾ ಪ್ರದೇಶಗಳಲ್ಲಿ ಜನರನ್ನು ಸೆಳೆಯಬಹುದಾದ ಮಹಾನ್ ವ್ಯಕ್ತಿಗಳ ಹೇಳಿಕೆಗಳು, ಬರಹಗಳು, ಕತೆ, ಕವಿತೆ, ಹಾಡು, ಜಾನಪದ, ಪ್ರಬಂಧ, ಕಾದಂಬರಿಗಳು ಇತಿಹಾಸದ ಪುಸ್ತಕಗಳು ಇತ್ಯಾದಿ ಆರಿಸಿಕೊಳ್ಳಬೇಕು.

ಇದಕ್ಕೆ ಕೇವಲ ಉದಾಹರಣೆಯಾಗಿ ಕೆಳಗೆ ಕೆಲವು ಬರಹಗಳನ್ನು ಹೆಸರಿಸಿದೆ. ಪ್ರತಿ ಜಿಲ್ಲೆಯಲ್ಲಿಯೂ ಹಲವು ಸೌಹಾರ್ದ ತಾಣಗಳಿವೆ. ಹಿಂದೂ ಮುಸ್ಲಿಂ ಸಂತರು, ದೇವಾಲಯ, ಮಸೀದಿ, ದರ್ಗಾ, ಚರ್ಚ್‌ಗಳ ನಡುವೆ ಆತ್ಮೀಯ ಬಾಂಧವ್ಯಗಳ ಉದಾಹರಣೆಗಳಿವೆ. ಇಂತಹ ತಾಣಗಳಿಗೆ ಭೇಟಿ, ಸ್ಥಳೀಯರಿಂದ ಇವುಗಳ ಕಥನಗಳನ್ನು ತಿಳಿದುಕೊಳ್ಳುವುದು ಈ ಕಾರ್ಯಕ್ರಮದ ಉದ್ದೇಶ.

ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು, ಉಪನ್ಯಾಸಕರುಗಳ ತಂಡಗಳು ಭಾಗವಹಿಸಬಹುದಾದ ಸಾಹಿತಿ, ಕಲಾವಿದರೊಡನೆ ವಿಭಿನ್ನ ಕ್ಷೇತ್ರಗಳ ಪ್ರಮುಖರೊಂದಿಗೆ ವಿವಿಧ ತಾಣಗಳಿಗೆ ಭೇಟಿ ನೀಡುವುದು, ಭೇಟಿ ನೀಡಿದವರಿಗೆ ಸೌಹಾರ್ದ ಜೀವನದ ಸೊಬಗಿನ ಅರಿವಲ್ಲದೆ, ಭಾಗವಹಿಸದವರಿಗೂ ತಿಳಿಯುವಂತೆ ಪತ್ರಿಕೆಗಳಲ್ಲಿ, ಸುದ್ದಿ ಮಾಧ್ಯಮಗಳಲ್ಲಿ ಬರಹ, ಉಪನ್ಯಾಸಗಳನ್ನು ಏರ್ಪಡಿಸುವುದು ಇದರ ಉದ್ದೇಶ. ಇಂತಹ ತಾಣಗಳ ಬಗ್ಗೆ ರಾಜ್ಯಾದ್ಯಂತ ಎಲ್ಲರಿಗೂ ತಿಳಿಯಪಡಿಸಬೇಕು. ಇವುಗಳ ಬಗ್ಗೆ ಪ್ರಬಂಧ ಸಂಕಲನಗಳನ್ನು ಪ್ರಕಟಿಸಬೇಕು.

ಈ ಅಭಿಯಾನದ ಯಶಸ್ವಿಗೆ ಸಹೃದಯಿಗಳಾದ ತಾವೆಲ್ಲರೂ ಕೈಜೋಡಿಸಬೇಕು, ಕ್ರಿಯಾಶೀಲವಾಗಿ ತೊಡಗಿಸಿಕೊಳ್ಳಬೇಕು ಎಂದು ಮನವಿ ಮಾಡುತ್ತಿದ್ದೇವೆ.

ಓದಿನಲ್ಲಿ ಒಳಗೊಳ್ಳಬಹುದಾದ ಕೆಲವು ಉದಾಹರಣೆಗಳು

- ಸೂಫಿಸಂತರ, ತತ್ವ ಪದಕಾರರ ಸಂಬಂಧಿತ ಹಾಡುಗಳು.
- ಕುವೆಂಪು, ದ.ರಾ.ಬೇಂದ್ರೆ, ಜಿ.ಎಸ್. ಶಿವರುದ್ರಪ್ಪ ಮುಂತಾದವರ ಕವಿತೆ, ಬರಹಗಳು.
- ಬರಗೂರು ರಾಮಚಂದ್ರಪ್ಪ, ರಹಮತ್ ತರೀಕೆರೆ, ಜಿ.ರಾಜಶೇಖರ್, ಕೆ.ನೀಲಾ ಎ.ಕೆ. ಸುಬ್ಬಯ್ಯ ಮೊದಲಾದವರ ಪ್ರಬಂಧಗಳು, ಬರಹಗಳು.
- ಬಿಷಮ್ ಸಾಹ್ನಿಯವರ ತಮಸ್ ಕಾದಂಬರಿಯ ಭಾಗಗಳು
- ಖುಷವಂತ ಸಿಂಗರ ಪಾಕಿಸ್ತಾನದ ಗಾಡಿಯ ಭಾಗಗಳು.
- ಸುದೀಶ್ ಮಿನ್ನಿಯವರ 'ನರಕದ ಗರ್ಭಗುಡಿಯೊಳಗೆ' ಪುಸ್ತಕ.
- ರಾಮಚಂದ್ರ ಗುಹಾರವರ ಬಾಪೂ ನಂತರದ ಭಾರತ ಕೃತಿಯ ಮೊದಲ ಐದು ಅಧ್ಯಾಯಗಳು – ಸ್ವಾತಂತ್ರ್ಯ ಮತ್ತು ಪಿತೃ ಹತ್ಯೆ, ವಿಭಜನೆಯ ತರ್ಕ, ಕುಕ್ಕೆಯೊಳಗಿನ ಫಲ, ರುದ್ರ ರಮಣೀಯ ಕಣಿವೆ, ನಿರಾಶ್ರಿತರು ಮತ್ತು ಗಣರಾಜ್ಯ.
- 'ಬರ್ಕ್‌ವೈಟ್ ಕಂಡ ಭಾರತ'ದ ಅಧ್ಯಾಯಗಳು
- ಅಭಿನವ ಪ್ರಕಾಶನದ 'ಹೇ ರಾಮ್ – ಭಾರತದ ಆತ್ಮಚ್ಛೇದದ ಕಥನ'ದ ಭಾಗಗಳು,
- ಆನಂದ ತೇಲ್ತುಂಬ್ಡೆಯವರ 'ಹಿಂದುತ್ವ ಮತ್ತು ದಲಿತರು'.

* ಶಾಂತರಸ ಮೊದಲಾದ ಕಲ್ಯಾಣ ಕರ್ನಾಟಕದ ಸಾಹಿತಿಗಳ ಕತೆಗಳು,

- ಗಾಂಧೀಜಿ, ನೆಹರೂ, ಅಂಬೇಡ್ಕರ್, ಇ.ಎಮ್. ಎಸ್. ನಂಬೂದರಿಪಾದ್ ಮೊದಲಾದವರ ಹೇಳಿಕೆ, ಪ್ರಬಂಧಗಳು.
- ಡಿವೈಎಫ್‌ಐನ ಕಿರು ಪುಸ್ತಿಕೆಯ ಎರಡು ಲೇಖನಗಳು.

* ಬಾಬರಿ ಮಸೀದಿಯ ಬಗ್ಗೆ 25 ಇತಿಹಾಸಕಾರರ ಹೇಳಿಕೆ.

* ಇ.ಎಂ.ಎಸ್.ರವರ ಲೇಖನ.

- 'ಡೇರ್ ಡೆವಿಲ್ ಮುಸ್ತಾಫ' ದಂತಹ ಸಿನಿಮಾಗಳ ವೀಕ್ಷಣೆ, ಸಿನಿಮಾ ಕುರಿತು ಚರ್ಚೆ, ಸಂವಾದಗಳನ್ನು ಏರ್ಪಡಿಸುವ ಬಗ್ಗೆ ಪರಿಶೀಲಿಸಬಹುದು... ಹೀಗೆ ಇನ್ನೂ ಹಲವು...

ನಿಮ್ಮ ನಿಮ್ಮ ಪ್ರದೇಶದಲ್ಲಿ ಲಭ್ಯವಿರುವ, ಪ್ರಭಾವ ಬೀರುವ ಬರಹಗಳನ್ನು ಸಹ ಆಯ್ಕೆ ಮಾಡಿಕೊಳ್ಳಬಹುದು. ***–ಸೌಹಾರ್ದ ಕರ್ನಾಟಕ***

ಯಾದಗಿರಿ ಮೂಲದ ಕಟ್ಟಡ ಕಾರ್ಮಿಕ ಮಹಿಳೆ ಸಾಕಮ್ಮಳ ದಿನಚರಿ ಬೆಳಗ್ಗೆ 5/6 ಗಂಟೆಯಿಂದ ಶುರುವಾಗುತ್ತೆ. 'ಬೆಳಗ್ಗೆ ಮನೆ ಮುಂದೆ ಕಸ ಗುಡಿಸಿ, ನೀರು ಹಾಕಿ, ಯಾರಿಗಾದರು ಹುಷಾರಿಲ್ಲದಿರುವಾಗ ಇನ್ನೊಂದಿಷ್ಟು ಹೆಚ್ಚೇನೇ ಕೆಲಸ ಹೆಣ್ಣು ಮಕ್ಕಳು ಮಾಡಲೇಬೇಕಲ್ವಾ ಮೇಡಂ' ಎಂದು ಸಹಜವಾಗಿಯೇ ಹೇಳ್ತಾರೆ. ಇವರ ಮಾಸಿಕ ಮುಟ್ಟಿನ ಸಂದರ್ಭ, ಹೆರಿಗೆ, ಬಾಣಂತನದ ಸಂದರ್ಭ, ಗರ್ಭಕೋಶದ ಇಷ್ಯೂಸ್ ಗಳಿರುವಾಗ, ಮೆನೊಪಾಸ್ ಇಷ್ಯೂಸ್ ಇರುವಾಗಿನ ಸಂದರ್ಭ ಕುರಿತು ನಾವು ಮಾತನಾಡಿದರೆ ಮಾತ್ರ ಕೆಲ ಮಹಿಳೆಯರು ಹಂಚಿಕೊಳ್ತಾರೆ, ಬಹುತೇಕ ಮಹಿಳೆಯರು ಇದನ್ನು ಗೌಪ್ಯಲೋಕದಲ್ಲೇ ಇಟ್ಟಿದ್ದಾರೆ. ಇದು ಸರಿಸುಮಾರು ರಾಜ್ಯದ ಕಟ್ಟಡ ಕಾರ್ಮಿಕ ಮಹಿಳೆಯರ ಅನುಭವವೆಂದು ಪರಿಗಣಿಸಬಹುದಾಗಿದೆ. ಗ್ಯಾಸ್ ಸ್ಟವ್, ಮಿಕ್ಸಿ, ಕುಕ್ಕರ್ ಗಳು ನಿಜವಾಗಿಯು ಇವರ ಪಾಲಿಗೆ ಜೀವಸ್ನೇಹಿಗಳೇ ಆಗಿವೆ. ಇವೂ ಇಲ್ಲದ ಅಸಂಖ್ಯಾತ ಕುಟುಂಬಗಳು ಕರೆಂಟ್ ಇಲ್ಲದ ಜೋಪಡಿಗಳಲ್ಲಿಯು ವಾಸಿಸುತ್ತಿದ್ದಾರೆ. ಅವರ ಪಾಡಂತೂ ಇನ್ನೂ ಅಸಹನೀಯವೇ ಆಗಿದೆ.

ಮಹಿಳಾ ಕಟ್ಟಡ ಕಾರ್ಮಿಕರ ಬದುಕು ಹೀಗೇಕೆ?

ಕೆ.ಎಸ್. ಲಕ್ಷ್ಮಿ

ಕಟ್ಟಡ ಕಾರ್ಮಿಕ ಮಹಿಳೆಯರ ಬದುಕು ಮತ್ತು ಬವಣೆಗಳು ಚಿಕ್ಕಂದಿನಿಂದಲೂ ನನ್ನಲ್ಲಿ ಹುದುಗಿದ್ದ ಭಾವನೆಯೆಂದರೆ, ಮಹಿಳೆಯರು ಕಠಿಣವಾದ ಕೆಲಸ ಮಾಡಕ್ಕಾಗಲ್ಲ, ಏನಿದ್ದರೂ ಪುರಷರು ಇರಲೇಬೇಕು. ಭಾರವನ್ನು ಎತ್ತುವ ಕೆಲಸ, ಕಂಬ ವೇರುವ ಕೆಲಸಗಳು, ಶಿಪ್ಟಿಂಗ್ ಕೆಲಸಗಳು, ದೂರ ಪ್ರಯಾಣಕ್ಕೆ ವಾಹನ ಚಲಾಯಿಸುವುದು, ಹೀಗೆ

ಇದೇ ಸಂದರ್ಭದಲ್ಲಿ ನಮ್ಮ ಅಜ್ಜಿ ಮತ್ತು ಅಮ್ಮ ನಮ್ಮ ಮನೆಯ ನೆರೆಹೊರೆಯವರು ಹೇಳ್ತಿದ್ದ ಮಾತುಗಳು ಸಹ ಹೀಗಲೂ ನೆನಪಿದೆ. ಯಾವುದಾದರೂ ಮಗು ಏಳು ತಿಂಗಳಿಗೆ ಅಥವಾ ಹೆರಿಗೆ ದಿನ ತುಂಬುವ ಮುನ್ನ ಹುಟ್ಟಿದರೆ, ಹೆಣ್ಣಾ, ಗಂಡಾ ಎಂದು ಮೊದಲು ಕೇಳುತ್ತಿದ್ದರು. ಹೆಣ್ಣು ಅಂದ ಕೂಡಲೇ ಅದು ಹೆಂಗಾರ ಬದುಕುತ್ತದೆ. ಗಂಡಾದರೆ ತಡೆಯೊಲ್ಲ/ ಉಳಿಯೋದು ಕಷ್ಟ ಎಂದು ಪಟ್ ಅಂತ ಹೇಳ್ತಿದ್ರು. ಇದನ್ನು ಕೆಲವು ಡಾಕ್ಟರ್ಸ್ ಸಹ ಅನುಮೋದಿಸುತ್ತಿದ್ದರು. ಇನ್ನು ಬಹಳಷ್ಟು ಮನೆಗಳಲ್ಲಿ ಮಹಿಳೆಯರಿಗೆ ಜ್ವರ ಬಂದ್ರೂವೆ ಅವರನ್ನು ಅವರು ಸಂಬಾಳಿಸಿಕೊಂಡು ಕುಟುಂಬವನ್ನು ಸಂಬಾಳಿಸುವುದನ್ನು ನೋಡುತ್ತಿರುತ್ತೇನೆ. ಆದರೆ, ಗಂಡಸರಿಗೆ ನೆಗಡಿ ಬಂದರೂ, ಜ್ವರ ಬಂದರೂ ಅವರನ್ನು ಸಂಬಾಳಿಸುವುದು ಮಹಿಳೆಯರಿಗೆ ದೊಡ್ಡ ಆರೈಕೆಯ ಕಾರ್ಯಕ್ರಮವಾಗಿಯೇ ಆಗಿ ಹೋಗುತ್ತದೆ.

ಜನವಾದಿ ಮಹಿಳಾ ಸಂಘಟನೆಯ ಅನುಭವದೊಂದಿಗೆ ನಾನೀಗ ಕಟ್ಟಡ ಕಾರ್ಮಿಕರ ಸಂಘಟನೆಯ ಭಾಗವಾಗಿಯೂ ತೊಡಗಿಸಿಕೊಳ್ಳುತ್ತಿರುವ ಹಿನ್ನಲೆಯಲ್ಲಿ ಈ ಎಲ್ಲ ಮಾತುಗಳ ಪ್ರಾಯೋಗಿಕ ಅನುಭವದ ಮತ್ತು ಅದಕ್ಕಿರಬಹುದಾದ ಕಾರಣಗಳನ್ನು ವೈಜ್ಞಾನಿಕ ದೃಷ್ಟಿಕೋನದಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿ, ಪುರಷ ಮತ್ತು ಮಹಿಳಾ ಕಟ್ಟಡ ಕಾರ್ಮಿಕರೊಂದಿಗೆ ಹಂಚಿಕೊಳ್ಳುತ್ತಿರುವತ್ತೇನೆ.

ಅಸಮಾನ ಕೂಲಿ

ನಾನು ಈ ಎರಡು ವರ್ಷದ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಕಟ್ಟಡ ಕಾರ್ಮಿಕ ಮಹಿಳೆಯರನ್ನು ಬೇಟಿ ಮಾಡುವಾಗ ಕಂಡದ್ದು, ರಾಜ್ಯದ ಯಾವುದೇ ಪ್ರದೇಶದಲ್ಲಿಯು ಮಹಿಳಾ ಕಟ್ಟಡ ಕಾರ್ಮಿಕರಿಗೆ ಸಮಾನ ಕೂಲಿ ಸಿಗುತ್ತಿಲ್ಲ. ಅದು ಸರ್ಕಾರಿ ಕಾಮಗಾರಿ ಇರಲಿ, ಖಾಸಗಿ ಕಾಮಗಾರಿ ಇರಲಿ (ಮನರೇಗಾ ಕೆಲಸಗಳನ್ನು ಹೊರತುಪಡಿಸಿ). ಕನಿಷ್ಟ ಸರ್ಕಾರಿ ಸ್ವಾಮ್ಯದ ಕಾಮಗಾರಿಗಳ ಸಂದರ್ಭದಲ್ಲಾದರೂ 'ಸಮಾನ ಕೂಲಿ" ನೀಡಬೇಕೆನ್ನುವ ಸರ್ಕಾರದ ಆದೇಶ ಪಾಲನೆಯಾಗಬೇಕಿತ್ತು. ಆಗುತ್ತಿಲ್ಲ. ಏಕೆಂದರೆ, ಅಲ್ಲಿ ಸರ್ಕಾರಿ ಗುತ್ತಿಗೆದಾರರ ಕೆಳಗೆ ಕೆಲಸ ಮಾಡುವ ಮೇಸ್ತ್ರಿ, ಕಟ್ಟಡ ಕಾರ್ಮಿಕರೆಲ್ಲಾ ಖಾಸಗಿಯವರೇ ಆಗಿರುತ್ತಾರೆ. ಆದಾಗ್ಯೂ ಜಾರಿ ಮಾಡುವ ಬದ್ಧತೆ ಸರ್ಕಾರಕ್ಕಿಲ್ಲ ಎಂದ ಮೇಲೆ ಜಾರಿಯಾದೀತು ಹೇಗೆ?

ನಿರ್ಮಾಣ ಕಾಮಗಾರಿಗಳಲ್ಲಿ ಮಹಿಳೆಯರ ಅಸುರಕ್ಷತೆ

ಹೀಗೆ ನಮ್ಮ ಮೇಸ್ತ್ರಿಗಳೊಂದಿಗೆ ಚರ್ಚಿಸುವಾಗ 'ಹೌದ್ರಿ ಮೇಡಂ, ಪುರುಷರ ಕೆಲಸಕ್ಕು, ಮಹಿಳೆಯರ ಕೆಲಸಕ್ಕು ವ್ಯತ್ಯಾಸವಿದೆ. ಪುರುಷರು 100/150 ಮಂಕ್ರಿ ಸಿಮೆಂಟ್ ಕಲಸಿದಂತೆ ಮಹಿಳೆಯರು ಅಷ್ಟು ಕಲಸಲಾರರು. ಮೂಟೆ ಪುರುಷರು ಎತ್ತಾಕಿದಂತೆ ಎತ್ತಾಕಲಾರರು' ಎಂದರು. ಈ ಮಾತುಗಳನ್ನು ಮಹಿಳೆಯರು ಅನುಮೋದಸ್ತಾರೆ. 'ಹೌದು ಮೇಡಂ, ನಾವೇನು ಕೆಲಸ ಮಾಡ್ತೀವೊ ಅಷ್ಟು ಕೂಲಿ ಕೊಡ್ತಾರೆ. ನಾವು ಗಂಡಸರಿಗಿಂತ ಕಡಿಮೆ ಕೆಲಸ ಮಾಡ್ತೀವಲ್ಲಾ' ಎಂದು ಅಸಹಾಯಕ ನಗು ಬೀರ್ತಾರೆ. (ಸರಿ ಸಮಾನವಾಗಿ ದುಡಿಯುವ ಕೆಲ ಅಪರೂಪದ ಪ್ರಕರಣಗಳನ್ನು ಹೊರತು ಪಡಿಸಿ, ಬಹುಸಂಖ್ಯಾತ ಮಹಿಳೆಯರ ಸಾಮಾನ್ಯ ಅನುಭವವನ್ನು ಇಲ್ಲಿ ಹೇಳಲಾಗಿದೆ). ಕೆಲ ಮೇಸ್ತ್ರಿಗಳು ಮಹಿಳೆಯರನ್ನು ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಏಕೆಂದು ಕೇಳಿದರೆ, ಮೇಡಂ ಮಹಿಳೆಯರನ್ನು ತೆಗೆದುಕೊಂಡರೆ ಸೆಕ್ಯುರಿಟಿ ವಿಷಯ ಇರುತ್ತೆ. ಹುಡುಗರು ಕೀಟಲೆ ಮಾಡಿದ್ರೆ ಗಲಾಟೆಗಳಾಗ್ತಾವೆ. ಗಲಾಟೆ ಮಾಡಿಕೊಂಡ್ರೆ ಓನರ್ ಬೈಯ್ತಾರೆ ಅಥವಾ ಕೆಲಸ ಬಿಡಿಸ್ತಾರೆ. ಇಂಥಹದೊಂದು ಪ್ರಕರಣದಿಂದ ಪೋಲೀಸ್ ಸ್ಟೇಷನ್ ವರೆಗೆ ಹೋಗಿ ಇದರ ಸಹವಾಸವೇ ಬೇಡ ಅಂತ ಮಹಿಳೆಯರನ್ನು ತಗೋತಾ ಇಲ್ಲ ಎಂದೂ, ಮತ್ತೂ ಕೆಲ ಮೇಸ್ತಿಗಳು ಹೇಳಿದ್ದು, ಮೇಡಂ, ಮಹಿಳೆಯರನ್ನ ಕೆಲಸಕ್ಕೆ ತಗೊಂಡ್ರೆ ಹೆಚ್ಚು ರಜೆ ಹಾಕ್ತಾರೆ. ಮನೆ ಹಿರಿಯರಿಗೆ ಹುಷಾರಿಲ್ಲ, ಮಕ್ಕಳಿಗೆ ಹುಷಾರಿಲ್ಲ, ಹಬ್ಬ ಹರಿದಿನಾ, ಹೀಗೆ ಅವರದ್ದು ನೂರೆಂಟು ಕಾರಣಗಳು. ಗಂಡಸರಾದರೆ ಅಷ್ಟು ರಜೆ ಹಾಕಲ್ಲ. ಬೇರೆ ದಾರಿನೇ ಇಲ್ಲದೆ ಕಷ್ಟದಲ್ಲಿರೋ ಮಹಿಳೆಯರನ್ನು ಮಾತ್ರ ಕೆಲಸಕ್ಕೆ ತಗೊತೇವೆ. ಗಂಡಾಳಿದ್ದರೆ ಮಹಿಳೆಯರು ಅಗತ್ಯವಿರೋಲ್ಲ ಅಂದ್ರು. ಹೀಗೆ ಹಲವು ಅನುಭವಗಳ ಬುತ್ತಿ ಬಿಚ್ಚಿ ನೋಡುವಾಗ, ಕಟ್ಟಡ ಕಾರ್ಮಿಕಳಾಗಲು ಸಹ ಮಹಿಳೆ ಸಾಕಷ್ಟು ಬಡಿದಾಟ ಮಾಡಬೇಕಾಗಿದೆ ಎಂಬುದು.

> ಕೆಲ ಅಧ್ಯಯನಗಳ ಪ್ರಕಾರ ಒಂದು ಮನೆ ಗುಡಿಸಿ ಹೊರಿಸಲು ಒಂದು ತಾಸಿಗೆ 264 ಕ್ಯಾಲರಿ ಬಳಕೆಯಾಗುತ್ತದೆ. ಒಂದು ತಾಸು ಪಾತ್ರೆ ತೊಳೆಯಲು 156 ಕ್ಯಾಲರಿ ಬಳಕೆ, ಬಟ್ಟೆ ಒಗೆಯಲು 320 ಕ್ಯಾಲರಿ, ಹೀಗೆ ಬೆಳಗಿನಿಂದ ಮಹಿಳೆ ಮಾಡುವ ಕೆಲಸಗಳ ಮುಖೇನ ಅವಳು ಕೆಲಸಕ್ಕೆ ಹೋಗುವ ವೇಳೆಗೆ 500 ರಿಂದ 600 ಕ್ಯಾಲರಿ ಬಳಕೆಯಾಗಿ, ಅವಳು ಕಾಮಗಾರಿಗಳಲ್ಲಿ ತೊಡಗುವಾಗ, ಅವಳ ಎನರ್ಜಿ ಲೆವೆಲ್ ಸ್ವಲ್ಪ ಕಡಿಮೆ ಇರುವಾಗಲು ಅವಳು ಹೊಟ್ಟೆಪಾಡಿಗಾಗಿ ಮತ್ತು ಕುಟುಂಬಕ್ಕಾಗಿ ದುಡಿಯುವುದನ್ನು ನೋಡುತ್ತಿದ್ದೇವೆ. ಎಷ್ಟೋ ಮಹಿಳೆಯರು ಅವರ ಕೆಲಸಕ್ಕೆ ತಕ್ಕಂತಹ ಆರೋಗ್ಯಪೂರ್ಣ ಆಹಾರ ಸೇವಿಸಲಾಗದೆ, ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಿರುವುದನ್ನು ನೋಡುತ್ತಿದ್ದೇವೆ.

ಆರೋಗ್ಯ ಪರಿಸ್ಥಿತಿ

ಭಾರತೀಯ ಆರೋಗ್ಯ ಮಾನದಂಡಗಳ ಪ್ರಕಾರ ಒಬ್ಬರು ಆರೋಗ್ಯವಂತವಾಗಿರಲು, ದಿನಕ್ಕೆ 2700 ರಿಂದ 2800 ಕ್ಯಾಲರಿಗಳ ಆಹಾರ ಸೇವನೆ ಅಗತ್ಯವಿರುತ್ತದೆ. ಇದು ಭಾರತದ ಬಹುತೇಕ ಕುಟುಂಬಗಳಲ್ಲಿ ಸಾಧ್ಯವಿರುವುದಿಲ್ಲ. ಅದಕ್ಕೆ ಬಹುಮುಖಿ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಕಾರಣಗಳಿವೆ. ಸಾಧಾರಣಾ ಶ್ರಮದಾಯಕ ಕೆಲಸಗಳಿಗೆ ಈ ಆಹಾರ ಅತ್ಯಗತ್ಯ. ಸಾಧಾರಣವಾಗಿ ಅಸಂಘಟಿತ ವಿಭಾಗದ ಮಹಿಳೆಯರ ಆಹಾರ ಸೇವನೆ 1500 ರಿಂದ 1700 ಕ್ಯಾಲರಿ ಇದೆ ಅಥವಾ ಇದಕ್ಕಿಂತಲೂ ಕಡಿಮೆ ಇದೆ. ಈ ಕ್ಯಾಲರಿಗಳು ನಮ್ಮ ಕೆಲಸಗಳ



ಸ್ವರೂಪದಿಂದ ಬಳಕೆ/ ಖರ್ಚಾಗುತ್ತದೆ. ಕೆಲ ಅಧ್ಯಯನಗಳ ಪ್ರಕಾರ ಒಂದು ಮನೆ ಗುಡಿಸಿ ಹೊರಿಸಲು ಒಂದು ತಾಸಿಗೆ 264 ಕ್ಯಾಲರಿ ಬಳಕೆಯಾಗುತ್ತದೆ. ಒಂದು ತಾಸು ಪಾತ್ರೆ ತೊಳೆಯಲು 156 ಕ್ಯಾಲರಿ ಬಳಕೆ, ಬಟ್ಟೆ ಒಗೆಯಲು 320 ಕ್ಯಾಲರಿ, ಹೀಗೆ ಬೆಳಗಿನಿಂದ ಮಹಿಳೆ ಮಾಡುವ ಕೆಲಸಗಳ ಮುಖೇನ ಅವಳು ಕೆಲಸಕ್ಕೆ ಹೋಗುವ ವೇಳೆಗೆ 500 ರಿಂದ 600 ಕ್ಯಾಲರಿ ಬಳಕೆಯಾಗಿ, ಅವಳು ಕಾಮಗಾರಿಗಳಲ್ಲಿ ತೊಡಗುವಾಗ, ಅವಳ ಎನರ್ಜಿ ಲೆವೆಲ್ ಸ್ವಲ್ಪ ಕಡಿಮೆ ಇರುವಾಗಲು ಅವಳು ಹೊಟ್ಟೆಪಾಡಿಗಾಗಿ ಮತ್ತು ಕುಟುಂಬಕ್ಕಾಗಿ ದುಡಿಯುವುದನ್ನು ನೋಡುತ್ತಿದ್ದೇವೆ. ಎಷ್ಟೋ ಮಹಿಳೆಯರು ಅವರ ಕೆಲಸಕ್ಕೆ ತಕ್ಕಂತಹ ಆರೋಗ್ಯಪೂರ್ಣ ಆಹಾರ ಸೇವಿಸಲಾಗದೆ, ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಿರುವುದನ್ನು ನೋಡುತ್ತಿದ್ದೇವೆ, ಹಾಗಾದರೆ ಮನೆಯಲ್ಲಿ ಅವಳು ನಿರ್ವಹಿಸಿದ ಕೆಲಸಗಳೆಲ್ಲವು ಅವಳದ್ದೇ ಕೆಲಸಗಳಾ? ಖಂಡಿತಾ ಅಲ್ಲ, ಗಂಡನ ಮತ್ತು ಕುಟುಂಬದ ಬಹುಪಾಲು ಜವಾಬ್ದಾರಿಗಳೇ ಆಗಿರುತ್ತವೆ. ಹಾಗೆಂದು ಅವಳ ಕೆಲಸಗಳಿಗೆ ಆರ್ಥಿಕಮೌಲ್ಯ ಕಟ್ಟಿ ಅವಳನ್ನು ಮನೆಗೆ ಸೀಮಿತಗೊಳಿಸಿ ಎಂದು ನಾವು ಹೇಳುವುದಿಲ್ಲ. ಅವಳನ್ನು ಕೆಲ ಕುಟುಂಬದ ಈ ಜವಾಬ್ದಾರಿಗಳಿಂದ ಹೊರತಂದು, ಅವಳನ್ನು ಸಾರ್ವಜನಿಕ ಕೆಲಸಗಳಲ್ಲಿ ತೊಡಗುವಂತೆ ಮಾಡಲು, ಮೊದಲು ಮಹಿಳೆಯ ಕೆಲಸಗಳಿಗೆ ಪುರುಷರು ಹೆಗಲು ನೀಡಬೇಕು. ಮುಂದುವರೆದು ಈ ಎಲ್ಲ ಗೃಹಕೃತ್ಯಗಳನ್ನು ಸಾಮಾಜೀಕರಿಸುವ ವ್ಯವಸ್ಥೆಯೊಂದು ರೂಪುಗೊಳ್ಳುವ ಬದಲಾವಣೆಗಳಿಗೆ ಮುಂದಾಗಬೇಕಿದೆ.

ಹಾಗಾಗಿ ಮಹಿಳೆಯ ಕೆಲಸವನ್ನು ಮೌಲ್ಯಮಾಪನ ಮಾಡುವಾಗ, ಅವಳನ್ನು ಕೆಲಸದ ಸ್ಥಳಕ್ಕೆ ಸೀಮಿತಗೊಳಿಸಿ ಮಾಪನ ಮಾಡುವುದು ಪಾಳೇಗಾರಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಕೂಲಿ ಶೋಷಣೆಯಾಗಿದೆ. ಬಹುತೇಕ ಮಹಿಳೆಯರು ಸಹಾಯಕರಾಗಿರುತ್ತಾರೆ. ಅವರ ಕೂಲಿ ಗಂಡಸರಿಗಿಂತ ಕಡಿಮೆ ಇರುವುದಷ್ಟೇ ಅಲ್ಲಾ, ಪ್ರದೇಶದಿಂದ ಪ್ರದೇಶಕ್ಕು ವ್ಯತ್ಯಾಖಿದೆ. ಬೆಂಗಳೂರಿನಲ್ಲೇ ದಿನಕ್ಕೆ 200 ರಿಂದ 500 ರವರೆಗೆ ಮಹಿಳೆಯರ ಕೂಲಿ ಇದೆ. ನಾನು ಭೇಟಿ ಮಾಡಿದ ಬಹುತೇಕ ಜಿಲ್ಲೆಗಳ ಮಹಿಳೆಯರಿಗೆ ಅವರು ಗಳಿಸುವ ಆದಾಯದ ಮೇಲೆ ಪೂರ್ಣ ಅಧಿಕಾರವಿಲ್ಲ ಎಂದು ಹೇಳುತ್ತಿದ್ದರು.

ಅನುವಂಶಿಕ ಕಾರಣಗಳನ್ನು ಮತ್ತು ಆರ್ಥಿಕ ಸಾಮಾಜಿಕ ಹಿನ್ನಲೆಯನ್ನು ಹೊರತುಪಡಿಸಿ, ಹುಟ್ಟುವಾಗ ಹೆಣ್ಣು ಮತ್ತು ಗಂಡು ಮಗು ಒಂದೇ ಆಗಿರುತ್ತದೆ ಎಂದು ಅಧ್ಯಯನಗಳು ಹೇಳುತ್ತವೆ. ಅದು ಮೆದುಳು, ನರವ್ಯೂಹ, ಅಸ್ತಿ, ಮಾಂಸ ಖಂಡಗಳು ಹೀಗೆ. ಸಾಮಾಜಿಕವಾಗಿ ಮತ್ತು ಆರ್ಥಿಕ ಹಿನ್ನಲೆಗಳಿಂದ ಹೆಣ್ಣು ಮಗುವಿನ ಸಾಮರ್ಥ್ಯಗಳು ಮರೆಮಾಚಲ್ಪಟ್ಟು ಅವ್ಯಕ್ತವಾಗಿಹೋಗಿವೆ. ಅವಳ ಜೀವನಿರೋಧಕ ಶಕ್ತಿ ಅವಳು ಜೀವನ ಪೂರಾ ನಡೆಸಿದ ಹೋರಾಟದಿಂದ ಗಳಿಸಿದ್ದೇ ಆಗಿದೆ ವಿನಹಃ ಹುಟ್ಟಿನಿಂದ ಅಲ್ಲವಾಗಿದೆ.

ಶೌಚಾಲಯ ಸಮಸ್ಯೆ

ಬಹಳಷ್ಟು ಕಾಮಗಾರಿಗಳ ಸ್ಥಳಗಳಲ್ಲಿ ಶೌಚಾಲಯಗಳು ಇರುವುದೇ ಇಲ್ಲ. ಮರೆ ಮಾಚಿಕೊಳ್ಳುವ ಪ್ರದೇಶವನ್ನು ಮಹಿಳೆಯರೇ ಹುಡುಕಿಕೊಳ್ಳಬೇಕು. ಮಾಲೀಕರ ಮನೆಗಳು ಸಮೀಪವಿದ್ದರು ಬಳಸಲು ಅವಕಾಶವಿರುವುದಿಲ್ಲ. ಕಾಂಟ್ರಾಕ್ಟರ್ /ಮೇಸ್ತ್ರಿಗಳಾದರು ಕಟ್ಟಡ ನಿರ್ಮಾಣದ ಒಪ್ಪಂದ ಮಾಡಿಕೊಳ್ಳುವಾಗ ಶೌಚಾಲಯ ವ್ಯವಸ್ಥೆಯನ್ನು ಖಾತ್ರಿ ಮಾಡಿಕೊಳ್ಳುವ ಗೋಜಿಗೆ ಹೋಗುವುದಿಲ್ಲ. ಇಡೀ ಈ ವಿಭಾಗದ ಎಲ್ಲ ಹಂತದ ಕಾಮಗಾರಿಗಳಿಗೆ ಭಾಧ್ಯರಾದವರನ್ನು ಈ ದಿಕ್ಕಿನಲ್ಲಿ ಸಂವೇದನಾಶೀಲಗೊಳಿಸುವುದು ಬಹಳವೇ ಮುಖ್ಯವಾಗಿದೆ. ನಗರ ಪ್ರದೇಶಗಳಲ್ಲಿ ಕಟ್ಟಡ

ಪುಟ 10 ಕ್ಕೆ



ರೈತರ ಪಾಲಿಗೆ ಕಲ್ಪತರುವಾಗಿ ಉಳಿಯದ ತೆಂಗು ಸಂಕಷ್ಟದಲ್ಲಿರುವ ರಾಜ್ಯದ ತೆಂಗು ಬೆಳೆಗಾರರು

ಎಚ್.ಆರ್. ನವೀನ್ ಕುಮಾರ್

ಉತ್ಪಾದನೆ: ಭಾರತದಲ್ಲಿ ತೆಂಗಿನ ಉತ್ಪಾದನೆ ಮತ್ತು ವಿಸ್ತೀರ್ಣಕ್ಕೆ ಹೋಲಿಸಿದಾಗ ಕರ್ನಾಟಕ ಮೂರನೇ ಸ್ಥಾನದಲ್ಲಿದೆ. ರಾಜ್ಯದ ಸುಮಾರು 15 ಜಿಲ್ಲೆಗಳಲ್ಲಿ ತೆಂಗಿನ ಉತ್ಪಾದನೆಯಿದ್ದರೂ, ಹೆಚ್ಚು ಕಡಿಮೆ 30 ಜಿಲ್ಲೆಗಳಲ್ಲೂ ತೆಂಗಿನಮರಗಳಿವೆ. ಕರ್ನಾಟಕದಲ್ಲಿ ತೆಂಗು ಬೆಳೆಯುವ ಪ್ರದೇಶ ಹೆಚ್ಚಾಗುತ್ತಿದೆ. ತೆಂಗು ಉತ್ಪಾದನೆಯು ಕೋಟ್ಯಾಂತರ ಜನರ ಬದುಕಿಗೆ ಆಸರೆ. ಭಾರತದ ಒಟ್ಟಾರೆ ಉತ್ಪಾದನೆಯ ಶೇ. 90.77ರಷ್ಟು ತೆಂಗನ್ನು (2021–22ರಲ್ಲಿ) ಕೇರಳ, ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳು ಉತ್ಪಾದಿಸುತ್ತವೆ. ತೆಂಗು ಅಭಿವೃದ್ಧಿ ಮಂಡಳಿಯ ಪ್ರಕಾರ, ಭಾರತ ವಿಶ್ವದ ಅತಿ ದೊಡ್ಡ ತೆಂಗು ಉತ್ಪಾದಕಾ ದೇಶಗಳಲ್ಲಿ ಒಂದು. ಅದು ವಿಶ್ವದ ತೆಂಗು ಉತ್ಪಾದನೆಗೆ ಶೇ. 22.34 ರಷ್ಟು ಕಾಣಿಕೆ ನೀಡಿದೆ. 2023 ಜುಲೈನಲ್ಲಿ ಮಾಡಿದ ಅಂದಾಜಿನಂತೆ 19.10 ಲಕ್ಷ ಹೆಕ್ಟೇರಿನಲ್ಲಿ ತೆಂಗು ಬೆಳೆಯಲಾಗುತ್ತದೆ ಮತ್ತು ಸರಿಸುಮಾರು 13,000 ಮಿಲಿಯನ್ ತೆಂಗಿನಕಾಯಿ ಉತ್ಪಾದನೆಯಾಗುತ್ತದೆ. ಭಾರತದ ಜಿಡಿಪಿಗೆ ತೆಂಗು ಸುಮಾರು ರೂ. 27,900 ಕೋಟಿ ಕಾಣಿಕೆ ನೀಡುತ್ತದೆ. ಅದರಿಂದ ಸಾವಿರಾರು ಕೋಟಿ ವಿದೇಶಿ ವಿನಿಮಯ ಬರುತ್ತದೆ.

ಆದರೆ ತೆಂಗು ಬೆಳೆಗಾರರ ವಾಸ್ತವ ಪರಿಸ್ಥಿತಿಯೇನು? ಒಂದೆರೆಡು ವರ್ಷಗಳಿಂದ ತೆಂಗು ಬೆಳೆಗಾರರು ಅವಸಾನದ ಹಾದಿ ಹಿಡಿದಿದ್ದರೆ, ಕಳೆದ ಐದಾರು ವರ್ಷಗಳಿಂದ ಒಣಬರ ಮತ್ತು ಹಸಿಬರಗಳಿಗೆ ತೆಂಗಿನ ಮರಗಳೂ ಧರೆಗುರುಳಿವೆ. ತೆಂಗು ಬೆಳೆಗಾರರು ನಷ್ಟ ಅನುಭವಿಸಿದರು. ಆದರೂ ಕಳೆದ ವರ್ಷದ ಮಳೆಯಿಂದ ಸ್ವಲ್ಪಮಟ್ಟಿಗೆ ತೆಂಗು ಹಾಳಾದರೂ, ಮುಂದಿನ ವರ್ಷಗಳಿಂದ ನೀರಿನ ಅಭಾವವಿಲ್ಲದೆ ಉತ್ತಮ ಬೆಳೆ ಪಡೆಯಬಹುದು ಮತ್ತು ಆದಾಯ ಹೆಚ್ಚಬಹುದು ಎಂದು ನಿರೀಕ್ಷಿಸಿದರು. ಆದರೆ ಈ ವರ್ಷ ಕೊಬ್ಬರಿ ಬೆಲೆ ರೂ. 7,000ಕ್ಕಿಳಿದು ಮರ್ಮಾಘಾತ ನೀಡಿದೆ. ಇದೇ ಸಂದರ್ಭದಲ್ಲಿ ಕಳೆದ ವರ್ಷ ರೂ. 15,000ದಿಂದ ರೂ. 19,000 ಬೆಲೆಯಿತ್ತು. ಈಗ ಕೊಬ್ಬರಿ ಕೇಳುವವರಿಲ್ಲವಾಗಿದ್ದಾರೆ.

ತೆಂಗಿನ ಉಪಯೋಗ ಮತ್ತು ಬೆಲೆ ಕುಸಿತಕ್ಕೆ ಕಾರಣ

- ತೆಂಗಿನ ಉತ್ಪನ್ನಗಳನ್ನು ಆಹಾರ ಪದಾರ್ಥಗಳನ್ನು ತಯಾರಿಸಲು ಉಪಯೋಗಿಸುತ್ತಾರೆ. ಉತ್ಪಾದನಾ ಘಟಕಗಳಲ್ಲಿ ಸೋಪು, ಡಿಟೆರ್ಜೆಂಟ್, ಶಾಂಪೂ, ಸಿಂಥೆಟಿಕ್ ರಬ್ಬರ್, ಗ್ಲಿಸರೀನ್ ತಯಾರಿಸಲು ಉಪಯೋಗಿಸುತ್ತಾರೆ. ಅಲ್ಲದೆ ಅಲಂಕಾರಿಕ ವಸ್ತುಗಳು, ವೈದ್ಯಕೀಯ ಹಾಗೂ ಇನ್ನಿತರ ಉದ್ದೇಶಗಳಿಗೆ ಉಪಯೋಗಿಸುತ್ತಾರೆ.
- ಭಾರತ ತೆಂಗಿನ ಉತ್ಪನ್ನಗಳನ್ನು ರಫ್ತು ಮಾಡುತ್ತದೆ. ಹಾಗೆಯೇ ಆಮದು ಸಹ ಮಾಡುತ್ತದೆ. 2021–22 ಅವಧಿಯಲ್ಲಿ ಭಾರತದ ತೆಂಗಿನ ರಫ್ತು ರೂ. 3,236.83 ಕೋಟಿ ದಾಟಿತ್ತು. ಭಾರತ ವಿಶ್ವದ ಅತಿದೊಡ್ಡ ತೆಂಗು ಉತ್ಪಾದಕ ದೇಶ. ಅತಿ ಹೆಚ್ಚು ರಫ್ತು ಮಾಡುವ ದೇಶಗಳೆಂದರೆ ಇಂಡೋನೇಶಿಯಾ, ಫಿಲಿಫೈನ್ಸ್, ಥಾಯ್‌ಲ್ಯಾಂಡ್, ವಿಯೆತ್ನಾಮ್ ಮತ್ತು ಶ್ರೀಲಂಕಾ. ದುರಂತವೆಂದರೆ ಭಾರತವು ಇಂಡೊನೇಶಿಯಾ, ಮಲೇಶಿಯಾ ಮತ್ತು ಥಾಯ್‌ಲ್ಯಾಂಡ್‌ನಿಂದ ತಾಳೆ ಎಣ್ಣೆಯನ್ನು ಮತ್ತು ಅರ್ಜೆಂಟೈನಾ, ಬ್ರೆಜಿಲ್, ರಷ್ಯಾ ಮತ್ತು ಉಕ್ರೇನ್‌ಗಳಿಂದ ಸೋಯಾ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಮಲೇಶಿಯಾ, ಇಡೋನೇಶಿಯಾ, ಸೌದಿ ಮತ್ತು ಥಾಯ್‌ಲ್ಯಾಂಡ್‌ನಿಂದ ತೆಂಗಿನೆಣ್ಣೆಯನ್ನೂ ಆಮದು ಮಾಡಿಕೊಳ್ಳುತ್ತದೆ.
- ಹೊರದೇಶಗಳಿಂದ ಆಮದಾಗುವ ತೆಂಗಿನ ಉತ್ಪನ್ನಗಳು ಮತ್ತು ಅದಕ್ಕೆ ಪರ್ಯಾಯವಾದ ಸರಕುಗಳು ಅತಿ ಅಗ್ಗದ ಬೆಲೆಗೆ ಸಿಗುತ್ತವೆ. ಆಗ ಸ್ಥಳೀಯ ಬೆಳೆಗಳನ್ನು ಬಳಕೆದಾರರು ನಿರ್ಲಕ್ಷಿಸುತ್ತಾರೆ. ತೆಂಗಿನೆಣ್ಣೆ ಉಪಯೋಗಿಸುತ್ತಿದ್ದ ಸಣ್ಣ ತಯಾರಿಕಾ ಘಟಕಗಳು ಈಗ ಅದಕ್ಕೆ ಪರ್ಯಾಯವಾದ ತಾಳೆ ಎಣ್ಣೆ ಉಪಯೋಗಿಸುತ್ತವೆ. ಹೊರದೇಶದಿಂದ ಬರುವ ಅಗ್ಗದ ಕಾಯಿಪುಡಿಯನ್ನು ಬಳಸುತ್ತವೆ. ಎಷ್ಟೋ ಬಾರಿ ಬೆಲೆ ಮುಖ್ಯವಾಗುತ್ತದೆಯೇ ಹೊರತು ಗುಣಮಟ್ಟವಲ್ಲ. ತೆಂಗಿನ ಉತ್ಪನ್ನಗಳನ್ನು ಬಳಸುವ ತಯಾರಕರು ಹೊರದೇಶಗಳ ಅಗ್ಗದ ಉತ್ಪನ್ನಗಳನ್ನು ಬಳಸುತ್ತಾರೆ. ಆಗ ಸ್ಥಳೀಯ ಮಾರುಕಟ್ಟೆ ಕುಸಿಯುತ್ತದೆ. ಸ್ಥಳೀಯ ತೆಂಗಿನ ಉತ್ಪನ್ನಗಳು ಬೇಡಿಕೆ ಕಳೆದುಕೊಳ್ಳುತ್ತವೆ. ಆಗ ಬೆಲೆ ಕುಸಿತವಾಗುತ್ತದೆ.

ತೆಂಗಿನ ಉಪಉತ್ಪನ್ನಗಳ ನಿರ್ಲಕ್ಷ್ಯ

ತೆಂಗಿನ ಉಪಉತ್ಪನ್ನಗಳಾದ ನಾರು, ಚಿಪ್ಪು, ಇದ್ದಿಲು, ಎಳನೀರು, ತಿರುಳು, ಮರ, ಗರಿಗಳು ರೈತರಿಗೆ ಆದಾಯದ ಉಪಮೂಲಗಳು. ಇವುಗಳನ್ನು ವಿವಿಧ ಬಗೆಯಲ್ಲಿ ಉಪಯೋಗಿಸಿ ರೈತರ ಆದಾಯವನ್ನು ಹೆಚ್ಚಿಸಬೇಕಾಗಿತ್ತು. ಆದರೆ ಈ ಉಪಉತ್ಪನ್ನಗಳನ್ನು ಬಳಸಿಕೊಂಡು ವಿವಿಧ ಬಗೆಯ ಸರಕುಗಳನ್ನು ತಯಾರು ಮಾಡುವ ಕಾರ್ಖಾನೆಗಳಿಗೆ ಮತ್ತು ತಯಾರಿಕಾ ಘಟಕಗಳಿಗೆ ಸರ್ಕಾರಗಳು ಸರಿಯಾದ ಪ್ರೋತ್ಸಾಹ ಕೊಡದೆ ಹಾಗೂ ಅವುಗಳ ಮಾರುಕಟ್ಟೆ ಸೌಲಭ್ಯಗಳನ್ನು ಕಲ್ಪಿಸದೆ ಉಪಉತ್ಪನ್ನಗಳನ್ನು ಕೇಳುವವರೇ ಗತಿಯಿಲ್ಲದಂತಾಗಿದೆ. ತೆಂಗಿನ ಮಟ್ಟೆಯನ್ನು ಬೀದಿಯಲ್ಲಿ ಬಿಸಾಕಿದರೂ ತೆಗೆದುಕೊಂಡು ಹೋಗುವವರಿಲ್ಲ. ಚಿಪ್ಪನ್ನು ಕೇಳುವವರಿಲ್ಲ. ಹಾಗಾಗಿ ರೈತರ ಆದಾಯಕ್ಕೆ ಮತ್ತಷ್ಟು ಹೊಡೆತ ಬಿದ್ದಿದೆ.

ಮೌಲ್ಯವರ್ಧನೆಗೆ ಯೋಜನೆಗಳಿಲ್ಲ

ತೆಂಗಿನ ಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ, ಅದನ್ನು ಸುವ್ಯವಸ್ಥಿತವಾಗಿ ಮಾರುಕಟ್ಟೆ ಮಾಡುವ ಯೋಜನೆಗಳಿಲ್ಲ. ತೆಂಗಿನ ಉತ್ಪನ್ನಗಳಿಂದ ವೈವಿಧ್ಯಮಯ ತಿನಿಸುಗಳನ್ನು ತಯಾರಿಸಬಹುದು. ನೀರಾ, ಎಳನೀರು, ತೆಂಗಿನಹಾಲುಗಳನ್ನು ಸಂಸ್ಕರಿಸಿ ಮಾರಬಹುದು. ಅದರ ಸಾಧ್ಯತೆಗಳು ಅಗಾಧವಾಗಿವೆ. ಆದರೆ ಯಾವುದೇ ಸರ್ಕಾರ ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತವಾಗಿಲ್ಲ. ಆದ್ದರಿಂದ ತೆಂಗಿನ ಉತ್ಪನ್ನಗಳನ್ನು ಯೋಜಿತ ರೀತಿಯಲ್ಲಿ ಮಾರುವ ಅವಕಾಶ ಇಲ್ಲದಾಗಿದೆ. ಇದರಿಂದ ತೆಂಗಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುವುದು ತಪ್ಪಿಹೋಗಿದೆ.

ಕೊಬ್ಬರಿ ಖರೀದಿಯಲ್ಲಿ ಅನ್ಯಾಯ

ಕರ್ನಾಟಕದಲ್ಲಿ 2022–23 ನೇ ಸಾಲಿನಲ್ಲಿ ಒಟ್ಟು 6.46 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗಿದ್ದು. ಅಂದಾಜು 58,440 ಲಕ್ಷ ಕಾಯಿಗಳ ಉತ್ಪಾದನೆ ಹಾಗೂ 2.18 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿ ಉತ್ಪಾದನೆಯಾಗಿದೆ. ಆದರೆ ಕೇಂದ್ರಸರ್ಕಾರ ಶೇ. 25 ರಷ್ಟನ್ನು ಮಾತ್ರ ನೆಫೆಡ್ ಮೂಲಕ ಖರೀದಿಸುತ್ತಿದೆ. (54,750 ಮೆಟ್ರಿಕ್ ಟನ್) ಉಳಿದ ಕೊಬ್ಬರಿಯನ್ನು ರೈತರು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕೇಂದ್ರ ಸರ್ಕಾರ ನೆಫೆಡ್ ಮೂಲಕ ಕೊಬ್ಬರಿಯನ್ನು ಖರೀಧಿಸಲು ಕ್ವಿಂಟಾಲ್ ಗೆ 11,750 ರೂ. ಬೆಂಬಲ ಬೆಲೆಯನ್ನು ಘೋಷಿಸಿದೆ ಆದರೆ ರಾಜ್ಯ ಸರ್ಕಾರದ ತೋಟಗಾರಿಕೆ ಇಲಾಖೆಯು ರಾಜ್ಯದ ಕೊಬ್ಬರಿಗೆ ಕ್ವಿಟಾಲ್ ಗೆ 16730 ರೂಗಳನ್ನು ನಿಗದಿಮಾಡುವಂತೆ ಶಿಫಾರಸ್ಸು ಮಾಡಿದ್ದರು ಕೇಂದ್ರದ ಕೃಷಿ ಬೆಲೆ ನಿಗದಿ ಆಯೋಗವು ಈ ಶಿಫಾರಸ್ಸನ್ನು ಪರಿಗಣಿಸಿಲ್ಲ.

ಸರ್ಕಾರಿ ಸಂಸ್ಥೆಗಳ ಮೂಲಕ ತೆಂಗಿನ ಉತ್ಪನ್ನಗಳ ಬಳಕೆ ಮತ್ತು ಮಾರಾಟ

ಸರ್ಕಾರಗಳಿಗೆ ತೆಂಗು ಬೆಳೆಗಾರರ, ಒಟ್ಟಾರೆಯಾಗಿ ರೈತರ ಬಗ್ಗೆ ಕಾಳಜಿಯಿದ್ದರೆ ತೆಂಗಿನ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುವಂತೆ ಹಲವಾರು ಕೆಲಸಗಳನ್ನು ಮಾಡಬೇಕಿತ್ತು. ತೆಂಗಿನ ಉತ್ಪನ್ನಗಳನ್ನು ಸೋಪು, ಮುಂತಾದ ತಯಾರಿಕೆಗಳಿಗೆ ಉಪಯೋಗಿಸುವುದರಿಂದ ಸರ್ಕಾರಿ ತಯಾರಿಕಾ ಘಟಕಗಳು ಕಡ್ಡಾಯವಾಗಿ ತೆಂಗಿನ ಎಣ್ಣೆ ಹಾಗೂ ಇತರೆ ಉತ್ಪನ್ನಗಳನ್ನು

ಪುಟ 10 ಕ್ಕೆ

ಭಾರತವೇ ಅತಿದೊಡ್ಡ ತೆಂಗು ಉತ್ಪಾದಕನಾಗಿದ್ದರೂ ಸಹ ತೆಂಗಿನ ಉತ್ಪನ್ನಗಳನ್ನು ಮತ್ತು ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುವುದೇಕೆ? ಏಕೆಂದರೆ ಇದು ಕೇವಲ ಉತ್ಪಾದಕರು ಮತ್ತು ಗ್ರಾಹಕರ ನಡುವಿನ ವ್ಯಾಪಾರವಲ್ಲ. ಇದರ ಮಧ್ಯೆ ದೈತ್ಯ ವರ್ತಕರಿದ್ದಾರೆ. ಕಾರ್ಪೊರೆಟ್ ಕಂಪೆನಿಗಳ ಬಂಡವಾಳಿಗರಿದ್ದಾರೆ. ಅವರು ರಫ್ತು ಮತ್ತು ಆಮದು ಎರಡರಲ್ಲೂ ಲಾಭ ಮಾಡಿಕೊಳ್ಳುತ್ತಾರೆ. ಜಾಗತೀಕರಣಕ್ಕೂ ಮುಂಚೆ ಸುಂಕದ ಗೋಡೆಗಳು ಭಾರತದಿಂದ ಹೊರ ಹೋಗುವ ಮತ್ತು ಒಳಬರುವ ಸರಕುಗಳನ್ನು ಇಲ್ಲಿಯ ಅವಶ್ಯಕತೆಯನ್ನು ನೋಡಿಕೊಂಡು, ಅಂದರೆ ಸ್ಥಳೀಯ ಮಾರುಕಟ್ಟೆಗೆ ಧಕ್ಕೆ ಬಾರದಂತೆ ಆಮದು ಮತ್ತು ರಫ್ತುಗಳನ್ನು ನಿಯಂತ್ರಿಸುತ್ತಿದ್ದವು. ಈಗ ಜಾಗತೀಕರಣದ ಜಗತ್ತಿನಲ್ಲಿ ಸುಂಕದ ಗೋಡೆಗಳು ಒಡೆದು ಹೋಗಿರುವುದರಿಂದ ಬೇರೆ ದೇಶಗಳ ಉತ್ಪನ್ನಗಳು ಬಹಳ ಸುಲಭವಾಗಿ ಭಾರತದ ಮಾರುಕಟ್ಟೆಗೆ ಬಂದು ಇಲ್ಲಿಯ ಬೆಳೆಗಾರರನ್ನು ಬೀದಿಪಾಲು ಮಾಡುತ್ತವೆ.



ರೈತರ ಪಾಲಿಗೆ ಕಲ್ಪತರುವಾಗಿ ಉಳಿಯದ ತೆಂಗು........ ಪುಟ 9 ರಿಂದ

ಬಳಸಬೇಕೆಂದು ಆದೇಶ ಹೊರಡಿಸಿದ್ದರೆ, ಆಮದಿನ ಹೊಡೆತದಿಂದ ರೈತರು ತಪ್ಪಿಸಿಕೊಳ್ಳಬಹುದಾಗಿತ್ತು. ಸರ್ಕಾರ ನೇರವಾಗಿ ಬೆಳೆಗಾರರಿಂದ ತೆಂಗಿನಕಾಯಿ, ಕೊಬ್ಬರಿಯನ್ನು ಖರೀದಿಸಿ ಪಡಿತರ ವ್ಯವಸ್ಥೆ, ಜನತಾ ಬಜಾರ್‌ಗಳ ಮೂಲಕ ಗ್ರಾಹಕರಿಗೆ ನೇರವಾಗಿ ತಲುಪಿಸಬಹುದು, ಇದರಿಂದ ರೈತರಿಗೂ ಅನುಕೂಲ ಮತ್ತು ಗ್ರಾಹಕರಿಗೂ ಉತ್ತಮ ಗುಣಮಟ್ಟದ ತೆಂಗಿನಕಾಯಿ, ಕೊಬ್ಬರಿ ಕಡಿಮೆ ಬೆಲೆಗೆ ಸಿಗುತ್ತಿತ್ತು. ಆದರೆ ಯಾವುದೇ ಈ ದಿಕ್ಕಿನಲ್ಲಿ ಯೋಚಿಸುತ್ತಲೂ ಇಲ್ಲ.

ಹಾಗಾದರೆ ಸರ್ಕಾರಗಳೇಕೆ ಈ ಕ್ರಮಗಳನ್ನು ತೆಗೆದುಕೊಳ್ಳುತ್ತಿಲ್ಲ?

ಇಂದು ಸರ್ಕಾರಗಳು ಕಾರ್ಪೊರೇಟ್ ಕಂಪೆನಿಯ ಪಾದಸೇವಕರಾಗಿದ್ದಾರೆ. ಪ್ರಜಾತಂತ್ರದ ಕೆಳಗೆ ಸಾಮಾನ್ಯ ಪ್ರಜೆ ಅಸಹಾಯಕ ಸ್ಥಿತಿಯಲ್ಲಿದ್ದಾನೆ. ಸರ್ಕಾರಗಳ ಎಲ್ಲಾ ನೀತಿಗಳು ಕಾರ್ಪೊರೇಟ್ ಕಂಪೆನಿಗಳನ್ನು ಉದ್ಧಾರ ಮಾಡುತ್ತಿವೆ. ಇಂದು ಭಾರತದ ಮೂವರು ವಿಶ್ವದ ಅತಿ ಶ್ರೀಮಂತರ ಪಟ್ಟಿಯಲ್ಲಿದ್ದಾರೆ. ಆದರೆ, ದೇಶದ ಶೇ. 50ಕ್ಕೂ ಹೆಚ್ಚು ಜನ ಬಡತನದ ರೇಖೆಗಿಂತ ಕೆಳಗೆ ಬರುತ್ತಾರೆ. ಸರ್ಕಾರ ನಾವಿಲ್ಲಿ ಸೂಚಿಸಿರುವ ಪರಿಹಾರದ ಕ್ರಮಗಳನ್ನು ತೆಗೆದುಕೊಂಡರೆ ಮಧ್ಯವರ್ತಿಗಳ ಮತ್ತು ಕಾರ್ಪೊರೇಟ್ ಕಂಪೆನಿಗಳ ಆದಾಯ ಕಡಿಮೆಯಾಗುತ್ತದೆ. ಅವರು ರೈತರಿಂದ ಅತಿ ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಬೇಕು. ಆಮದು ಮತ್ತು ರಫ್ತು ಎರಡೂ ವ್ಯಾಪಾರದಲ್ಲೂ ಯಥೇಚ್ಚ ಲಾಭಗಳಿಸಬಹುದು. ಅಲ್ಲದೇ ತೆಂಗಿನ ಉತ್ಪನ್ನಗಳನ್ನು ಸಂಸ್ಕರಿಸಿ ಮಾರಾಟ ಮಾಡುತ್ತಾರೆ. ಅದಕ್ಕೆಲ್ಲಾ ಸರ್ಕಾರ ರೈತರಿಂದಲೇ ಭೂಮಿ ಕಸಿದುಕೊಂಡು ಕಂಪೆನಿಗಳಿಗೆ ಆಹಾರ ಸಂಸ್ಕರಣೆಗೆ ಎಲ್ಲಾ ಸಹಾಯಗಳನ್ನು ಮಾಡುತ್ತದೆ. ತುಮಕೂರಿನಲ್ಲಿ ನೂರಾರು ಎಕರೆ ಜಮೀನನ್ನು ಫುಡ್‌ಪಾರ್ಕ್‌ಗೆ ಎಂದು ನೀಡಿದರು. ಆದರೆ ಅಲ್ಲಿ ಏನಾಗುತ್ತಿದೆ? ರೈತರಿಗೆ ಸಹಾಯವಾಯಿತೆ? ಇದು ಯಾರಿಗೂ ತಿಳಿಯದ ಚಿದಂಬರ ರಹಸ್ಯವಾಗಿದೆ.

ಮುಂದಿನ ದಾರಿ

ನಾವು 2023ರಲ್ಲಿ ದೇಶದ ಸ್ವಾತಂತ್ರ್ಯಕ್ಕೆ 75 ವರ್ಷಗಳು ತುಂಬಿದ ಸಂದರ್ಭವನ್ನು ಸಡಗರದಿಂದ ಆಚರಿಸಿಕೊಳ್ಳಬೇಕಾಗಿತ್ತು. ಆದರೆ ಸ್ವತಂತ್ರ ಭಾರತದಲ್ಲಿ ತೆಂಗಿನ ಸೀಮೆಯ ರೈತರಿಗೆ ಯಾವ ಸಂತೋಷ? ಕೊಬ್ಬರಿ ಬೆಲೆ ಹಿಂದೆಂದೂ ಕಂಡರಿಯದಂತೆ ಪಾತಾಳಕ್ಕೆ ಕುಸಿದಿದೆ. ಕಳೆದ ವರ್ಷ ಇದೇ ಸಮಯದಲ್ಲಿ ರೂ. 19,000 ದಾಟಿದ್ದ ಕೊಬ್ಬರಿ ಬೆಲೆ ಈ ವರ್ಷ ರೂ. 7,000 ಕ್ಕೆ ಕುಸಿದಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಂಗಿನ ಬೆಳೆಗಾರರ ಬೆಂಬಲಕ್ಕೆ ನಿಲ್ಲದೆ ಮೂಗಿಗೆ ತುಪ್ಪ ಸವರಿ ಬೆನ್ನಿಗೆ ಚೂರಿ ಹಾಕುತ್ತಿವೆ,

ಸರ್ಕಾರದ ತೋಟಗಾರಿಕಾ ಇಲಾಖೆಯೇ ಕೊಬ್ಬರಿಗೆ ಕನಿಷ್ಟ ರೂ. 16,700 ಬೆಂಬಲ ಬೆಲೆ ಕೊಡಬೇಕೆಂದು ಶಿಫಾರಸ್ಸು ಮಾಡಿದ್ದರೂ, ಕೇಂದ್ರ ಸರ್ಕಾರ ಆ ಕಡತದ ಮೇಲೆ ಬಿಗಿಯಾಗಿ ಕುಳಿತಿದೆ. ಕೊಬ್ಬರಿಗೆ ವೈಜ್ಞಾನಿಕ ಬೆಲೆಯನ್ನು ನಿಗದಿಪಡಿಸಿಲ್ಲ. ರೈತರು ಇತ್ತ ಖರೀದಿ ಕೇಂದ್ರಕ್ಕೂ ಕೊಡಲಾರದೆ, ಅತ್ತ ಖಾಸಗಿ ಮಾರುಕಟ್ಟೆಯಲ್ಲೂ ಮಾರಲಾಗದೆ ಅಡಕತ್ತರಿಗೆ ಸಿಲುಕಿದ್ದಾರೆ. ಕೊಬ್ಬರಿ ಮನೆಯಲ್ಲಿ ಕೊಳೆಯುತ್ತಿವೆ. ಕೊಬ್ಬರಿ ಬೆಳೆಗಾರರು ರಾಜ್ಯದಾದ್ಯಂತ ಹೋರಾಟಗಳನ್ನು ನಡೆಸಿದರು. ಬೀದಿಗಿಳಿದು ಪ್ರತಿಭಟನೆ ಮಾಡಿದರು. ಎಲ್ಲಾ ದಿಕ್ಕುಗಳಿಂದಲೂ ಸರ್ಕಾರಕ್ಕೆ ಒತ್ತಡ ತಂದರು. ರಾಜ್ಯ ಸರ್ಕಾರ ಕೇವಲ ರೂ. 1,250 ಪ್ರೋತ್ಸಾಹಧನ ಘೋಷಿಸಿದೆ. ಆದರೆ ರಾಜ್ಯ ಸರ್ಕಾರ ಘೋಷಿಸಿರುವ ಈ ಪ್ರೋತ್ಸಾಹ ಧನ ಸಿಗುವುದು ನಫೆಡ್ ಮೂಲಕ ನೊಂದಣಿ ಮಾಡಿಸಿಕೊಂಡವರಿಗೆ ಮಾತ್ರ. ಪ್ರಸ್ತುತ 37,632 ರೈತರು ಮಾತ್ರ ನೊಂದಣಿ ಮಾಡಿಸಿಕೊಂಡಿದ್ದಾರೆ. ಪ್ರಸ್ತುತ ನೊಂದಣಿ ಪ್ರಕ್ರಿಯೆ ಮುಕ್ತಾಯವಾಗಿದ್ದು ವರ್ಷದ 6 ತಿಂಗಳು ಮಾತ್ರ ಖರೀದಿ ಕೇಂದ್ರಗಳನ್ನು ತೆರೆಯಲಾಗುತ್ತದೆ ಉಳಿದ 6 ತಿಂಗಳು ರೈತರು ತಮ್ಮ ಕೊಬ್ಬರಿಯನ್ನು ಎಲ್ಲಿ ಮಾರಾಟ ಮಾಡಬೇಕು ಎಂಬ ಪ್ರಶ್ನೆ ಸಹಜವಾಗಿಯೇ ಎದುರಾಗುತ್ತದೆ. ಒಂದೆಡೆ ಕೇಂದ್ರ ಸರ್ಕಾರ ತನ್ನ ಬೆಂಬಲ ಬೆಲೆಯನ್ನು ಕ್ವಿಂಟಾಲ್ ಕೊಬ್ಬರಿಗೆ ಕನಿಷ್ಟ ರೂ. 20,000 ನಿಗದಿ ಮಾಡಬೇಕು ಮತ್ತು ರಾಜ್ಯ ಸರ್ಕಾರ ಕನಿಷ್ಟ ರೂ. 5,000 ಪ್ರೋತ್ಸಾಹಧನ ನೀಡಬೇಕು ಎಂದು ರಾಜ್ಯದ ತೆಂಗು ಬೆಳೆಗಾರರು ನಿರಂತರವಾಗಿ ಒತ್ತಾಯಿಸುತ್ತಾ ಬಂದಿದ್ದಾರೆ. ಆದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಕುರಿತು ರೈತ ಪರವಾದ ಯಾವುದೇ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿಲ್ಲ.

ಹೋರಾಟದ ದಾರಿ:

ಕೇಂದ್ರ ಸರ್ಕಾರದ ಈ ರೈತ ವಿರೋಧಿ ನೀತಿಗಳ ವಿರುದ್ಧ ರಾಜ್ಯದ ತೆಂಗು ಬೆಳೆಗಾರರು ಸಂಘಟಿತರಾಗಿ ಹೋರಾಟಕ್ಕಿಳಿದಿದ್ದರೆ. ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಜುಲೈ 19ರಂದು ತೆಂಗುಬೆಳೆಗಾರರ ವಿಧಾನಸೌಧ ಚಲೋ ನಡೆಸಿ, ರಾಜ್ಯ ಮತ್ತು ಕೇಂದ್ರ ಸರ್ಕಾರದ ಗಮನವನ್ನು ಸೆಳೆಯಲು ಪ್ರಯತ್ನಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯದ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ್‌ರವರನ್ನು ಭೇಟಿ ಮಾಡಿ ಚರ್ಚಿಸಲಾಯಿತು. ನಂತರ ಎಲ್ಲಾ ರೈತ ಸಂಘಟನೆಗಳನ್ನು ಒಳಗೊಂಡ 'ಸಂಯುಕ್ತ ಹೋರಾಟ ಕರ್ನಾಟಕ'ದ ಹೆಸರಿನಲ್ಲಿ ಕಲ್ಪತರು ನಾಡು ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಜುಲೈ 24 ರಂದು ರಾಜ್ಯ ಮಟ್ಟದ ದುಂಡು ಮೇಜಿನ ಸಭೆಯನ್ನು ನಡೆಸಿ, ರಾಜ್ಯದ ತೆಂಗು ಬೆಳೆಗಾರರ ಸಮಸ್ಯೆ ಮತ್ತು ಪರಿಹಾರಗಳ ಕುರಿತು ವಿವರವಾಗಿ ಚರ್ಚಿಸಲಾಯಿತು. ಈ ಸಭೆಯ ತೀರ್ಮಾನದಂತೆ ಆಗಸ್ಟ್ 5 ರಂದು ರಾಜ್ಯದ ಎಲ್ಲಾ ಸಂಸತ್ ಸದಸ್ಯರ ಮನೆ ಮತ್ತು ಕಛೇರಿಗಳ ಎದುರು ಪ್ರತಿಭಟನೆಯನ್ನು ನಡೆಸಿ ಬೇಡಿಕೆ ಪತ್ರವನ್ನು ಸಲ್ಲಿಸಲಾಗಿದೆ. ಹಾಗೂ ಅಕ್ಟೋಬರ್ 3 ರಂದು ತೆಂಗುಬೆಳೆಗಾರರ ರಾಜಭವನ ಚಲೋ ನಡೆಸಿ, ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ಮೂಲಕ ರಾಜಪಾಲರನ್ನು ಭೇಟಿ ಮಾಡಿ ಸಮಸ್ಯೆಯನ್ನು ಮನವರಿಕೆ ಮಾಡಿಕೊಡಲಾಗಿದೆ. ಆದಷ್ಟು ಬೇಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮಸ್ಯೆಗಳನ್ನು ಬಗೆಹರಿಸದಿದ್ದರೆ ಮುಂದಿನ ದಿನಗಳಲ್ಲಿ ಬೃಹತ್ ಪ್ರತಿಭಟನೆಯನ್ನು ನಡೆಸಲು ರಾಜ್ಯದ ತೆಂಗು ಬೆಳೆಗಾರರು ನಿರ್ಧರಿಸಿದ್ದಾರೆ.

ಕೇಂದ್ರ ಸರ್ಕಾರಕ್ಕೆ ಹಕ್ಕೊತ್ತಾಯಗಳು

1. ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ. 20,000 ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಬೇಕು.
2. ಎಳನೀರು ಮತ್ತು ತೆಂಗಿನಕಾಯಿಗೂ ಕನಿಷ್ಠ ಬೆಂಬಲ ಬೆಲೆ ನಿಗಿಪಡಿಸಬೇಕು.
3. ಉತ್ತರ ಭಾರತದ ಮಾದರಿಯಲ್ಲಿ ಪ್ರಮಾಣ ಮಿತಿ ಹೇರದೇ ತೆಂಗಿನ ಉತ್ಪನ್ನವನ್ನು ಸಂಪೂರ್ಣವಾಗಿ ಖರೀದಿಸಬೇಕು, ಅದನ್ನು ಕಾನೂನುಬದ್ಧಗೊಳಿಸಬೇಕು ಮತ್ತು ಅದಕ್ಕೆ ಅವಶ್ಯಕತೆಯಿರುವಷ್ಟು ಹಣ ಬಿಡುಗಡೆ ಮಾಡಬೇಕು. ವರ್ಷ ಪೂರ್ತಿ ಮಾರುಕಟ್ಟೆ ತೆರೆದಿರಬೇಕು.
4. ಮುಕ್ತ ಮಾರುಕಟ್ಟೆಯಡಿಯಲ್ಲಿ ತೆಂಗಿನ ಉತ್ಪನ್ನ ಮತ್ತು ಖಾದ್ಯ ತೈಲ ಆಮದನ್ನು ಕೂಡಲೇ ನಿಲ್ಲಿಸಬೇಕು.
5. ಕೇಂದ್ರ ಸರ್ಕಾರದ ಎಣ್ಣೆ ಉಪಯೋಗಿಸುವ ಕಾರ್ಖಾನೆಗಳು ಹಾಗೂ ಸಂಸ್ಥೆಗಳು ತೆಂಗಿನೆಣ್ಣೆಯನ್ನು ಉಪಯೋಗಿಸಬೇಕು.
6. ಪೂರ್ಣ ಖರೀದಿಯನ್ನು ದಾಸ್ತಾನು ಮಾಡಲು ಬೃಹತ್ ಗೋದಾಮುಗಳನ್ನು ಮತ್ತು ಬಹಳ ಕಾಲ ಕಾಪಾಡಲು ಶೀತಲೀಕರಣ ವ್ಯವಸ್ಥೆಯನ್ನು ಮಾಡಬೇಕು.

ರಾಜ್ಯ ಸರ್ಕಾರಕ್ಕೆ ಹಕ್ಕೊತ್ತಾಯಗಳು

1. ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ. 5,000 ಪ್ರೋತ್ಸಾಹಧನ ನೀಡಬೇಕು ಮತ್ತು ಪೂರ್ವಾನ್ವಯ ಮಾಡಬೇಕು.
2. ಪ್ರತಿ ಹೋಬಳಿಗೊಂದು ಖರೀದಿ ಕೇಂದ್ರಗಳನ್ನು ತೆರೆಯಬೇಕು.
3. ಆವರ್ತ ನಿಧಿಯನ್ನು ಅನ್ಯ ಯೋಜನೆಗಳಿಗೆ ಉಪಯೋಗಿಸಬಾರದು ಮತ್ತು ರೈತರ ಉತ್ಪನ್ನಗಳನ್ನು ಕೊಳ್ಳುವಷ್ಟು ಹೆಚ್ಚಿಸಬೇಕು.
4. ಮೌಲ್ಯವರ್ಧಿತ ತೆಂಗಿನ ಉತ್ಪನ್ನಗಳಾದ ನಾರು, ಚಿಪ್ಪು, ನೀರಾ, ಇದ್ದಿಲು, ಎಳನೀರು, ತಿರುಳು, ಮರ, ಗರಿಗಳನ್ನು ತಯಾರಿಸುವ ಕಾರ್ಖಾನೆಗಳಿಗೆ ಪ್ರೋತ್ಸಾಹ ಕೊಡಬೇಕು ಮತ್ತು ಅದನ್ನು ಮಾರುಕಟ್ಟೆ ಮಾಡಬೇಕು.
5. ಸರ್ಕಾರಿ ಕಾರ್ಖಾನೆಗಳು ಯಾವುದೇ ಕಾರಣಕ್ಕೂ ತಾಳೆ ಎಣ್ಣೆ ಉಪಯೋಗಿಸದೆ ತೆಂಗಿನೆಣ್ಣೆಯನ್ನು ಉಪಯೋಗಿಸಬೇಕು.
6. ರಾಜ್ಯ ಸರ್ಕಾರ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ಖರೀದಿಸಿ ಪಡಿತರ, ಜನತಾ ಬಜಾರ್‌ಗಳ ಮೂಲಕ ಜನರಿಗೆ ಮಾರಾಟ ಮಾಡಬೇಕು.

ಮಹಿಳಾ ಕಟ್ಟಡ ಕಾರ್ಮಿಕರ ಬದುಕು...... ಪುಟ 8 ರಿಂದ

ಕಾರ್ಮಿಕ ಮಹಿಳೆಯರು ಮನೆಯಿಂದ ಕೆಲಸದ ಸ್ಥಳಕ್ಕೆ ಹೋಗಿ, ಕೆಲಸ ಮುಗಿಸಿ ಮತ್ತೆ ಮನೆ ಸೇರುವಾಗ ಕನಿಷ್ಟ ನಾಲ್ಕೈದು ಸಲವಾದರು ಪಾವತಿಸಿ ಬಳಸುವ ಶೌಚಾಲಯಕ್ಕಾಗಿ 20ರೂ ಖರ್ಚು ಮಾಡಲೇಬೇಕಿದೆ. ಮುಟ್ಟಿನ ಸಂದರ್ಭದಲ್ಲಿ ದಿನಕ್ಕೆ ಕನಿಷ್ಟ 30 ರೂ ಖರ್ಚು ಇದ್ದೇ ಇರುತ್ತದೆ.

ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯಗಳು

ಕೆಲಸದ ಸ್ಥಳಗಳಲ್ಲಿ ಲೈಂಗಿಕ ದೌರ್ಜನ್ಯಗಳು ಕಿರುಕುಳಗಳು ಇವೆಯಾ ಎಂದು ಪ್ರಶ್ನಿಸಿದರೆ ಮಹಿಳೆಯರು ಇಲ್ಲವೇ ಇಲ್ಲ ಎನ್ನುತ್ತಾರೆ ಅಥವಾ ಮೌನಕ್ಕೆ ಜಾರುತ್ತಾರೆ. ಲೈಂಗಿಕ ಕಿರುಕುಳವೆಂದರೆ ಕಣ್ಣು ಸನ್ನೆ ಮಾಡುವುದು, ಡಬಲ್ ಮೀನಿಂಗ್ ಪದಗಳನ್ನು ಬಳಸುವುದು, ದೇಹದ ಅಂಗಾಗಗಳನ್ನು ಮುಟ್ಟುವುದು ಆಗಿದೆ ಎಂದು ವಿವರಿಸುವಾಗ 'ಸಣ್ಣಪುಟ್ಟದ್ದು ಇರಾದೆ ಮೇಡಂ ಅಂಥಾ ಸಮಸ್ಯೆ ಇದ್ದಲ್ಲಿ ಕೆಲಸ ಬಿಟ್ಟು ಬೇರೆ ಮೇಸ್ತ್ರಿ ಬಳಿ ಕೆಲಸಕ್ಕೆ ಹೋದರಾಯ್ತು' ಎಂದು ಕನಕಪುರ ರಸ್ತೆಯ ಗಾರೆ ಕೆಲಸ ಮಾಡುವ ಮಹಿಳೆ ಹೇಳುತ್ತಾರೆ. ಒಬ್ಬ ಮಹಿಳೆ ಮಾತ್ರ ಹತ್ತಿರ ಬಂದು, ಕೆಲಸದ ಸ್ಥಳಗಳಲ್ಲಿ ಇಂಥ ಮಂದಿ ಇದ್ದಾರೆ. ಆದರೆ ಜೋಪಡಿಗಳ ಬಳಿ ಒಬ್ಬೊಬ್ಬರೇ ಇರುವಾಗ ಭಯ ಆಗ್ತಾದೆ. ಕುಡುಕರು ಮನೆಗೆ ನುಗ್ಗಿ ದಾಂದಲೆ ಮಾಡಿದ್ದು ಇದೆ ಮೇಡಂ ಎಂದರು. ಇನ್ನು ಲೈಂಗಿಕ ದೌರ್ಜನ್ಯಗಳ ಕುರಿತು ದೂರು ದಾಖಲು ಮಾಡಿ ಹೋರಾಡುವುದು ಇವರಿಗೆ ಬಹು ದುಬಾರಿ ಮತ್ತು ದೂರದ ಮಾತೇ ಆಗಿದೆ.

ಕಲ್ಯಾಣ ಮಂಡಳಿ ಇದ್ದರೂ

ಕರ್ನಾಟಕ ರಾಜ್ಯದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ಇದ್ದರೂ ಇನ್ನುವೇ ಲಕ್ಷಾಂತರ ನೈಜ ಕಟ್ಟಡ ಕಾರ್ಮಿಕರು ಮಂಡಳಿಯ ಸೌಲಭ್ಯಗಳಿಂದ ದೂರವೇ ಉಳಿದಿದ್ದಾರೆ. ಮಹಿಳೆಯರಿಗಿರುವ ಅಲ್ಪಸ್ವಲ್ಪ ಸೌಲಭ್ಯಗಳು ಸಿಗುವುದು ಸುಲಭ ಸ್ನೇಹಿಯಾಗಿಲ್ಲ. ಕಟ್ಟಡ ಕಾರ್ಮಿಕ ಮಹಿಳೆಯರ ಸಮಸ್ಯೆಗಳ ಕುರಿತು ಯಾವುದೇ ಅಧ್ಯಯನವಾಗಲೀ, ಅಂದಾಜಾಗಲಿ ಮಂಡಳಿಗಿಲ್ಲ. ಪ್ರದೇಶವಾರು ಸರ್ಕಲ್ ಇನ್ಸೆಕ್ಟರ್ ಇದ್ದರೂ ಕಛೇರಿಗಳಿಗೆ ಸೀಮಿತರಾಗಿರುವ ಹಿನ್ನಲೆಯಲ್ಲಿ ಮಹಿಳಾ ಕಟ್ಟಡ ಕಾರ್ಮಿಕರ ಕೆಲಸದ ಸ್ಥಳದ ಮತ್ತು ವಾಸಸ್ಥಳದ ಗೋಳು ಕೇಳುವವರೇ ಇಲ್ಲವಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಷನ್ (CITU;CWFI) ಕರ್ನಾಟಕ ರಾಜ್ಯ ಸಮಿತಿಯು ಕಟ್ಟಡ ಕಾರ್ಮಿಕ ಮಹಿಳೆಯರ ಸಮಸ್ಯೆಗಳ ಕಡೆಗೆ ಪ್ರಭುತ್ವದ ಗಮನ ಸೆಳೆದು, ಪರಿಹಾರ ಮತ್ತು ಪರ್ಯಾಯಗಳನ್ನು ರೂಪಿಸಲು ಸೆಪ್ಟೆಂಬರ್ 10 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಮಹಿಳಾ ಕಟ್ಟಡ ಕಾರ್ಮಿಕರ ಸಮಾವೇಶವನ್ನು ಸಂಘಟಿಸಿತು. ರಾಜ್ಯದ ಎಲ್ಲಡೆಯಿಂದ 175 ಕ್ಕೂ ಹೆಚ್ಚು ಮಹಿಳಾ ಕಟ್ಟಡ ಕಾರ್ಮಿಕರು ಭಾಗವಹಿಸಿದ್ದು ಅವರು ಮಹಿಳೆಯರಾಗಿ, ಕಟ್ಟಡ ಕಾರ್ಮಿಕರಾಗಿ ಎದುರಿಸುತ್ತಿರುವ ಸಮಸ್ಯೆಗಳನ್ನು ಹಂಚಿಕೊಂಡರು. ಈ ಕುರಿತು ಮಹಿಳಾ ಕಟ್ಟಡ ಕಾರ್ಮಿಕರ ಉಪಸಮಿತಿಯ ನಿಯೋಗ ಮಂಡಳಿಯ ಅಧಿಕಾರಿಗಳನ್ನು ಭೇಟಿಮಾಡಲಿದೆ. ಮುಂದುವರೆದು ಇದೇ ನವೆಂಬರ್ 6 ರಂದು ತಮಿಳುನಾಡಿನಲ್ಲಿ ಮಹಿಳಾ ಕಟ್ಟಡ ಕಾರ್ಮಿಕರ ಅಖಿಲ ಭಾರತ ಸಮಾವೇಶ ನಡೆಯಲಿದ್ದು, ನಮ್ಮ ರಾಜ್ಯವನ್ನು ಪ್ರತಿನಿಧಿಸಿ 20 ಮಹಿಳಾ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

ಜನಶಕ್ತಿ
ಕನ್ನಡ ವಾರಪತ್ರಿಕೆ


ಚಂದಾದಾರರಾಗಿರಿ

ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂಪರ್ಕಿಸಿ:

ಕ್ರಿಯಾ ಪ್ರಕಾಶನ, ಸೂರಿ ಭವನ, ನಂ.40/5, 2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ: 080–22234369
ಫೋನ್: 9448578021, 9483966467

ಭಾರತೀಯ ರಿಸರ್ವ್ ಬ್ಯಾಂಕ್ ನಲ್ಲಿನ ಮೀಸಲು ನಿಧಿಯನ್ನೂ ಬಿಡದ ಮೋದಿ ಸರ್ಕಾರ



ಭಾರತ ಒಕ್ಕೂಟ ಸರ್ಕಾರದ ಪ್ರಧಾನಿ ಪಟ್ಟ ಅಲಂಕರಿಸಿದ ಮೋದಿ, ತಮ್ಮ ಅಧಿಕಾರಾವಧಿಯ 9ವರ್ಷಗಳಲ್ಲಿ 4.7 ಲಕ್ಷ ಕೋಟಿ ರೂ ಮೌಲ್ಯದ ಸಾರ್ವಜನಿಕ ಆಸ್ತಿಗಳನ್ನು ಮಾರಿದರು. ಈ ಅವಧಿಯಲ್ಲೇ ನೂರು ಲಕ್ಷ ಕೋಟಿ (100 ಲಕ್ಷ ಕೋಟಿ) ಸಾಲ ಮಾಡಿ, 2014ರ ವರೆಗೂ 55 ಲಕ್ಷ ಕೋಟಿ ಇದ್ದ ಒಕ್ಕೂಟ ಸರ್ಕಾರದ ಸಾಲವನ್ನು 155 ಲಕ್ಷ ಕೋಟಿಗೆ ಹೆಚ್ಚಿಸಿದರು. ಇದೂ ಸಾಲದು ಎಂಬಂತೆ, ಆಪತ್ತಿನ ಕಾಲಕ್ಕೆ ಕೂಡಿಟ್ಟಿದ್ದ ರಿಸರ್ವ್ ಬ್ಯಾಂಕಿನ ಮೀಸಲು ಹಣದ ಮೇಲೂ ಕಣ್ಣಿಟ್ಟು 1.76 ಲಕ್ಷ ಕೋಟಿಯನ್ನೂ ತೆಗೆದುಕೊಂಡರು. ಬ್ಯಾಂಕುಗಳಲ್ಲಿನ ದೊಡ್ಡ ಉದ್ಯಮಿಗಳ ಲಕ್ಷಾಂತರ ಕೋಟಿ ಸಾಲ ಮನ್ನಾ ಮಾಡುತ್ತಾ, ಸಾರ್ವಜನಿಕರ ಆಸ್ತಿ ಮಾರುತ್ತಾ, ಸಾಲ ಮಾಡುತ್ತಾ, ಆಪತ್ತಿನ ಕಾಲಕ್ಕೆಂದು ಅದುವರೆಗೆ ಕೂಡಿಟ್ಟಿದ್ದ ಮೀಸಲು ಹಣಕ್ಕೂ ಕೈ ಹಾಕಿದ ಮೋದಿಯವರ 9 ವರ್ಷಗಳ ಆಡಳಿತದ ಕತೆಯಿದು.

ಮೋದಿ-9 ವರ್ಷಗಳು-ಭಾಗ-21

ಸಿ. ಸಿದ್ದಯ್ಯ

'ವಸೂಲಾಗದ ಸಾಲ (NPA)' ಅಂತ ನಮ್ಮತ್ರ ದೊಡ್ಡ ಪಟ್ಟಿ ತರಬೇಡಿ. ಸಾಲ ವಸೂಲಿ ಮಾಡಿ, ಇಲ್ಲಾ ರೈಟ್ ಆಫ್ ಮಾಡಿ' (Write off ಎಂದರೆ, ವಸೂಲಾಗದ ಸಾಲದ ಲೆಕ್ಕ ಬರೆಯುವ ಪುಸ್ತಕದಿಂದ ಅಳಿಸಿಹಾಕುವುದು) ಎನ್ನುತ್ತಾ ಅಂದಿನ ರಿಸರ್ವ್ ಬ್ಯಾಂಕ್ ಗೌವರ್ನರ್ ರಘುರಾಂ ರಾಜನ್ ರಾಷ್ಟ್ರೀಯ ಬ್ಯಾಂಕುಗಳ ಅಧಿಕಾರಿಗಳಿಗೆ ಎಚ್ಚರಿಕೆ ನೀಡುತ್ತಾರೆ.

ಇದಲ್ಲದೆ, ರಿಸರ್ವ್ ಬ್ಯಾಂಕಿನಲ್ಲಿರುವ 9 ಲಕ್ಷ ಕೋಟಿ ಮೀಸಲು ಹಣದಲ್ಲಿ(ಆಕಸ್ಮಿಕ ನಿಧಿ-contingency fund) ಮೂರನೇ ಒಂದು ಭಾಗ ಹಣವನ್ನು ಸರ್ಕಾರಕ್ಕೆ ವರ್ಗಾವಣೆ ಮಾಡಬೇಕು ಎಂಬ ಕೇಂದ್ರ ಸರ್ಕಾರದ ಸಲಹೆಗೆ ರಾಜನ್ ಒಪ್ಪಲಿಲ್ಲ. ರಾಜನ್ ನಂತರ 2016ರ ಸೆಪ್ಟೆಂಬರ್ 4 ರಂದು ಉರ್ಜಿತ್ ಪಟೇಲರನ್ನು ರಿಸರ್ವ್ ಬ್ಯಾಂಕ್ ಗೌರ್ನರ್ ಹುದ್ದೆಗೆ ನೇಮಕ ಮಾಡುತ್ತಾರೆ.

ನೋಟು ರದ್ದತಿ

ಉರ್ಜಿತ್ ಪಟೇಲ್ ಅವರು ಗೌವರ್ನರ್ ಆದ ನಂತರ ಉದ್ಯಮಿಗಳಿಂದ ಸಾಲ ವಸೂಲಿ ಮಾಡುವ ಬದಲಾಗಿ ವಸೂಲಾಗದ ಸಾಲದ ಲೆಕ್ಕ ಪುಸ್ತಕದಿಂದ ಲಕ್ಷಾಂತರ ಕೋಟಿ ಸಾಲದ ಲೆಕ್ಕವನ್ನು 'ರೈಟ್ ಆಫ್' ಮಾಡುವ ಅಥವಾ 'ಮನ್ನಾ' ಮಾಡುವ ಕೆಲಸ ಮುಂದುವರಿಯುತ್ತದೆ. ಬ್ಯಾಂಕುಗಳು ದಿವಾಳಿಯತ್ತ ಸಾಗುತ್ತಿದ್ದಂತೆ ಅದನ್ನು ತಪ್ಪಿಸಲು, ನೋಟು ರದ್ದತಿ ಮೂಲಕ ಜನಸಾಮಾನ್ಯರ ಬಳಿ ಇದ್ದ ಹಣ ಬ್ಯಾಂಕುಗಳಿಗೆ ಬಂದು ಬೀಳುವಂತೆ ಮಾಡುತ್ತಾರೆ. ಆಳುವ ಬಂಡವಾಳಶಾಹಿ ವರ್ಗ ಮತ್ತು ಆರೆಸ್ಸೆಸ್, 2016ರ ನವೆಂಬರ್ 8ರಂದು ರಾತ್ರಿ 8 ಗಂಟೆಗೆ ಪ್ರಧಾನಿ ಮೋದಿ ಅವರ ಮೂಲಕ, ಐನೂರು ಮತ್ತು ಸಾವಿರ ಮುಖಬೆಲೆಯ ನೋಟುಗಳ ಅಮಾನ್ಯ ಮಾಡಿ ಘೋಷಣೆ ಮಾಡಿಸುತ್ತಾರೆ. ಹಣ ಬದಲಾವಣೆಗೂ ಅವಕಾಶ ಕೊಡದೆ, ಮಧ್ಯರಾತ್ರಿಯಿಂದಲೇ ಈ ನೋಟುಗಳು ಮಾನ್ಯ ಕಳೆದುಕೊಳ್ಳುತ್ತವೆ. ಈ ವಿಷಯದಲ್ಲಿ ಅಂದು ರಿಸರ್ವ್ ಬ್ಯಾಂಕ್ ಗೌವರ್ನರ್ ಅವರನ್ನು ಪಕ್ಕಕ್ಕೆ ಸರಿಸಿ ತಾವೇ ರಿಸರ್ವ್ ಬ್ಯಾಂಕಿನ ನೀತಿ ನಿಲುವುಗಳನ್ನು ರೂಪಿಸತೊಡಗುತ್ತಾರೆ. ನೋಟು ರದ್ದತಿ ವಿಷಯದಲ್ಲಿ ಬಹಿರಂಗವಾಗಿ ಏನನ್ನೂ ಮಾತನಾಡದಂತೆ ತಿಂಗಳು ಕಾಲ ಗೌವರ್ನರ್ ಉರ್ಜಿತ್ ಪಟೇಲ್ ಅವರ ಬಾಯಿ ಮುಚ್ಚಿಸಲಾಗುತ್ತದೆ. ಉರ್ಜಿತ್ ಪಟೇಲ್ ಕೆಲ ಕಾಲ ಎಲ್ಲವನ್ನೂ ಸಹಿಸಿಕೊಂಡು ತಮ್ಮ ಹುದ್ದೆಯಲ್ಲಿ ಮುಂದುವರಿಯುತ್ತಾರೆ.

ಮೀಸಲು ಹಣದ ಮೇಲೆ ಕಣ್ಣು

ನೋಟು ರದ್ದತಿಯ ಕಾರ್ಯ ಮುಗಿದು, ಜನಸಾಮಾನ್ಯರ ಬಳಿ ಇದ್ದ ಹಣ ಬ್ಯಾಂಕುಗಳಿಗೆ ಹರಿದು ಬರುತ್ತದೆ. ಆ ನಂತರ ಮೋದಿ ಸರ್ಕಾರದ ದೃಷ್ಟಿ ರಿಸರ್ವ್ ಬ್ಯಾಂಕಿನಲ್ಲಿ ಇದ್ದ ರೂ. 9.59 ಲಕ್ಷ ಕೋಟಿ (ಜೂನ್ 2018ರಲ್ಲಿ ಇದ್ದಂತೆ) ಮೀಸಲು ಹಣ(CF)ದ ಮೇಲೆ ಬೀಳುತ್ತದೆ.

ಮೀಸಲು ಹಣದಲ್ಲಿ ಮೂರನೇ ಒಂದು ಭಾಗದಷ್ಟು ಹಣವನ್ನು (3 ಲಕ್ಷ ಕೋಟಿಗೂ ಹೆಚ್ಚು) ಕೇಂದ್ರ ಸರ್ಕಾರದ ಖಜಾನೆಗೆ ವರ್ಗಾವಣೆ ಮಾಡುವಂತೆ ರಿಸರ್ವ್ ಬ್ಯಾಂಕಿನ ಮೇಲೆ ಕೇಂದ್ರ ಸರ್ಕಾರ ಒತ್ತಡ ತರುತ್ತದೆ. ಇಂತಹ ಕ್ರಮ ರಿಸರ್ವ್ ಬ್ಯಾಂಕಿನ ಸ್ವಾಯತ್ತತೆಗೆ ದಕ್ಕೆ ತರುತ್ತದೆ ಎಂದು ಉರ್ಜಿತ್ ಪಟೇಲ್ ಹೇಳುವ ಮೂಲಕ, ಮೀಸಲು ಹಣದಲ್ಲಿನ ಒಂದು ಭಾಗವನ್ನು ಕೇಂದ್ರದ ಖಜಾನೆಗೆ ವರ್ಗಾವಣೆ ಮಾಡಲು ನಿರಾಕರಿಸುತ್ತಾರೆ. ಈ ಮೀಸಲು ನಿಧಿ ಆರ್ಥಿಕ ಬಿಕ್ಕಟ್ಟಿನ ಸಮಯದಲ್ಲಿ ನೆರವಿಗೆ ಬರುತ್ತದೆ, ಇದನ್ನು ಸರ್ಕಾರಕ್ಕೆ ವರ್ಗಾವಣೆ ಮಾಡುವುದು ಬೇಡ ಎಂದು ಕೆಲವು ವಿರೋಧ ಪಕ್ಷಗಳ ನಾಯಕರು ಮತ್ತು ಆರ್ಥಿಕ ತಜ್ಞರು ಸರ್ಕಾರಕ್ಕೆ



ಎಚ್ಚರಿಕೆ ನೀಡುತ್ತಾರೆ. ಭಾರತದ ಮಾಜಿ ಮುಖ್ಯ ಆರ್ಥಿಕ ತಜ್ಞ ಪ್ರಣಬ್ ಸೇನ್ ಅವರು 'ಆರ್‌ಬಿಐ ಅನ್ನು "ರಾಕ್-ಬಾಟಮ್" ಮಟ್ಟದಲ್ಲಿ ಇಡುವುದು ಒಳ್ಳೆಯದಲ್ಲ' ಎನ್ನುತ್ತಾರೆ.

ಸರ್ಕಾರದ ಈ ಕ್ರಮಕ್ಕೆ ಸಮರ್ಥನೆ ಏನು?

ಇವರ ಎಚ್ಚರಿಕೆಗಳನ್ನು ಪರಿಗಣಿಸದ ಸರ್ಕಾರ, 'ಹೆಚ್ಚುವರಿ ಮೀಸಲು ವರ್ಗಾವಣೆಯು ಕ್ಷೀಣಿಸುತ್ತಿರುವ ಆರ್ಥಿಕ ಬೆಳವಣಿಗೆಯನ್ನು ಸ್ಥಿರಗೊಳಿಸಲು ಸರ್ಕಾರಕ್ಕೆ ಒಂದಷ್ಟು ಆಯ್ಕೆಗಳನ್ನು ನೀಡುತ್ತದೆ' ಎಂದು ಸಮರ್ಥಿಸಿಕೊಳ್ಳುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ ಮೀಸಲು ತುಂಬಾ ದೊಡ್ಡದಾಗಿದೆ, ಅಷ್ಟೊಂದು ಮೀಸಲು ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ವಾದಿಸುತ್ತದೆ. ಟೆಲಿಗ್ರಾಫ್‌ನಲ್ಲಿನ ವರದಿಯಂತೆ, ಭಾರತೀಯ ರಿಸರ್ವ್ ಬ್ಯಾಂಕ್ ನಿರ್ವಹಿಸುವ ಒಟ್ಟು ಆಸ್ತಿಯ ಶೇ. 28 ರ ಬಫರ್ ಸುಮಾರು ಶೇ. 14 ರ ಜಾಗತಿಕ ಮಾನದಂಡಕ್ಕಿಂತ ಹೆಚ್ಚಿದೆ ಎಂಬುದು ಸರ್ಕಾರದ ವಾದ.

2018 ರಲ್ಲಿ, ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯಂ ಅವರು ಭಾರತೀಯ ರಿಸರ್ವ್ ಬ್ಯಾಂಕ್ ವಿಶ್ವದ ಕೆಲವು ಅತಿ ಹೆಚ್ಚು ಮೀಸಲುಗಳನ್ನು ಹೊಂದಿದೆ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಕೇಂದ್ರ ಸರ್ಕಾರಕ್ಕೆ ವರ್ಗಾಯಿಸಬಹುದಾದ ಹೆಚ್ಚುವರಿ ಬಂಡವಾಳವು ರೂ.4.5 ಲಕ್ಷ ಕೋಟಿ ಮತ್ತು ರೂ.7 ಲಕ್ಷ ಕೋಟಿ ನಡುವೆ ಇದೆ ಎಂದು ವಾದಿಸಿದ್ದರು.

ಇನ್ನೊಂದು ಅಭಿಪ್ರಾಯದ ಪ್ರಕಾರ, ರಿಸರ್ವ್ ಬ್ಯಾಂಕ್ ಹೆಚ್ಚಿನ ಬಂಡವಾಳ ಮೀಸಲುಗಳನ್ನು ಹೊಂದಿದ್ದರೂ, ಇದರಲ್ಲಿ ಹೆಚ್ಚಿನವು ರೂಪಾಯಿ ಮೌಲ್ಯದ ಕುಸಿತದಿಂದ ಉದ್ಭವಿಸುವ ಕಾಲ್ಪನಿಕವಾಗಿದೆ. ಇದರ ನಿಜವಾದ ನಗದು ಮೀಸಲು ತುಂಬಾ ಹೆಚ್ಚಿಲ್ಲ. ಅಮರ್ತ್ಯ ಲಾಹಿರಿ, ಆರ್‌ಬಿಐ ಅನುದಾನಿತ ಸೆಂಟರ್ ಫಾರ್ ಅಡ್ವಾನ್ಸ್‌ಡ್ ಫೈನಾನ್ಶಿಯಲ್ ರಿಸರ್ಚ್ ಅಂಡ್ ಲರ್ನಿಂಗ್‌ನ ನಿರ್ದೇಶಕ ಮತ್ತು ಬ್ರಿಟಿಷ್ ಕೊಲಂಬಿಯಾ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು 2018 ರಲ್ಲಿ ಆರ್‌ಬಿಐ ವಾಸ್ತವವಾಗಿ "ವಿಶ್ವದ ಅತ್ಯಂತ ಕಡಿಮೆ ಬಂಡವಾಳದ ಕೇಂದ್ರ ಬ್ಯಾಂಕ್‌ಗಳಲ್ಲಿ ಒಂದಾಗಿದೆ" ಎಂದು ಬರೆದಿದ್ದಾರೆ.

ಉರ್ಜಿತ್ ಪಟೇಲ್ ರಾಜೀನಾಮೆ

ಮೀಸಲು ವರ್ಗಾವಣೆ ಮತ್ತು ಆರ್‌ಬಿಐನ ಆರ್ಥಿಕ ಬಂಡವಾಳದ ಚೌಕಟ್ಟಿನ ಕುರಿತು ಸಮಾಲೋಚನೆಗಳನ್ನು ಪ್ರಾರಂಭಿಸಲು ಸರ್ಕಾರದ ಒತ್ತಡ ಮತ್ತು ಸರ್ಕಾರದ ನಿಯಂತ್ರಣವು ಸಂಘರ್ಷಕ್ಕೆ ಕಾರಣವಾಗುತ್ತದೆ. ಸರ್ಕಾರದ ಈ ನಡೆ ಭಾರೀ ಆಕ್ರೋಶವನ್ನು ಸೃಷ್ಟಿಸಿತು. ಈ ಪರಿಸ್ಥಿತಿಯಲ್ಲಿ ಆರ್‌ಬಿಐ ತನ್ನ 2018ರ ನವೆಂಬರ್ 19 ರ ಸಭೆಯಲ್ಲಿ ಸರ್ಕಾರದೊಂದಿಗೆ ಸಮಾಲೋಚನೆಗಾಗಿ ತಜ್ಞರ ಸಮಿತಿಯನ್ನು ಸ್ಥಾಪಿಸಲು ಒಪ್ಪಿಕೊಂಡಿತು. ಆದರೆ, ಆರ್‌ಬಿಐನ ಮೀಸಲು ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಸಮರ್ಥನೆಯನ್ನು ಪಟೇಲ್ ಒಪ್ಪಲಿಲ್ಲ. ಸರ್ಕಾರದ ಕ್ರಮವು ಕೇಂದ್ರ ಬ್ಯಾಂಕ್‌ನ ರೇಟಿಂಗ್‌ಗಳನ್ನು ಕಡಿಮೆ ಮಾಡಲು ಕಾರಣವಾಗಬಹುದು ಎಂದು ಪಟೇಲ್ ಆತಂಕ ವ್ಯಕ್ತಪಡಿಸುತ್ತಾರೆ.

ರಿಸರ್ವ್ ಬ್ಯಾಂಕಿನ ನೀತಿ ನಿರ್ಧಾರ ಕೈಗೊಳ್ಳುವ ಸಮಿತಿಯಲ್ಲಿ ಮೋದಿ ಸರ್ಕಾರದ ಪರ ಇರುವ ಅಧಿಕಾರಿಗಳು ಬಹುಸಂಖ್ಯೆಯಲ್ಲಿ ಇರುವಂತೆ ನೋಡಿಕೊಳ್ಳುವ ಮೂಲಕ, ಸಭೆಯ ಬಹುಮತದ ತೀರ್ಮಾನದ ಜಾರಿಯ ಹೆಸರಿನಲ್ಲಿ ಮೀಸಲು ಹಣದ ಒಂದಷ್ಟು ಅಂಶವನ್ನು ಕೇಂದ್ರ ಸರ್ಕಾರದ ಖಜಾನೆಗೆ ವರ್ಗಾವಣೆ ಮಾಡುವ ಒತ್ತಡ ಹೆಚ್ಚಾಯಿತು. ಇದರಿಂದ ಬೇಸತ್ತ ಉರ್ಜಿತ್ ಪಟೇಲ್ 2018ರ ಡಿಸೆಂಬರ್ 10 ರಂದು ಗವರ್ನರ್ ಹುದ್ದೆಗೆ ರಾಜೀನಾಮೆ ನೀಡುತ್ತಾರೆ. ನಂತರ, 15ನೇ ಹಣಕಾಸು ಆಯೋಗದ ಸದಸ್ಯರಾಗಿದ್ದ ಶಕ್ತಿಕಾಂತ ದಾಸ್ ಅವರನ್ನು ಆರ್‌ಬಿಐ ಗವರ್ನರ್ ಆಗಿ ಸರ್ಕಾರ ನೇಮಿಸುತ್ತದೆ.

ಬಿಮಲ್ ಜಲನ್ ನೇತೃತ್ವದ ತಜ್ಞರ ಸಮಿತಿ ರಚನೆ

ಇದಾದ ಎರಡು ವಾರದ ನಂತರ, ಭಾರತೀಯ ರಿಸರ್ವ್ ಬ್ಯಾಂಕ್ 2018ರ ಡಿಸೆಂಬರ್ 27ರಂದು ಮಾಜಿ ಆರ್‌ಬಿಐ ಗವರ್ನರ್ ಬಿಮಲ್ ಜಲನ್ ನೇತೃತ್ವದ ತಜ್ಞರ ಸಮಿತಿಯನ್ನು ರಚಿಸಿ, ಭಾರತೀಯ ರಿಸರ್ವ್ ಬ್ಯಾಂಕ್ ಹೊಂದಿರಬೇಕಾದ ಮೀಸಲು ಮೊತ್ತವನ್ನು ನಿರ್ಣಯಿಸಲು ಸೂಚಿಸುತ್ತದೆ. ಮೂರು ತಿಂಗಳೊಳಗೆ ವರದಿ ಸಲ್ಲಿಸುವಂತೆ ಸೂಚಿಸುತ್ತದೆ.

ಜಲನ್ ಅಡಿಯಲ್ಲಿನ ತಜ್ಞರ ಸಮಿತಿಯಲ್ಲಿ ಮಾಜಿ ಆರ್‌ಬಿಐ ಡೆಪ್ಯುಟಿ ಗವರ್ನರ್ ರಾಕೇಶ್ ಮೋಹನ್ (ಉಪಾಧ್ಯಕ್ಷರು), ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಸುಭಾಷ್ ಚಂದ್ರ ಗಾರ್ಗ್, ಆರ್‌ಬಿಐ ಕೇಂದ್ರ ಮಂಡಳಿಯ ಸದಸ್ಯರಾದ ಭರತ್ ದೋಷಿ ಮತ್ತು ಸುಧೀರ್ ಮಂಕಡ್ ಮತ್ತು ಆರ್‌ಬಿಐ ಡೆಪ್ಯುಟಿ ಗವರ್ನರ್ ಎನ್‌ಎಸ್ ವಿಶ್ವನಾಥನ್ ಅವರು ಸದಸ್ಯರಾಗಿರುತ್ತಾರೆ.

ಡೆಪ್ಯೂಟಿ ಗೌರ್ನರ್ ವಿರಲ್ ಆಚಾರ್ಯ ರಾಜೀನಾಮೆ

"RBI ನ ಸ್ವಾತಂತ್ರ್ಯವನ್ನು ಕೇಂದ್ರ ಸರ್ಕಾರ ಗೌರವಿಸದೇ ಇದ್ದರೆ, ಇಂದಲ್ಲ ನಾಳೆ ಹಣಕಾಸು ಮಾರುಕಟ್ಟೆಯ ಆಕ್ರೋಶಕ್ಕೆ ಗುರಿಯಾಗಬೇಕಾದೀತು" ಎಂದು ರಿಸರ್ವ್ ಬ್ಯಾಂಕಿನ ಡೆಪ್ಯೂಟಿ ಗೌರ್ನರ್ ವಿರಲ್ ಆಚಾರ್ಯ ಎಚ್ಚರಿಸುತ್ತಾರೆ. ಇಷ್ಟಾದರೂ ಕೇಂದ್ರ ಸರ್ಕಾರ ತನ್ನ ನಿಲುವು ಬದಲಾಯಿಸುವುದಿಲ್ಲ. ಇದೆಲ್ಲವನ್ನೂ ನೋಡಿ ಸಹಿಸಿಕೊಳ್ಳಲು ಆಗದೆ, ಸರ್ಕಾರದ ಒತ್ತಡ ಸಹಿಸಿಕೊಳ್ಳಲಾಗದೇ, ವಿರಲ್ ಆಚಾರ್ಯ ಅವರು ತಮ್ಮಅಧಿಕಾರದಿಯ 6 ತಿಂಗಳ ಮೊದಲೇ, ವೈಯಕ್ತಿಕ ಕಾರಣ ನೀಡಿ 2019 ರ ಜುಲೈ 23ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡುತ್ತಾರೆ.

ರಿಸರ್ವ್ ಬ್ಯಾಂಕಿನ ಸ್ವಾಯತ್ತತೆಯ ಪರ ಧ್ವನಿ ಎತ್ತಿದ ಅಧಿಕಾರಿಗಳು ಒಬ್ಬೊಬ್ಬರೇ ನಿರ್ಗಮಿಸುತ್ತಾರೆ. ಮೀಸಲು ಹಣ ದೋಚಲು ಮೋದಿ ಸರ್ಕಾರಕ್ಕೆ ಇದ್ದ ಅಡೆತಡೆಗಳು ಕಡಿಮೆಯಾಗುತ್ತವೆ. ರಿಸರ್ವ್ ಬ್ಯಾಂಕಿನ ಮೀಸಲು ಹಣದಲ್ಲಿ 1.76 ಲಕ್ಷ ಕೋಟಿಯನ್ನು ಕಸಿದು ಕೇಂದ್ರದ ಬಜೆಟ್ ಖಾತೆಗೆ ಸೇರಿಸುತ್ತಾರೆ.

ಏನಿದು ರಿಸರ್ವ್ ಬ್ಯಾಂಕ್ ಮೀಸಲು ನಿಧಿ?

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಮೀಸಲು ಮುಖ್ಯವಾಗಿ ಎರಡು ಭಾಗಗಳಿಂದ ಮಾಡಲ್ಪಟ್ಟಿದೆ. ಒಂದು ಮರುಮೌಲ್ಯಮಾಪನ ಖಾತೆ (ಬುಲಿಯನ್ ಮೀಸಲು ಮತ್ತು ಕರೆನ್ಸಿ ವಿನಿಮಯ ದರಗಳಲ್ಲಿನ ಲಾಭಗಳಿಂದ ಬರುತ್ತದೆ). ಇನ್ನೊಂದು, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತುರ್ತು ಹೊಂದಾಣಿಕೆಗಳನ್ನು ಮಾಡಲು, ಸಂಸ್ಥೆಯ ಹೂಡಿಕೆಗಳಲ್ಲಿನ ನಷ್ಟವನ್ನು ತಡೆಗಟ್ಟಲು ಅಥವಾ ಭಾರತೀಯ ಕರೆನ್ಸಿ ಮೌಲ್ಯವನ್ನು ಹೆಚ್ಚಿಸಲು ಬಳಸುವ ಆಕಸ್ಮಿಕ ನಿಧಿಯಾಗಿದೆ.

ರಿಸರ್ವ್ ಬ್ಯಾಂಕ್ ಮೀಸಲುಗಳಲ್ಲಿ ಹೆಚ್ಚಿನವು ಚಿನ್ನದ ನಿಕ್ಷೇಪಗಳು ಮತ್ತು ವಿದೇಶಿ ವಿನಿಮಯ ಸ್ವತ್ತುಗಳ ಮೂಲಕ ನಿರ್ವಹಿಸಲ್ಪಡುತ್ತವೆ, ಇದು ಒಟ್ಟಾಗಿ ಕರೆನ್ಸಿ ಮತ್ತು ಚಿನ್ನದ ಮರುಮೌಲ್ಯಮಾಪನ ಮೀಸಲು ಖಾತೆಯನ್ನು ರೂಪಿಸುತ್ತದೆ. ಆರ್‌ಬಿಐ ಆಕಸ್ಮಿಕ ನಿಧಿ (ಸಿಎಫ್) ಅನ್ನು ಸಹ ಸಂಗ್ರಹಿಸುತ್ತದೆ, ಇದು ಅನಿರೀಕ್ಷಿತ ತುರ್ತು ಪರಿಸ್ಥಿತಿಗಳನ್ನು ನಿಭಾಯಿಸಲು ಮತ್ತೊಂದು ನಿಬಂಧನೆಯಾಗಿದೆ.

RBI ಹೊಂದಿರುವ ಸೆಕ್ಯುರಿಟಿಗಳ ಮೇಲಿನ ಬಡ್ಡಿಯ ಮೂಲಕ ಹೆಚ್ಚುವರಿ ಆದಾಯ ಬರುತ್ತದೆ. ಇದರಿಂದ ಬಂದ ಆದಾಯವನ್ನು ತನ್ನ ಸ್ವಂತ ವೆಚ್ಚಗಳನ್ನು ಪೂರೈಸಿದ ನಂತರ ಸರ್ಕಾರಕ್ಕೆ ವರ್ಗಾಯಿಸಲಾಗುತ್ತದೆ. ರಿಸರ್ವ್ ಬ್ಯಾಂಕ್ ತನ್ನ ಗಳಿಕೆಯ ಒಂದು ಭಾಗವನ್ನು ಆಕಸ್ಮಿಕ ನಿಧಿ (CF) ಗೆ ವರ್ಗಾಯಿಸುತ್ತದೆ.

ಇನ್ನಾದರೂ ತಮ್ಮ ಸಂಪತ್ತನ್ನು ಉಳಿಸಿಕೊಳ್ಳಲು ದೇಶದ ಜನತೆ ಬೀದಿಗಿಳಿದು ಹೋರಾಟ ನಡೆಸಲು ಮುಂದಾಗದೇ ಇದ್ದಲ್ಲಿ, ಕೆಲವೇ ವರ್ಷಗಳಲ್ಲಿ ಸಾರ್ವಜನಿಕರ ಸಂಪತ್ತು ಸಂಪೂರ್ಣವಾಗಿ ದೊಡ್ಡ ಬಂಡವಾಳಗಾರರ ಪಾಲಾಗುವುದಂತೂ ಖಂಡಿತಾ.

ವಾಸ್ತವವನ್ನು ಬಿಂಬಿಸುವ ಅಂಕಿ-ಅಂಶಗಳೊಂದಿಗೆ ಮೋದಿ ಸರಕಾರದ ಗುದ್ದಾಟ ಮುಂದುವರಿದಿದೆ

ಐಐಪಿಎಸ್ ನಿರ್ದೇಶಕರ ಅಮಾನತು ರದ್ದು, ಆದರೆ ರಾಜೀನಾಮೆ ಮಂಜೂರು!

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಗಳನ್ನು ನಡೆಸುವ (ಎನ್ಎಫ್ಎಚ್ಎಸ್) ದೇಶದ ಒಂದು ಪ್ರತಿಷ್ಠಿತ ಅಧ್ಯಯನ ಸಂಸ್ಥೆಯಾದ ಐಐಪಿಎಸ್(ಅಂತರ್ರಾಷ್ಟ್ರೀಯ ಜನಸಂಖ್ಯಾಶಾಸ್ತ್ರಗಳ ಸಂಸ್ಥೆ)ನ ನಿರ್ದೇಶಕ ಪ್ರೊ.ಕೆ.ಎಸ್.ಜೇಮ್ಸ್ ರವರ ಅಮಾನತನ್ನು ವಿಸ್ತರಿಸುವುದಿಲ್ಲ ಎಂದು ಕೇಂದ್ರ ಆರೋಗ್ಯ ಮಂತ್ರಾಲಯ ಪ್ರಕಟಿಸಿದೆ. ಅದರ ಬೆನಲ್ಲೇ ಅವರ ರಾಜೀನಾಮೆಯನ್ನು ಮಂಜೂರು ಮಾಡಲಾಗಿದೆ ಎಂದೂ ವರದಿಯಾಗಿದೆ.

ಈ ಹಿಂದೆ ವರದಿಯಾದಂತೆ, ಪ್ರೊ. ಜೇಮ್ಸ್ ರವರಿಗೆ ಕಳುಹಿಸಿದ ಅಮಾನತು ಪತ್ರದಲ್ಲಿ ಅವರ ವಿರುದ್ಧ ವಿಚಾರಣೆ ನಡೆಯುತ್ತಿದ್ದು, ಅದರ ಆಧಾರದ ಮೇಲೆ ಅಮಾನತುಗೊಳಿಸಲಾಗಿದೆ ಎಂದು ತಿಳಿಸಲಾಗಿತ್ತು. ಈ ಬಗ್ಗೆ ಅಕೆಡೆಮಿಕ್ ವಲಯಗಳಲ್ಲಿ ಆಕ್ರೋಶ ವ್ಯಕ್ತವಾಗುವ ಲಕ್ಷಣಗಳು ಕಂಡಾಗ ಬೋಧಕ ವರ್ಗದ ನೇಮಕಾತಿಗಳಲ್ಲಿ ಅಕ್ರಮ ನಡೆದಿರುವುದರ ಬಗ್ಗೆ ವಿಚಾರಣೆ ನಡೆಸುತ್ತಿರುವುದರಿಂದ ವಿಚಾರಣೆಯ ಅವಧಿಗೆ ಮಾತ್ರ ಈ ಕ್ರಮ ಕೈಗೊಳ್ಳಲಾಗಿದೆ, ಇದು ಶಿಕ್ಷಾಕ್ರಮವಲ್ಲ ಎಂದು 'ಸ್ಪಷ್ಟೀಕರಣ' ನೀಡಲಾಯಿತು.

ಈಗ ಅಕ್ಟೋಬರ್ 11 ರ ಪ್ರಕಟಣೆಯಲ್ಲಿ ಅದೇ ಮಂತ್ರಾಲಯ, ತದನಂತರದ ಪರಾಮರ್ಶೆಯಲ್ಲಿ "ಸನ್ನಿವೇಶದಲ್ಲಿ ಆಗಿರುವ ಬದಲಾವಣೆಗಳಿಂದಾಗಿ ಅಮಾನತನ್ನು ವಿಸ್ತರಿಸುತ್ತಿಲ್ಲ" ಎಂದಿದೆ. ಅಮಾನತನ್ನು ರದ್ದುಮಾಡಿ ಅವರನ್ನು ಅಧಿಕೃತವಾಗಿ ಅವರ ಹುದ್ದೆಯಲ್ಲಿ ಮುಂದುವರೆಸಿದೆ. ಆದರೆ ಹಾಗೆಂದು ಪ್ರಕಟಿಸಿದ ಒಂದು ಗಂಟೆಯ ಒಳಗೆ, ಅವರು ಈ ನಡುವೆ (ಆಗಸ್ಟ್‌ನಲ್ಲಿ) "ವೈಯಕ್ತಿಕ ಕಾರಣ"ಗಳಿಗಾಗಿ ಸಲ್ಲಿಸಿದರು ಎನ್ನಲಾದ ರಾಜೀನಾಮೆಯನ್ನು ಸ್ವೀಕರಿಸಲಾಯಿತು ಎಂದು ತಿಳಿದು ಬಂದಿದೆ(ದಿ ವೈರ್, ಅಕ್ಟೋಬರ್ 16). ಪ್ರೊ. ಜೇಮ್ಸ್ ಅಮಾನತಿನ ಬಗ್ಗೆ ಏನೂ ಹೇಳಲು ನಿರಾಕರಿಸಿದ್ದಾರೆ, ಆದರೆ ತಾನು ರಾಜೀನಾಮೆ ಸಲ್ಲಿಸಿರುವುದನ್ನು ಪುಷ್ಟೀಕರಿಸಿದ್ದಾರೆ. ಸದ್ಯಕ್ಕೆ ವಿಯನ್ನಾದಲ್ಲಿರುವ ಇಂಟರ್ ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಅಪ್ಲೈಡ್ ಸಿಸ್ಟಮ್ಸ್ ಅನಾಲಿಸಿಸ್ ನಲ್ಲಿ ಅಲ್ಪಾವಧಿಯ ಸಂದರ್ಶಕ ವಿದ್ವಾಂಸರ ಹುದ್ದೆಯನ್ನು ಸ್ವೀಕರಿಸಿರುವುದಾಗಿ ಅವರು ಹೇಳಿದ್ದಾರೆ.

ಜುಲೈ 2023ರಲ್ಲಿ ಜೇಮ್ಸ್ ಅವರನ್ನು ಅಮಾನತು ಮಾಡಿದಾಗ ಅವರ ವಿರುದ್ಧ 35 ದೂರುಗಳು ಬಂದಿದ್ದು, ಅವುಗಳಲ್ಲಿ 11ರಲ್ಲಿ ಮೇಲ್ನೋಟಕ್ಕೇ ತಥ್ಯ ಇದೆಯೆಂಬುದನ್ನು ಗಮನಿಸಲಾಗಿತ್ತು ಎಂದು ಮಂತ್ರಾಲಯ ಹೇಳಿತ್ತು. ಅಲ್ಲದೆ ಅವರು 'ಚೀನಾ ನೆಲೆಯ ವೆಬಿನಾರ್'ನಲ್ಲಿ ಭಾಗವಹಿಸಿದ್ದರು ಎಂದು ಮಂತ್ರಾಲಯದವರೊಬ್ಬರು 'ದಿ ಪ್ರಿಂಟ್' ಪತ್ರಿಕೆಗೆ ಹೇಳಿದುದಾಗಿಯೂ ವರದಿಯಾಗಿತ್ತು. ಕೇಂದ್ರ ಆರೋಗ್ಯಮಂತ್ರಿಗಳು ಐಐಪಿಎಸ್‌ನ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದು, ಆಡಳಿತ ಮಂಡಳಿಯ ಒಂದು ಸಭೆಯಲ್ಲಿ ಪ್ರೊ.ಜೇಮ್ಸ್ ರೊಂದಿಗೆ ಕಟುವಾಗಿ ಮಾತಾಡಿದರು, ಎನ್ಎಫ್ಎಚ್ಎಸ್–5 ರ ವರದಿ ಯಾವುದಾದರೂ ಪಾಶ್ಚಿಮಾತ್ಯ ಪಿತೂರಿಯ ಭಾಗವೇ ಎಂದು ಕೇಳಿದರು ಎಂದು ವರದಿಯಾಗಿತ್ತು(ದಿ ವೈರ್, ಜುಲೈ30).

ಆದರೆ ಈಗ ಜುಲೈನಲ್ಲಿ ನಡೆಸಲಾಗಿದೆ ಎನ್ನಲಾದ ವಿಚಾರಣೆಯ ಫಲಿತಾಂಶ ಏನು ಎಂಬುದನ್ನು ಕೂಡ ಸ್ಪಷ್ಟೀಕರಿಸದೆಯೇ ಅವರ ಅಮಾನತನ್ನು ರದ್ದುಮಾಡಲಾಗಿದೆ!

ನಿಜವಾದ ಕಾರಣ ಸಾಬೀತು?

ಜುಲೈ ತಿಂಗಳಲ್ಲಿಯೇ, ಪ್ರೊ.ಜೇಮ್ಸ್ ರವರ ಅಮಾನತಿಗೆ ನಿಜವಾದ ಕಾರಣ ಬೇರೆಯೇ ಇದೆ ಎಂಬ ಸಂದೇಹ ಬಲವಾಗಿತ್ತು. ಏಕೆಂದರೆ ಬೋಧಕ ವರ್ಗದ ನೇಮಕಾತಿಗಳಲ್ಲಿ ನಿರ್ದೇಶಕರ ಪಾತ್ರ ಅತ್ಯಂತ ಗೌಣ ಎಂದು ಹೇಳಲಾಗಿತ್ತು. ಎನ್ಎಫ್ಎಚ್ಎಸ್ ಸಮೀಕ್ಷೆಗಳು ಸಾರ್ವಜನಿಕಗೊಳಿಸಿರುವ ಫಲಿತಾಂಶಗಳು ಕೇಂದ್ರ ಸರಕಾರಕ್ಕೆ ರುಚಿಸದಿರುವುದೇ ವಾಸ್ತವ ಕಾರಣಗಳು ಎಂಬುದು ನಿಜವೆಂದು ಈಗ ಸಾಬೀತಾದಂತಾಗಿದೆ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಐಐಪಿಎಸ್ ನಡೆಸಿದ ಸಮೀಕ್ಷೆಯ ಪ್ರಕಾರ ಇಂದು ಭಾರತದಲ್ಲಿ ಶೇಕಡ 19ರಷ್ಟು ಮನೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲ. ಇದಕ್ಕೆ ಮೊದಲು ಇಡೀ ದೇಶವನ್ನು ಬಯಲು ಶೌಚಾಲಯಮುಕ್ತ ದೇಶ ಎಂದು ಘೋಷಿಸಿ ಭಾರತ ಸರ್ಕಾರ ಸಂಭ್ರಮಿಸುತ್ತಿತ್ತು.

ಇಷ್ಟೇ ಅಲ್ಲ, ಭಾರತ ಸರ್ಕಾರವು ಉಜ್ವಲ ಯೋಜನೆ ಮೂಲಕ ಪ್ರತಿ ಕುಟುಂಬಕ್ಕೂ ಅಡುಗೆ ಅನಿಲ ಸಿಲಿಂಡರ್‌ಗಳನ್ನು ತಲುಪಿಸಿದೆ ಎಂದು ಬೆನ್ನು ತಟ್ಟಿಕೊಳ್ಳುತ್ತಿದ್ದಾಗ, ಸಮೀಕ್ಷಾ ವರದಿ ಕೊಟ್ಟಿರುವ ಚಿತ್ರವೇ ಬೇರೆ. ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ ಶೇ 40ರಷ್ಟು ಕುಟುಂಬಗಳು ಇನ್ನೂ ಅಡುಗೆ ಅನಿಲ ಸಂಪರ್ಕ ಹೊಂದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಶೇ.57ರಷ್ಟು ಕುಟುಂಬಗಳಿಗೆ ಇನ್ನೂ ಅಡುಗೆ ಅನಿಲ ಲಭ್ಯವಿಲ್ಲ.

ಸರಕಾರಕ್ಕೆ ಮುಜುಗರ ಉಂಟು ಮಾಡಿರುವ ಮತ್ತೊಂದು ಅಂಶವೆಂದರೆ ಎನ್ಎಫ್ಹೆಚ್ಎಸ್–5 ರ ಪ್ರಕಾರ ಭಾರತದಲ್ಲಿ ರಕ್ತಹೀನತೆಯಿರುವ ಮಹಿಳೆಯರ ಸಂಖ್ಯೆ ಹೆಚ್ಚುತ್ತಿದೆ. ಅಂತರರಾಷ್ಟ್ರೀಯ ಆರೋಗ್ಯ/ಲಿಂಗ ಸೂಚ್ಯಂಕಗಳಲ್ಲಿ ಭಾರತವು ಹಿಂದುಳಿದಿರುವುದಕ್ಕೆ ಒಂದು ಕಾರಣವೆಂದರೆ ರಕ್ತಹೀನತೆಯ ಮಹಿಳೆಯರ ಸಂಖ್ಯೆ ಹೆಚ್ಚುತ್ತಿರುವುದು. ಈಗಾಗಲೇ ವರದಿಯಾಗಿರುವಂತೆ ಎನ್ಎಫ್ಹೆಚ್ಎಸ್–6 ಸಮೀಕ್ಷೆಯ ಪ್ರಶ್ನಾವಳಿಯಿಂದ ಮಹಿಳೆಯರಲ್ಲಿ ರಕ್ತಹೀನತೆಯ ಪ್ರಶ್ನೆಯನ್ನು ತೆಗೆದುಹಾಕಲು ಭಾರತ ಸರ್ಕಾರ ನಿರ್ಧರಿಸಿರುವುದು ಅದರ ಮುಜುಗರಕ್ಕೆ ಸಾಕ್ಷಿ. ಐಐಪಿಎಸ್ ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿತ್ತಂತೆ.

"ಭಾರತದ ನಷ್ಟ, ಐಐಪಿಎಸ್ ನಷ್ಟ"

ಕೇಂದ್ರ ಸರಕಾರದ ಪ್ರಸ್ತುತ ನಡೆ ಐಐಪಿಎಸ್ ಪ್ರಾಧ್ಯಾಪಕರನ್ನು ಕುಪಿತಗೊಳಿಸಿದೆ ಎಂದೂ 'ದಿ ವೈರ್' ಹೇಳಿದೆ. ಪ್ರೊ. ಜೇಮ್ಸ್ ರಾಜೀನಾಮೆ ದೇಶಕ್ಕೆ ಮತ್ತು ಐಐಪಿಎಸ್ ಗೆ ಆಗಿರುವ ನಷ್ಟ ಎಂದು ಅವರು ಖೇದ ವ್ಯಕ್ತಪಡಿಸಿದ್ದಾರೆ ಎನ್ಎಫ್ಎಚ್ಎಸ್ ಕೇಂದ್ರ ಆರೋಗ್ಯ ಮಂತ್ರಾಲಯಕ್ಕಾಗಿ ನಡೆಸಲಾಗುತ್ತಿರುವ ಎಲ್ಲ ರಾಜ್ಯಗಳನ್ನು, ಕೇಂದ್ರಾಡಳಿತ ಪ್ರದೇಶಗಳನ್ನು ವ್ಯಾಪಿಸಿರುವ ಸಮೀಕ್ಷೆ, ಆರೋಗ್ಯ ಮಾತ್ರವಲ್ಲ, ಮಾನವ ಅಭಿವೃದ್ಧಿಯ ಎಲ್ಲ ಅಂಶಗಳಿಗೆ ಸಂಬಂಧಪಡುವ ಸಮೀಕ್ಷೆಗಳಿವು. ಈ ದತ್ತಾಂಶಗಳು ಸರಕಾರದ ಯೋಜನೆಗಳನ್ನು ರೂಪಿಸಲು ನೆರವಾಗುವುದಲ್ಲದೆ, ಅಕೆಡೆಮಿಕ್ ಮತ್ತು ನೀತಿ ನಿರೂಪಣೆಯ ವಲಯಗಳಲ್ಲಿ ಬಹುವಾಗಿ ನೆಚ್ಚಿರುವಂಥವುಗಳೂ. ಇನ್ನು ಮುಂದೆ ಈ ಸಮೀಕ್ಷೆಗಳ ದತ್ತಾಂಶಗಳ ನೆಚ್ಚಿಕೆಯ ಬಗ್ಗೆ ಸಂದೇಹಗಳೂ ಏಳುತ್ತವೆ ಎಂಬ ಭೀತಿ ಈ ಪ್ರಾಧ್ಯಾಕರುಗಳದ್ದು.

ವಾಸ್ತವತೆಯೊಂದಿಗೆ ಮುಖಾಮುಖಿಯಾಗುವ ಬದಲು, ಅದನ್ನು ಬಿಂಬಿಸುವ ಅಂಕಿ–ಅಂಶಗಳೊಡನೆಯೇ ಗುದ್ದಾಟ ಈ ಸರಕಾರಕ್ಕೆ ಹೊಸದೇನಲ್ಲ ಎಂಬುದನ್ನು ಈಗಾಗಲೇ ವಿಶ್ಲೇಷಕರು ಗಮನಿಸಿದ್ದಾರೆ. ಈ ಹಿಂದೆ ಜನವರಿ 2019ರಲ್ಲಿ, ನಿರುದ್ಯೋಗದ ದತ್ತಾಂಶಗಳನ್ನು ತಡೆಹಿಡಿದುದರಿಂದಾಗಿ, ರಾಷ್ಟ್ರೀಯ ಅಂಕಿ–ಅಂಶಗಳ ಆಯೋಗದ ಹಂಗಾಮಿ ಅಧ್ಯಕ್ಷರು ಮತ್ತು ಹಲವು ಸದಸ್ಯರು ರಾಜೀನಾಮೆ ನೀಡಿದರು. ಈಗ ಪ್ರೊ. ಜೇಮ್ಸ್ ರಾಜೀನಾಮೆಯೊಂದಿಗೆ ಅದು ಇನ್ನೊಂದು ಹಂತ ತಲುಪಿರುವಂತೆ ಕಾಣುತ್ತದೆ.

2019ರ ಸಾರ್ವತ್ರಿಕ ಚುನಾವಣೆಗಳ ನಂತರ ನಿರುದ್ಯೋಗದ ತಡೆಹಿಡಿದ ದತ್ತಾಂಶಗಳನ್ನು ಪ್ರಕಟಿಸಲಾಯಿತು, ಆದರೆ ಅದರೊಂದಿಗೆ ನಿರುದ್ಯೋಗ ಸಮೀಕ್ಷೆಯ ಹಿಂದಿನ ವ್ಯವಸ್ಥೆ ಕೊನೆಗೊಂಡಿತು ಎಂಬುದು ಅಂಕಿ–ಅಂಶಗಳ ಬಗ್ಗೆ ಸರಕಾರದ ಭೀತಿಯನ್ನು ಪ್ರದರ್ಶಿಸಿತು. ನಂತರ ಆರಂಭಿಸಿದ ತ್ರೈಮಾಸಿಕ 'ಆವರ್ತಕ ಕಾರ್ಮಿಕ ಬಲ ಸಮೀಕ್ಷೆ' ಎಂಬುದು ಈಗ ತಡವಾಗಿಯಾದರೂ ಉದ್ಯೋಗ ಸಮೀಕ್ಷೆಯ ದತ್ತಾಂಶಗಳನ್ನು ಒದಗಿಸುತ್ತಿದೆ. ಆದರೆ ಮೋದಿ ಸರಕಾರ ಮೊದಲ ಅಧಿಕಾರಾಧಿಯಲ್ಲಿ ಕೈಬಿಟ್ಟ ಗ್ರಾಹಕ ಬಳಕೆ ವೆಚ್ಚ ಸಮೀಕ್ಷೆಯನ್ನು ಮತ್ತೆ ಆರಂಭಿಸಿಯೇ ಇಲ್ಲ. ಇನ್ನು ಕೊವಿಡ್ ಬಾಧೆಯ ಹೆಸರಿನಲ್ಲಿ 150ವರ್ಷಗಳಲ್ಲಿ ಮೊತ್ತಮೊದಲ ಬಾರಿಗೆ ಮುಂದೂಡಿರುವ 2021ರ ಜನಗಣತಿ ಪರಿಸ್ಥಿತಿ ಸಾಮಾನ್ಯವಾದ ಮೇಲೂ ನಡೆದಿಲ್ಲ, 2025ರ ಮೊದಲು ನಡೆಯುವಂತೆಯೂ ಕಾಣುತ್ತಿಲ್ಲ.

ಪ್ಯಾಲೇಸ್ಟಿನಿಯನ್ ಜನತೆಗೆ ಡಬ್ಲ್ಯುಎಫ್‌ಟಿಯು ಸಂಯೋಜಿತ ಕೇಂದ್ರೀಯ ಕಾರ್ಮಿಕ ಸಂಘಟನೆಗಳ ಬೆಂಬಲ

"ವಿಶ್ವಸಂಸ್ಥೆ ಎರಡು–ರಾಷ್ಟ್ರ ಪರಿಹಾರದ ನಿರ್ಣಯವನ್ನು ಜಾರಿಗೊಳಿಸಬೇಕು"


ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ (ಡಬ್ಲ್ಯುಎಫ್‌ಟಿಯು)ಕ್ಕೆ ಸಂಯೋಜಿತವಾಗಿರುವ ಭಾರತದ ಆರು ಕೇಂದ್ರೀಯ ಕಾರ್ಮಿಕ ಸಂಘಟನೆಗಳಾದ ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು, ಟಿಯುಸಿಸಿ ಮತ್ತು ಯುಟಿಯುಸಿ ಜಂಟಿಯಾಗಿ ದೇಶದ ರಾಜಧಾನಿ ದಿಲ್ಲಿಯ ಜಂತರ್–ಮಂತರ್‌ನಲ್ಲಿ ಅಕ್ಟೋಬರ್ 14 ರಂದು ಇಸ್ರೇಲ್ ಪ್ರಭುತ್ವದ ಅತ್ಯಂತ ಅಮಾನವೀಯ ಆಕ್ರಮಣವನ್ನು ಖಂಡಿಸಿ ಪ್ರತಿಭಟನೆ ನಡೆಸಿದವು ಮತ್ತು ಪ್ಯಾಲೆಸ್ಟೈನ್ ಜನರೊಂದಿಗೆ, ನಿರ್ದಿಷ್ಟವಾಗಿ ಗಾಜಾದ ಜನರೊಂದಿಗೆ ಅಚಲವಾದ ಸೌಹಾರ್ದವನ್ನು ವ್ಯಕ್ತಪಡಿಸಿದವು. ಜಂತರ್–ಮಂತರ್‌ನಲ್ಲಿ ನೆರೆದ ನೂರಾರು ಕಾರ್ಮಿಕ ಸಂಘಟನೆ ಕಾರ್ಯಕರ್ತರು ಸಂಘರ್ಷವನ್ನು ತಕ್ಷಣವೇ ನಿಲ್ಲಿಸುವಂತೆ ಆಗ್ರಹಿಸಿದರು.

ಕೊನೆಗಾಣದ ಆಕ್ರಮಣ ಮತ್ತು ಗಾಜಾ, ಪಶ್ಚಿಮ ತಟ ಮತ್ತು ಇತರ ಪ್ಯಾಲೇಸ್ಟಿನಿಯನ್ ಪ್ರದೇಶಗಳ ಪ್ಯಾಲೆಸ್ಟೀನಿಯನ್ ಜನರನ್ನು ನಿರ್ಮೂಲಗೊಳಿಸುವ ಹತ್ತಾರು ಪ್ರಯತ್ನಗಳು ಇಂದು ಪರಿಸ್ಥಿತಿ ಇಷ್ಟೊಂದು ಉಲ್ಬಣಗೊಳ್ಳಲು ಕಾರಣಗಳಾಗಿವೆ ಎಂದ ಈ ಕಾರ್ಮಿಕ ಸಂಘಟನೆಗಳ ಮುಖಂಡರು, ಇಂಧನ, ಆಹಾರ, ನೀರು ಮತ್ತು ಔಷಧವಿಲ್ಲದೆ ಗಾಜಾ ಸಂಪೂರ್ಣ ಮುತ್ತಿಗೆಗೆ ಒಳಗಾಗಿದೆ. ಈ ಕಷ್ಟದ ಸಮಯದಲ್ಲಿ, ಇಡೀ ಜಗತ್ತು ಇಸ್ರೇಲ್ ಮತ್ತು ಪಾಶ್ಚಿಮಾತ್ಯ ದೇಶಗಳ ನಗ್ನ ಬೂಟಾಟಿಕೆಗೆ ಸಾಕ್ಷಿಯಾಗಿದೆ ಎಂದರು. ಗಾಜಾದ ಪ್ಯಾಲೆಸ್ಟೀನಿಯನ್ನರು ಇಸ್ರೇಲ್ ವಿಧಿಸಿದ ದಿಗ್ಬಂಧನಕ್ಕೆ ಒಳಗಾದಾಗ ಯಾರೂ ನಿಜವಾಗಿಯೂ ಕಾಳಜಿ ವಹಿಸಲಿಲ್ಲ, ಇಸ್ರೇಲ್ ಅವರಿಗೆ ಜೀವನದ ಅಗತ್ಯಗಳನ್ನು ನಿರಾಕರಿಸಿತು, ಗಾಜಾದ ಪ್ಯಾಲೆಸ್ಟೀನಿಯನ್ನರನ್ನು "ಹಸಿವಿನ ಆಹಾರ ಕ್ರಮ" ಕ್ಕೆ ಒಳಪಡಿಸಿ ಜನಸಂಖ್ಯೆಗೆ ಕೇವಲ ಬದುಕುಳಿಯುವ ಮಟ್ಟದ ಆಹಾರ ಮಾತ್ರ ಲಭ್ಯವಾಗುವಂತೆ ಮಾಡಿದೆ ಎಂದು ತಿಳಿದು ಬಂದಾಗ ಯಾರೂ ನಿಜವಾಗಿಯೂ ಕಾಳಜಿ ವಹಿಸಲಿಲ್ಲ, ಇಸ್ರೇಲಿ ಸ್ನೈಪರುಗಳು ಬಂಧನವನ್ನು ಪ್ರತಿಭಟಿಸುತ್ತಿದ್ದ ದಾದಿಯರು, ಯುವಕರು ಮತ್ತು ಗಾಲಿಕುರ್ಚಿಯಲ್ಲಿದ್ದ ಜನರ ಮೇಲೆ ಎರಗಿದಾಗ ಯಾರೂ ನಿಜವಾಗಿಯೂ ಕಾಳಜಿ ವಹಿಸಲಿಲ್ಲ ಎಂದು ಭಾಷಣಕಾರರು ಸಾಮ್ರಾಜ್ಯಶಾಹಿ ಪಶ್ಚಿಮದ ದೇಶಗಳ ಬೂಟಾಟಿಕೆಯನ್ನು ಖಂಡಿಸಿದರು.

ಮೋದಿ ಸರಕಾರದ ಬೂಟಾಟಿಕೆ

ಈ ಕಾರ್ಮಿಕ ಸಂಘಟನೆಗಳು ಪ್ರಸ್ತುತ ಸಂಘರ್ಷದ ಬಗ್ಗೆ ಮೋದಿ ಸರ್ಕಾರ ಬೂಟಾಟಿಕೆ ಪ್ರದರ್ಶಿಸಿದೆ ಎಂದು ಖಂಡಿಸಿವೆ. ಈ ಪ್ರಸ್ತುತ ಸಂಘರ್ಷದ ಕುರಿತು ಭಾರತ ಸರ್ಕಾರದ ನಿಲುವು "ಆಯಕಟ್ಟಿನ ಪಾಲುದಾರಿಕೆ"ಯಿಂದ ಬಂದಿದೆ ಎಂದು ಕಾರ್ಮಿಕ ಮುಖಂಡರು ಹೇಳಿದರು; ವಸಾಹತುಶಾಹಿ ಆಕ್ರಮಣ ಮತ್ತು ಪ್ಯಾಲೇಸ್ಟಿನಿಯನ್ ಜನರ ದಬ್ಬಾಳಿಕೆಯನ್ನು ಬಲಪಡಿಸುವ ಇಸ್ರೇಲ್‌ನೊಂದಿಗೆ ಮಿಲಿಟರಿ ಮತ್ತು ಭದ್ರತಾ ಸಹಯೋಗವು ಈ 'ಪಾಲುದಾರಿಕೆ'ಯ ಮೂಲ ಅಂಶ. ಬಿಜೆಪಿಯ ಹಿಂದುತ್ವ ದೃಷ್ಟಿಕೋನವು ಜಿಯೋನಿಸಂನ ಜನಾಂಗವಾದಿ–ರಾಷ್ಟ್ರೀಯವಾದಿ ಧಾರೆಯೊಂದಿಗೆ ನಿಕಟ ಸಂಬಂಧವನ್ನು ಹೊಂದಿದೆ, ಬಲಪಂಥೀಯ ಆಡಳಿತಾರೂಢ ಲಿಕುಡ್ ಪಕ್ಷ ಮತ್ತು ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಬಿಜೆಪಿ ಮತ್ತು ನರೇಂದ್ರ ಮೋದಿಯವರ ಸೈದ್ಧಾಂತಿಕ ಆತ್ಮ ಸಂಗಾತಿಗಳು ಎಂದು ಎಭಾಷಣಕಾರರು ಮತಪ್ರದರ್ಶನದಲ್ಲಿ ಹೇಳಿದರು.

ಕ್ರೂರ ಝಿಯೋನಿಸ್ಟ್ ಇಸ್ರೇಲಿ ಆಕ್ರಮಣವನ್ನು ಕೊನೆಗೊಳಿಸಬೇಕು ಮತ್ತು ಪ್ಯಾಲೆಸ್ಟೈನ್ ವಿಮೋಚನೆಯಾಗಬೇಕು ಎಂಬ ತಮ್ಮ ಬೇಡಿಕೆಗಳನ್ನು ಈ ಕಾರ್ಮಿಕ ಸಂಘಟನೆಗಳು ಪುನರುಚ್ಚರಿಸಿದವು. ಪ್ಯಾಲೇಸ್ಟಿನಿಯನ್ ಕಾರ್ಮಿಕರು ಮತ್ತು ಅಲ್ಲಿಯ ಜನತೆ ಮತ್ತು ತಮ್ಮನ್ನು ರಕ್ಷಿಸಿಕೊಳ್ಳುವ ಅವರ ಹಕ್ಕಿನೊಂದಿಗೆ ತಮ್ಮ ಅಂತರರಾಷ್ಟ್ರೀಯ ಕಾರ್ಮಿಕ ವರ್ಗದ ಸೌಹಾರ್ದತೆಯನ್ನು ವ್ಯಕ್ತಪಡಿಸಿದ ಮತಪ್ರದರ್ಶನ ವಿಶ್ವಸಂಸ್ಥೆಯು ಸಂಘರ್ಷ ತಕ್ಷಣ ನಿಲ್ಲುವಂತೆ ಮಾಡಬೇಕು ಮತ್ತು ಎರಡು ರಾಷ್ಟ್ರ–ಪರಿಹಾರದ ಭದ್ರತಾಸಮಿತಿಯ ನಿರ್ಣಯವನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದೆ.



ಗಾಝಾದಲ್ಲಿ ನೀರು, ಆಹಾರ, ವಿದ್ಯುತ್, ಔಷಧಿಗಳು ಎಲ್ಲದಕ್ಕೂ ಕಾಯಬೇಕು, ವಿಶ್ವದ ನಿರ್ಲಕ್ಷ್ಯ ಮಾತ್ರ ದಂಡಿಯಾಗಿದೆ!





ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು, ಬಹುಶಃ ತನ್ನ ವಕೀಲರ ಅಭಿಪ್ರಾಯದ ಮೇರೆಗೆ, ನ್ಯೂಯಾರ್ಕ್ ಟೈಮ್ಸ್ ಲೇಖನವು ಆಪಾದನೆಗಳ ಬದಲು, ಕೇವಲ ದ್ವಂದ್ವಾರ್ಥ–ಸೂಚ್ಯಾರ್ಥಗಳ ಪದ ಬಳಕೆಗೆ ಸೀಮಿತಗೊಂಡಿತ್ತು. ಆದರೆ, ಯುಎಪಿಎ ಕಾಯ್ದೆಯನ್ನು ಅಸ್ತ್ರವಾಗಿಸಿಕೊಂಡಿರುವ ದೆಹಲಿ ಪೊಲೀಸರಿಗೆ ಅಂತಹ ಅಡೆ–ತಡೆಯೇನೂ ಇಲ್ಲವಲ್ಲ. ವಿರೋಧಿಗಳನ್ನು ಹಣಿಯುವ ಮೆಕಾರ್ಥಿಸಂ ರೀತಿಯ ಕಾರ್ಯಾಚರಣೆಯತ್ತ ದೃಷ್ಟಿ ಹೊರಳಿಸಿದ ಅಮೆರಿಕದ ಉದಾರವಾದಿಗಳ ಇಂಗಿತವನ್ನು ಭಾರತದ ಫ್ಯಾಸಿಸ್ಟ್–ತೆರನ ಸರ್ಕಾರವು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದಿದೆ. ಈ ಮೆಕಾರ್ಥಿಸಂ ಜಾಗತೀಕರಣದ ಯುಗದಲ್ಲಿ ಚೀನಾ ಗುಮ್ಮವನ್ನು ಆವಾಹಿಸುವ ರೂಪ ತಳೆದಿದೆ.

ಪ್ರೊ. ಪ್ರಭಾತ್ ಪಟ್ನಾಯಕ್
ಅನು: ಕೆ.ಎಂ.ನಾಗರಾಜ್

ಮೆಕಾರ್ಥಿವಾದಿ ಬೇಟೆಯ ಜಾಗತೀಕರಣ –ಚೀನಾ ಗುಮ್ಮದ ಆವಾಹನೆ

ನ್ಯೂಸ್‌ಕ್ಲಿಕ್ ಎಂಬ ಆನ್‌ಲೈನ್ ಪತ್ರಿಕೆಯ ಮೇಲೆ ಕೇಂದ್ರ ಸರ್ಕಾರವು ತನ್ನ ಬೇಟೆ ನಾಯಿಗಳನ್ನು ಛೂ ಬಿಟ್ಟಿದೆ. ಈ ಪ್ರಕರಣವು ಹುಲಿ ಮತ್ತು ಮೇಕೆ ಒಂದೇ ಹೊಳೆಯಿಂದ ನೀರು ಕುಡಿಯುವ ಮಕ್ಕಳ ಕಥೆಗಳನ್ನು ನೆನಪಿಸುತ್ತದೆ: ಮೇಕೆ ಮರಿಯೊಂದು ಹೊಳೆಯಲ್ಲಿ ನೀರು ಕುಡಿಯುತ್ತಿತ್ತು. ಹುಲಿಗೆ ಅದನ್ನು ಸಹಿಸಲಾಗಲಿಲ್ಲ. ಮೇಕೆಯ ಮೇಲೆ ದಾಳಿ ಮಾಡಲು ಒಂದ ನೆಪ ಬಯಸಿದ ಹುಲಿ, "ನಾನು ಕುಡಿಯುವ ನೀರನ್ನು ನೀನು ಗಲೀಜು ಮಾಡುತ್ತಿರುವೆ, ನಿನ್ನನ್ನು ಬಿಡುವುದಿಲ್ಲ" ಎಂದು ಬೆದರಿಸಿತು. ಆಗ ಮೇಕೆ ಮರಿ, "ನಾನು ಹೊಳೆಯ ಕೆಳ ಭಾಗದಲ್ಲಿ ಹರಿಯುವ ನೀರನ್ನು ಕುಡಿಯುತ್ತಿರುವೆ. ನೀನು ಈ ಹೊಳೆಯ ಎತ್ತರದ ಭಾಗದಲ್ಲಿರುವೆ. ಅಲ್ಲಿಗೆ ನಾನು ಯಾವತ್ತೂ ಬಂದಿಲ್ಲ. ಆದ್ದರಿಂದ ನಾನು ಅದನ್ನು ಗಲೀಜು ಮಾಡಿರುವುದು ಸಾಧ್ಯವಿಲ್ಲ" ಎಂದಿತು. ಆಗ ಹುಲಿ ಹೇಳುತ್ತದೆ: "ನೀನು ಮಾಡಿಲ್ಲದೆ ಇರಬಹುದು. ನಿಮ್ಮಪ್ಪ ಗಲೀಜು ಮಾಡಿದ್ದ. ನಿಮ್ಮಜ್ಜ ಗಲೀಜು ಮಾಡಿದ್ದ".

ಮೋದಿ ಸರ್ಕಾರವು ಸುಮಾರು ಎರಡು ವರ್ಷಗಳಿಂದಲೂ ಬೇತಾಳನಂತೆ ನ್ಯೂಸ್‌ಕ್ಲಿಕ್ ಪತ್ರಿಕೆಯನ್ನು ಬೆನ್ನಟ್ಟಿದೆ. ದೆಹಲಿ ಪೊಲೀಸರು ನ್ಯೂಸ್‌ಕ್ಲಿಕ್ ಸ್ಥಾಪಕ ಪ್ರಬೀರ್ ಪುರಕಾಯಸ್ಥ ಅವರ ಕಚೇರಿಯನ್ನು ಮತ್ತು ಅವರ ಮನೆಯನ್ನು ಹಣಕಾಸು ದುರುಪಯೋಗದ ಪುರಾವೆಗಳಿಗಾಗಿ ವಾರಗಟ್ಟಲೆ ಶೋಧಿಸಿದ್ದರು. ಈ ಎಲ್ಲಾ ಪ್ರಯತ್ನಗಳ ಹೊರತಾಗಿಯೂ ನ್ಯೂಸ್‌ಕ್ಲಿಕ್ ವಿರುದ್ಧ ಯಾವುದೇ ಆರೋಪವನ್ನು ಹೊರಿಸಲು ಬೇಕಾಗುವ ಯಾವ ಪುರಾವೆಯೂ ಪೊಲೀಸರಿಗೆ ದೊರಕಲಿಲ್ಲ. ಏಕೆಂದರೆ, ಅಂತಹ ಯಾವ ದುಷ್ಕೃತ್ಯವೂ ಸಂಭವಿಸಿಲ್ಲ. ಆದರೆ, ಮೋದಿ ಸರ್ಕಾರವು ಈಗ ಒಂದು ಹೊಸ ಆರೋಪವನ್ನು – ಭಯೋತ್ಪಾದನೆಯ ಆರೋಪವನ್ನು – ಅವರ ಮೇಲೆ ಹೊರಿಸಿದೆ. ಈ ಸಂಬಂಧವಾಗಿ, ನ್ಯೂಸ್‌ಕ್ಲಿಕ್ ಪತ್ರಿಕೆಯ ಸೇವಾ ಪೂರೈಕೆದಾರರೂ ಸೇರಿದಂತೆ ಪತ್ರಿಕೆಯ ಉದ್ಯೋಗಿಗಳಿಗೆ ಕಿರುಕುಳ ನೀಡಿದೆ ಮತ್ತು 'ಕಾನೂನುಬಾಹಿರ ಚಟುವಟಿಕೆಗಳ ತಡೆಗಟ್ಟುವಿಕೆ ಕಾಯ್ದೆ' (ಯುಎಪಿಎ) ಅಡಿಯಲ್ಲಿ ಪ್ರಬೀರ್ ಪುರಕಾಯಸ್ಥ ಮತ್ತು ಅಮಿತ್ ಚಕ್ರವರ್ತಿ ಅವರನ್ನು ಬಂಧಿಸಿದೆ. ಈ ಕಾಯ್ದೆಯು ಅದೆಷ್ಟು ಕರಾಳವಾಗಿದೆಯೆಂದರೆ, ಪ್ರಸ್ತುತ ಪ್ರಕರಣದಲ್ಲಿ ಪುರಕಾಯಸ್ಥ ಅವರ ಮೇಲೆ ಹೊರಿಸಿರುವ ಆರೋಪಗಳು ಹಾಸ್ಯಾಸ್ಪದವಾಗಿದ್ದರೂ ಸಹ, ಬಂಧಿತರಿಗೆ ಯಾವುದೇ ಪರಿಹಾರ ದೊರಕುವ ಸಾಧ್ಯತೆ ಅತ್ಯಂತ ಕಷ್ಟಕರವಾಗಿದೆ.

ದೆಹಲಿ ಪೊಲೀಸರು ತಮ್ಮ ಈ ತನಿಖೆಯ ಜಾಡನ್ನು ಈ ರೀತಿಯಲ್ಲಿ ಬದಲಾಯಿಸಿರುವುದು ಸರ್ಕಾರದ ಸ್ವಂತ ಕಲ್ಪನೆಯಲ್ಲ. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಪೂರ್ಣ ಹಗೆತನದಿಂದ ಕೂಡಿದ ಲೇಖನದ ಆಧಾರದ ಮೇಲೆ ಈ ತನಿಖೆಯ ಜಾಡನ್ನು ಸರ್ಕಾರ ಬದಲಿಸಿದೆ. ಈ ಲೇಖನವು, ಅಮೆರಿಕದ ಪ್ರಜೆಯಾಗಿರುವ ನೆವಿಲ್ಲ್ ರಾಯ್ ಸಿಂಘಮ್ ಎಂಬ ಒಬ್ಬ ಶ್ರೀಮಂತ ಉದ್ಯಮಿಯು ಚೀನಾ ಸರ್ಕಾರಕ್ಕೆ ಹತ್ತಿರವಾಗಿದ್ದಾರೆ; ಅವರು ಚೀನಾದ ಪರವಾಗಿ ಪ್ರಚಾರ ಮಾಡುತ್ತಾರೆ; ಅದಕ್ಕಾಗಿ ಅವರು ಭಾರೀ ಹಣ ಬಳಸುತ್ತಿದ್ದಾರೆ; ಅನೇಕ ಸಂಸ್ಥೆಗಳೊಂದಿಗೆ ಸಂಬಂಧ ಹೊಂದಿದ್ದಾರೆ ಮತ್ತು ಅವುಗಳಲ್ಲಿ ನ್ಯೂಸ್‌ಕ್ಲಿಕ್ ಪತ್ರಿಕೆಯೂ ಸೇರಿದೆ ಎಂಬುದಾಗಿ ಆರೋಪಿಸಿದೆ.

ಕಿಡಿಗೇಡಿತನ ಮತ್ತು ಅಪ್ರಾಮಾಣಿಕತೆ

ನ್ಯೂಯಾರ್ಕ್ ಟೈಮ್ಸ್ ಪ್ರಕಟಿಸಿರುವ ಈ ಲೇಖನವು ದುರುದ್ದೇಶದಿಂದ ಕೂಡಿದೆ. ಏಕೆಂದರೆ, ಅದರಲ್ಲಿ ಅಮೆರಿಕಾದ ಯಾವುದೇ ಕಾಯ್ದೆಯ ಉಲ್ಲಂಘನೆಯ ಪ್ರಸ್ತಾಪವೂ ಇಲ್ಲ ಮತ್ತು ಅದರ ಅಭಿಪ್ರಾಯದ ಸಮರ್ಥನೆಯಾಗಿ ಯಾವ ಪುರಾವೆಯನ್ನೂ ಒದಗಿಸಿಲ್ಲ. ದ್ವಂದ್ವಾರ್ಥಗಳು ಮತ್ತು ಸೂಚ್ಯಾರ್ಥಗಳಿಂದ ಕೂಡಿದ ಈ ಲೇಖನದ ಉದ್ದೇಶವೆಂದರೆ, ತನ್ನ ಹೆಚ್ಚುತ್ತಿರುವ ಪ್ರಭಾವವನ್ನು ವಿಶ್ವಾದ್ಯಂತ ವ್ಯಾಪಕವಾಗಿ ಪ್ರಚುರಪಡಿಸಲು ಸಿಂಘಂನಂತಹ ವ್ಯಕ್ತಿಗಳನ್ನು ಚೀನಾ ಬಳಸಿಕೊಳ್ಳುತ್ತಿದೆ ಎಂಬ ರೀತಿಯ ಸನ್ನಿವೇಶವನ್ನು ಸೃಷ್ಟಿಸುವುದು. ಈ ಸಂಬಂಧವಾಗಿ ಪತ್ರಿಕೆಗೆ ಕಳಿಸಿರುವ ಈ–ಮೇಲ್‌ನಲ್ಲಿ ಸಿಂಘಂ ಹೀಗೆ ಘೋಷಿಸಿದ್ದಾರೆ: "ನಾನು ಯಾವುದೇ ರಾಜಕೀಯ ಪಕ್ಷದ ಸದಸ್ಯ, ಅದಕ್ಕಾಗಿ ಕೆಲಸ ಮಾಡುತ್ತಿದ್ದೇನೆ, ಅದರ ಆದೇಶಗಳಿಗೆ ಅಧೀನನಾಗಿದ್ದೇನೆ ಅಥವಾ ಅದನ್ನು ಅನುಸರಿಸುತ್ತೇನೆ ಅಥವಾ ಯಾವುದೇ ಸರ್ಕಾರದ ಪ್ರತಿನಿಧಿ, ಅದರ ಆದೇಶಗಳಿಗೆ ಅಧೀನನಾಗಿದ್ದೇನೆ, ಎಂಬ ಯಾವುದೇ ಅಭಿಪ್ರಾಯ/ಸಲಹೆ/ಸೂಚನೆಯನ್ನು ನಾನು ನೇರವಾಗಿ ನಿರಾಕರಿಸುತ್ತೇನೆ ಮತ್ತು ತಿರಸ್ಕರಿಸುತ್ತೇನೆ. ನನ್ನ ನಂಬಿಕೆಗಳ ಪ್ರಕಾರ ಮಾತ್ರವೇ ನಾನು ನಡೆಯುತ್ತೇನೆ ಮತ್ತು ಅವು ನನ್ನ ದೀರ್ಘಕಾಲದ ವೈಯಕ್ತಿಕ ಅಭಿಪ್ರಾಯಗಳೂ ಹೌದು". ನ್ಯೂಯಾರ್ಕ್ ಟೈಮ್ಸ್ ಲೇಖನವು ಈ ಹೇಳಿಕೆಯಲ್ಲಿರುವ ನಿಲುವನ್ನು ಅಲ್ಲಗಳೆದಿಲ್ಲ. ಸಿಂಘಂ ಆಗಲಿ ಅಥವಾ ಅವರಿಂದ ಹಣ ಪಡೆದ ಯಾವುದೇ ಸಂಸ್ಥೆಯಾಗಲಿ ಅಮೆರಿಕದ ಯಾವುದೇ ಕಾಯ್ದೆಯನ್ನು ಉಲ್ಲಂಘಿಸಿವೆ ಎಂಬ ಯಾವುದೇ ನೇರ ಆರೋಪವನ್ನೂ ಮಾಡುವುದಿಲ್ಲ. ಆದರೆ, ಲೇಖನವು ಪ್ರಾಸಂಗಿಕವಾಗಿ ಔಚಿತ್ಯವಿಲ್ಲದ ಕೆಲವು ವಿವರಗಳನ್ನು ಕೊಡುತ್ತದೆ. ಈ ಯಾವ ವಿವರಗಳೂ ಸಿಂಘಂ ಅವರ ವಿರುದ್ಧವಾಗಲಿ ಅಥವಾ ಅವರೊಂದಿಗೆ ಸಂಬಂಧ ಹೊಂದಿದ್ದಾರೆಂದು ಹೇಳಲಾದ ಯಾವುದೇ ಸಂಸ್ಥೆಗಳ ವಿರುದ್ಧವಾಗಲಿ ನೇರವಾಗಿ ಯಾವುದೇ ದುಷ್ಕೃತ್ಯದ ಆರೋಪ ಮಾಡಿಲ್ಲ. ಆದರೆ, ಈ ಎಲ್ಲ ವಿವರಗಳನ್ನು ಒಟ್ಟಾರೆಯಾಗಿ ನೋಡಿದಾಗ, ಚೀನಾದ ಅಧಿಕಾರಿಗಳು ಜಾಗತಿಕ ಮಟ್ಟದಲ್ಲಿ ದುಷ್ಕೃತ್ಯವನ್ನು ಸಂಯೋಜಿಸಿದ್ದಾರೆ ಎಂಬ ಒಂದು ಭ್ರಮೆಯನ್ನು ಅವು ಸೃಷ್ಟಿಸುತ್ತವೆ.

ಸಿಂಘಂ ಅವರು ಕಾನೂನುಬಾಹಿರವಾಗಿ ನಡೆದುಕೊಂಡಿಲ್ಲ. ಅವರು ಕಾನೂನುಬಾಹಿರವಾಗಿ ಏನಾದರೂ ಮಾಡಿದ್ದಾರೆ ಎಂಬುದನ್ನು ನ್ಯೂಯಾರ್ಕ್ ಟೈಮ್ಸ್ ಲೇಖನವೂ ಸಹ ನೇರವಾಗಿ ಹೇಳಿಲ್ಲ. ಸಿಂಘಂ ಅವರಿಂದ ಸಹಾಯ ಪಡೆದ ಅಮೆರಿಕಾದ ಯಾವ ಸಂಸ್ಥೆಯೂ ಸಹ ಕಾನೂನುಬಾಹಿರವಾಗಿ ನಡೆದುಕೊಂಡಿಲ್ಲ. ಸಾಮಾನ್ಯವಾಗಿ ಸಾಮ್ರಾಜ್ಯಶಾಹಿ–ವಿರೋಧಿಯಾಗಿರುವ ಒಂದು ಮಾರ್ಕ್ಸ್‌ವಾದಿ ನಿಲುವು ಹೊಂದಿರುವುದನ್ನು ಹೊರತುಪಡಿಸಿದರೆ, ಸಿಂಘಂ ಅವರು ಚೀನಾವನ್ನು ಬೆಂಬಲಿಸುವ ಯಾವ "ಪ್ರಚಾರ"ದಲ್ಲೂ ತೊಡಗಿಲ್ಲ. ನ್ಯೂಯಾರ್ಕ್ ಟೈಮ್ಸ್ ಲೇಖನದ ಕಿಡಿಗೇಡಿತನ ಮತ್ತು ಅಪ್ರಾಮಾಣಿಕ ಸಂಗತಿಯೆಂದರೆ ಅದು ಸೂಚ್ಯಾರ್ಥ ಮತ್ತು ದ್ವಂದ್ವಾರ್ಥಗಳ ಮೂಲಕ ಸಾಮ್ರಾಜ್ಯಶಾಹಿ ವಿರೋಧಿ ನಿಲುಮೆಯನ್ನು ಚೀನಾ ಪ್ರಚಾರದೊಂದಿಗೆ ಸಮೀಕರಿಸುತ್ತದೆ. ವಿರೋಧಿಗಳನ್ನು ಬಗ್ಗುಬಡಿಯುವ ಮೆಕಾರ್ಥಿ ಶೈಲಿಯ ಬೇಟೆಗೆ ಅವಕಾಶವನ್ನು ಅದು ತೆರೆಯುವುದು ಇಲ್ಲಿಯೇ. ಇದೇ ಸಂದರ್ಭದಲ್ಲಿ, ಮಾರ್ಕೊ ರುಬಿಯೊ ಎಂಬ ಒಬ್ಬ ಅಮೆರಿಕದ ಸೆನೆಟರ್, ಆ ದೇಶದ ಅಟಾರ್ನಿ ಜನರಲ್ ಮೆರಿಕ್ ಗಾಲ್ಯಾರ್ಂಡ್ ಗೆ ಬರೆದ ಪತ್ರದಲ್ಲಿ, ಅಮೆರಿಕದ ಎಡಪಂಥೀಯ ಯುದ್ಧ–ವಿರೋಧಿ ಗುಂಪುಗಳು ಚೀನಾ ಕಮ್ಯುನಿಸ್ಟ್ ಪಕ್ಷದೊಂದಿಗೆ ಸಂಬಂಧ ಹೊಂದಿವೆ ಮತ್ತು ಅವು ಅಮೆರಿಕದಲ್ಲಿ ನಿರ್ಭೀತಿಯಿಂದ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ, ಅವರ ಮೇಲೆ ತನಿಖೆ ನಡೆಸಬೇಕು ಎಂದು ಒತ್ತಾಯಿಸಿರುವುರಲ್ಲಿ ಆಶ್ಚರ್ಯವೇನಿಲ್ಲ.

ತನ್ನ ಲೇಖನದಲ್ಲಿ ಸುಳ್ಳು ಆರೋಪಗಳಿದ್ದರೆ, ಪತ್ರಿಕೆಯು ಕಾನೂನು ಕ್ರಮವನ್ನು ಎದುರಿಸಬೇಕಾಗುತ್ತಿತ್ತು. ಹಾಗಾಗಿ, ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು, ಬಹುಶಃ ತನ್ನ ವಕೀಲರ ಅಭಿಪ್ರಾಯದ ಮೇರೆಗೆ, ನ್ಯೂಯಾರ್ಕ್ ಟೈಮ್ಸ್ ಲೇಖನವು ಆಪಾದನೆಗಳ ಬದಲು, ಕೇವಲ ದ್ವಂದ್ವಾರ್ಥ–ಸೂಚ್ಯಾರ್ಥಗಳ ಪದ ಬಳಕೆಗೆ ಸೀಮಿತಗೊಂಡಿತ್ತು. ಆದರೆ ದೆಹಲಿ ಪೊಲೀಸರಿಗೆ ಅಂತಹ ಅಡೆ–ತಡೆಯೇನೂ ಇಲ್ಲವಲ್ಲ. ಏಕೆಂದರೆ, ಅವರು ಒಂದು ಕಾಯ್ದೆಯನ್ನು (ಯುಎಪಿಎ) ಅಸ್ತ್ರವಾಗಿ ಹೊಂದಿದ್ದಾರೆ. ಈ ಕಾಯ್ದೆಯ ಅಡಿಯಲ್ಲಿ ವ್ಯಕ್ತಿಗಳ ವಿರುದ್ಧ ಅಥವಾ ಸಂಸ್ಥೆಗಳ ವಿರುದ್ಧ ಮಾಡುವ ಆರೋಪಗಳನ್ನು ತಿಂಗಳುಗಟ್ಟಲೇ ಅಥವಾ ವರ್ಷಗಟ್ಟಲೇ ಸಮರ್ಥಿಸಿಕೊಳ್ಳದೇ ಇದ್ದರೂ ಸಹ, ಪೋಲೀಸರನ್ನು ಕೇಳುವಂತಿಲ್ಲ. ಆದ್ದರಿಂದ, ಇದೇ ನ್ಯೂಯಾರ್ಕ್ ಟೈಮ್ಸ್ ಲೇಖನವನ್ನು ಆಧರಿಸಿ, ಚೀನಾ ಪ್ರಚಾರಕ್ಕಾಗಿ ನ್ಯೂಸ್‌ಕ್ಲಿಕ್ ಪತ್ರಿಕೆಯನ್ನು ಬಳಸಲಾಗುತ್ತಿದೆ ಎಂಬ ಕ್ರೂರ ಮತ್ತು ಆಧಾರರಹಿತ ಹೇಳಿಕೆ ಕೊಡುವ ಧೈರ್ಯಮಾಡಿದ್ದಾರೆ. ಅವರ ಹೇಳಿಕೆಯನ್ನು "ಆಧಾರರಹಿತ" ಎಂದು ನಾನು ಹೇಳುತ್ತೇನೆ. ಏಕೆಂದರೆ, ನ್ಯೂಸ್‌ಕ್ಲಿಕ್ ಪತ್ರಿಕೆಯನ್ನು ತಪದೇ ಓದುವವನಾಗಿ ಹೇಳುವುದಾದರೆ, ಅಂತಾರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಅದು ತಳೆಯುವ ಎಡ ಅಥವಾ ಮಾರ್ಕ್ಸ್‌ವಾದಿ ಕಣ್ಣೋಟವನ್ನು ಹೊರತುಪಡಿಸಿದರೆ, ಚೀನಾದ ಸರ್ಕಾರದ ನಿಲುಮೆಯನ್ನು ಬೆಂಬಲಿಸಿದ ಅಥವಾ ಪರೋಕ್ಷವಾಗಿಯಾದರೂ ಸಮರ್ಥಿಸಿದ ಒಂದು ಲೇಖನವನ್ನೂ ಸಹ ನಾನು ನೋಡಿಲ್ಲ. ಚೀನಾದ ಕ್ರಾಂತಿಯ ಬಗ್ಗೆ ಅದು ಗೌರವ ಭಾವನೆ ಹೊಂದಿದೆ. ಅಂತಹ ಗೌರವ ಭಾವನೆಯನ್ನು ಮೂರನೇ ಜಗತ್ತಿನ ಪ್ರತಿಯೊಬ್ಬ ನಿಷ್ಠಾವಂತ ಸಾಮ್ರಾಜ್ಯಶಾಹಿ–ವಿರೋಧಿಯೂ ಹೊಂದಿರುತ್ತಾನೆ/ಳೆ.

ಎರಡು ರೀತಿಯ ದ್ವಂದ್ವಗಳು

ಈ ಇಡೀ ಪ್ರಸಂಗವು ಎರಡು ರೀತಿಯ ದ್ವಂದ್ವಗಳು ಈ ಪ್ರಕರಣದಲ್ಲಿ ಕಾರ್ಯ ಪ್ರವೃತ್ತವಾಗಿವೆ ಎಂಬುದನ್ನು ತೋರಿಸುತ್ತದೆ. ಮೊದಲನೆಯದು, "ಉದಾರವಾದಿ" ಮೆಕಾರ್ಥಿಸಂ ಮತ್ತು "ಫ್ಯಾಸಿಸ್ಟ್–ತೆರನ" ಮೆಕಾರ್ಥಿಸಂ ಇವುಗಳ ನಡುವಿನ ದ್ವಂದ್ವ. ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯನ್ನು "ಉದಾರವಾದಿ" ಎಂದು ಪರಿಗಣಿಸಲಾಗುತ್ತದೆ, ವಿಶ್ವಾದ್ಯಂತ ಅಮೆರಿಕಾ ನಡೆಸುವ ಸಾಮ್ರಾಜ್ಯಶಾಹಿ ಯುದ್ಧಗಳನ್ನು ಅದು ಸಾಮಾನ್ಯವಾಗಿ ಬೆಂಬಲಿಸುತ್ತದೆಯಾದರೂ ಸಹ, ಉದಾರವಾದದ ಪ್ರತಿಪಾದಕರ ಪ್ರಕಾರ ಅದರ ಒಂದು ಮೂಲಭೂತ ತತ್ವವೆಂದರೆ, ಸಮಾಜದಲ್ಲಿರುವ ಬೇರೆ ಬೇರೆ ಕಣ್ಣೋಟಗಳು ಮತ್ತು ಅಭಿಪ್ರಾಯಗಳ ವೈವಿಧ್ಯತೆಯನ್ನು ಒಪ್ಪಿಕೊಳ್ಳುವುದು ಮತ್ತು ಅಂತಹ ಕಣ್ಣೋಟಗಳನ್ನು ದೇಶದ ಅಂಗೀಕೃತ ಕಾನೂನುಗಳ ಪರಿಧಿಯೊಳಗೆ ಪ್ರಚಾರ ಮಾಡುವ ಸ್ವಾತಂತ್ರ್ಯವನ್ನು ಹೊಂದಿರುವುದು. ನ್ಯೂಯಾರ್ಕ್ ಟೈಮ್ಸ್ ಪ್ರಕಟಿಸಿರುವ ಈ ಲೇಖನವು– ಪತ್ರಿಕೆಯು ಚೀನಾದ ಬಗ್ಗೆ ಮತ್ತು ಎಡ ಪಂಥದ ಬಗ್ಗೆ ಹೊಂದಿರುವ ಹಗೆತನವನ್ನು ಎಷ್ಟೇ ದ್ವಂದ್ವಾರ್ಥಗಳಿಂದ ಕೂಡಿದ ಭಾಷೆಯ ಮೂಲಕ ಲೇಖನದಲ್ಲಿ ಮರೆಮಾಚಲು

ಪುಟ 15 ಕ್ಕೆ



ವಿದೇಶಿ ಮಾಧ್ಯಮಗಳಲ್ಲಿ ತನಿಖಾ ವರದಿಗಳು ಚೀನಾ ಕನೆಕ್ಷನ್ ಮತ್ತು ಮೋದಿ ಸರಕಾರ
ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಮೊಲಿಟಿಕ್ಸ್.ಇನ್

ಇಸ್ರೇಲಿ ಅಪರಾಧಗಳಲ್ಲಿ ನಿಮ್ಮ ಮೌನ ಮತ್ತು ಶಾಮೀಲು, ನಿಮ್ಮ ಬೆಂಬಲ ಇಲ್ಲದಿದ್ದರೆ ಮತ್ತು ನೀವು ಆಯ್ಕೆ ಮಾಡಿದ ಯುರೋಪಿಯನ್ ಸರ್ಕಾರಗಳಿಂದ ಇಸ್ರೇಲ್ ಪಡೆಯುವ ಆರ್ಥಿಕ ಮತ್ತು ರಾಜಕೀಯ ಬೆಂಬಲವಿಲ್ಲದಿದ್ದರೆ, ನಾನು ಇಂದು ನನ್ನ ಕುಟುಂಬದವರ ಸಾವಿಗೆ ಹೆದರುತ್ತಿರಲಿಲ್ಲ.



ಪ್ರಿಯ ಯುರೋಪಿಯನ್ನರೇ! ಗಾಜಾ ನರಮೇಧವನ್ನು ತಡೆಯಲು ಮುಂದಾಗುತ್ತೀರಾ?

ಮಜೆದ್ ಅಬುಸಲಮಾ
(ಜರ್ಮನಿಯಲ್ಲಿ 'ಪ್ಯಾಲೆಸ್ಟೈನ್ ಸ್ಪೀಕ್ಸ್' ಸಹ-ಸಂಸ್ಥಾಪಕ)

ಆತ್ಮೀಯ ಯುರೋಪಿಯನ್ನರೇ!

ನಾನು, ಲಕ್ಷಾಂತರ ಪ್ಯಾಲೆಸ್ಟೀನಿಯರಂತೆ, ನಮ್ಮ ಜನರ ಮೇಲೆ ಎರಗಿದ ಮತ್ತೊಂದು ಸುತ್ತಿನ ಸಾಮೂಹಿಕ ಸಾವು ಮತ್ತು ವಿನಾಶದ ಕೆಟ್ಟ ದುಃಸ್ವಪ್ನದಿಂದ ಬದುಕುತ್ತಿದ್ದೇನೆ – ಅದನ್ನು ನೀವು ಹೆಚ್ಚಾಗಿ "ಪ್ಯಾಲೇಸ್ಟಿನಿಯನ್–ಇಸ್ರೇಲಿ ಸಂಘರ್ಷದ ಉಲ್ಬಣ "ಎಂದು ಕರೆಯುತ್ತೀರಿ.

ನಾನು ಈ ಸಾಲುಗಳನ್ನು ಬರೆಯುತ್ತಿದ್ದಂತೆ, ಅಲ್–ಅಹ್ಲಿ ಆಸ್ಪತ್ರೆಯ ಮೇಲೆ ಬಾಂಬ್ ಸ್ಫೋಟಿಸಲಾಯಿತು, ಆಸ್ಪತ್ರೆಯ ಆವರಣದಲ್ಲಿ ಸುರಕ್ಷತೆಯನ್ನು ಕೋರಿದ ನೂರಾರು ಮಕ್ಕಳು, ಪುರುಷರು ಮತ್ತು ಮಹಿಳೆಯರನ್ನು ಕೊಂದರು. ಗಂಟೆಗಳ ಹಿಂದೆ, ನನ್ನ ಸ್ನೇಹಿತ ಮೊಹಮ್ಮದ್ ಮೊಖಿಯೆಮರ್, ಅವರ ಪತ್ನಿ ಸಫಾ ಮತ್ತು ಅವರ ಮೂರು ತಿಂಗಳ ಮಗು ಎಲ್ಯಾನಾ ಅವರ ಸಾವಿನ ಸುದ್ದಿ ನನ್ನನ್ನು ತಲುಪಿತು.

ಇಸ್ರೇಲಿ ಆದೇಶಗಳನ್ನು ಅನುಸರಿಸಿ ಗಾಜಾದ ದಕ್ಷಿಣ ಭಾಗಕ್ಕೆ ಇತರ ಕುಟುಂಬಗಳೊಂದಿಗೆ ಸ್ಥಳಾಂತರಿಸಿದ ನಂತರ ಅವರನ್ನು ಕೊಲ್ಲಲಾಯಿತು. ಇಸ್ರೇಲಿ ವಾಯುದಾಳಿಗಳಿಂದ ಅವರು ಮತ್ತು ಇತರ 70 ಪ್ಯಾಲೆಸ್ಟೀನಿಯರು ಕೊಲ್ಲಲ್ಪಟ್ಟರು.

ನನ್ನ ಈಗಿನ ಭಾವನೆಯನ್ನು ಬಣ್ಣಿಸಬಲ್ಲ ಏಕೈಕ ಪದವೆಂದರೆ ಅರೇಬಿಕ್ ಭಾಷೆಯ "ಖಹರ್" ಎಂದು ನಾನು ಭಾವಿಸುತ್ತೇನೆ. ಇದು ಬರಿಯ ನೋವಲ್ಲ, ಜತೆಗೆ ದುಃಖ ಮತ್ತು ಕೋಪ ಕೂಡಾ. ಇದು ತಲೆಮಾರುಗಳಿಂದ, 75 ವರ್ಷಗಳಿಂದ – ಜನಾಂಗೀಯ ಶುದ್ಧೀಕರಣ, ಸಾಮೂಹಿಕ ಹತ್ಯೆಗಳು, ಅನ್ಯಾಯ, ದಬ್ಬಾಳಿಕೆ, ವಸಾಹತುಶಾಹಿ, ಉದ್ಯೋಗ ಮತ್ತು ವರ್ಣಭೇದ ನೀತಿಯ – ಮೂಲಕ ಹೆಪ್ಪುಗಟ್ಟಿದ ಭಾವನೆ. ಇದು ಪ್ರತಿ ಪ್ಯಾಲೇಸ್ಟಿನಿಯನಲ್ಲಿ ಬೇರೂರಿರುವ, ನಮ್ಮ ಜೀವನದುದ್ದಕ್ಕೂ ನಮ್ಮ ಬೆನ್ನು ಬಿಡದ ಭಾವನೆ.

ನಾನು ಗಾಜಾ ಪ್ರದೇಶದ ನಿರಾಶ್ರಿತರ ಕುಟುಂಬದಲ್ಲಿ ಜನಿಸಿದ್ದೇನೆ. ನನ್ನ ಅಜ್ಜ–ಅಜ್ಜಿಯರು ಇಸ್ಡುಡ್ ಗ್ರಾಮ (ಈಗ ಅಶ್ಡೋಡ್) ಮತ್ತು ಬೇಟ್ ಜೆರ್ಜಾ ಗ್ರಾಮದಿಂದ ಬಂದವರು, ಆದರೆ ತಮ್ಮ ಮನೆಗಳಿಂದ ಕೇವಲ 20 ಕಿ.ಮೀ (12.4 ಮೈಲಿ) ದೂರದ ಜಬಾಲಿಯಾ ನಿರಾಶ್ರಿತರ ಶಿಬಿರದಲ್ಲಿ ನೆಲೆಸಬೇಕಾಯಿತು. ಮೊದಲ ಇಂಟಿಫಾಡಾದ ಮಧ್ಯೆ ಗಾಜಾದ ಮೇಲೆ ಇಸ್ರೇಲಿ ದಾಳಿಯಿಂದ ಬದುಕುಳಿದ ತನ್ನ ಶಿಶುಗಳ ಬಗ್ಗೆ ಚಿಂತೆ ಮಾಡುತ್ತಿರುವ ಯುವ ತಾಯಿಯಾಗಿದ್ದ ನನ್ನ ತಾಯಿಯ ಮುಖದಲ್ಲಿ, ಮಗುವಾಗಿ ನಾನು ನೋಡಿದ ಮೊದಲ ಭಾವನೆ ಖಹರ್.

ಇಸ್ರೇಲಿಗಳು ಮೊದಲು ನಮ್ಮ ಮನೆಯ ಮೇಲೆ ದಾಳಿ ಮಾಡಿದಾಗ ಮತ್ತು ಅವರು ಮೊದಲು ನನ್ನ ತಂದೆಯನ್ನು ಬಂಧಿಸಿದಾಗ, ಅವರು ವಿಚಾರಣೆ ಅಥವಾ ಬೇಕಾಬಿಟ್ಟಿಯಾಗಿ ಮತ್ತೆ ಮತ್ತೆ ಬಂಧನಕ್ಕೆ ಒಳಗಾಗಾದಾಗ ಮತ್ತೆ "ಖಹರ್" ಕಾಡಿತು. ಶಾಂತಿಯುತ ಪ್ಯಾಲೇಸ್ಟಿನಿಯನ್ ಪ್ರತಿಭಟನಾಕಾರರ ಮೇಲೆ ಇಸ್ರೇಲಿ ಸೈನಿಕರು ಗುಂಡು ಹಾರಿಸುವುದನ್ನು ನೋಡಿದಾಗ ಮತ್ತು ನನ್ನನ್ನು ಖಹರ್ ನಾನು ಕೂಡ ಗುಂಡಿಗೆ ಗುರಿಯಾದ ನಾನು ಅನುಭವಿಸಿದ ನೋವಿಗಿಂತ ಖಹರ್ ಹೆಚ್ಚು ಶಕ್ತಿಶಾಲಿಯಾಗಿತ್ತು.

2008, 2009, 2012, 2014, 2020 ಮತ್ತು 2021 ರಲ್ಲಿ ನನ್ನ ಕುಟುಂಬ, ಸ್ನೇಹಿತರು, ನೆರೆಹೊರೆಯವರು ಮತ್ತು ಸಹ ಪ್ಯಾಲೆಸ್ಟೀನಿಯರನ್ನು ಕೊಲ್ಲುವುದು, ಅಂಗವಿಕಲಗೊಳಿಸುವುದು ಮತ್ತು ನಾಶಪಡಿಸುವುದು ಇಸ್ರೇಲ್ ಗಾಜಾದ ಮೇಲೆ ಪ್ರಾರಂಭಿಸಿದ ಪ್ರತಿಯೊಂದು ಹಲ್ಲೆಗಳಲ್ಲಿ ಕಹರ್ ಮರುಕಳಿಸುತ್ತಲೇ ಇತ್ತು.

ಯುರೋಪಿಯನ್ನರ ಪ್ರಕಾರ, ಉಕ್ರೇನಿಯನ್ನರಿಗೆ ಪ್ರತಿರೋಧಿಸುವ ಹಕ್ಕಿದೆ, ಪ್ಯಾಲೆಸ್ಟೀನಿಯರಿಗೆ ಆ ಹಕ್ಕು ಇಲ್ಲ. ಉಕ್ರೇನಿಯನ್ನರು "ಸ್ವಾತಂತ್ರ್ಯ ಹೋರಾಟಗಾರರು", ಪ್ಯಾಲೆಸ್ಟೀನಿಯರು "ಭಯೋತ್ಪಾದಕರು", ನಾಗರಿಕ ಮನೆಗಳು ಮತ್ತು ಮೂಲಸೌಕರ್ಯಗಳ ವಿವೇಚನೆಯಿಲ್ಲದ ಬಾಂಬ್ ದಾಳಿಯಲ್ಲಿ ಸತ್ತ ಉಕ್ರೇನಿಯನ್ ಜನ ಶೋಕಕ್ಕೆ ಯೋಗ್ಯರು, ಅಂತಹುದೇ ಭಾಂಬ್ ದಾಳಿಗಳಲ್ಲಿ ಸತ್ತ ಪ್ಯಾಲೇಸ್ಟೀನಿ ಜೀವಗಳನ್ನು ನಿರ್ಲಕ್ಷಿಸಬಹುದು–ಅಥವಾ ಇಸ್ರೇಲ್ ತನ್ನ "ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಚಲಾಯಿಸುತ್ತಿದೆ" ಎಂದು ಕೆಟ್ಟದಾಗಿ ಸಮರ್ಥಿಸಬಹುದು. ಈ ಯುರೋಪಿಯನ್ ಗೋಸುಂಬೆತನ ನಿಜವಾಗಿಯೂ ಮಾರಕವಾಗಿದೆ.

ಇಂದು, ನನ್ನ ತಾಯ್ನಾಡಿನಲ್ಲಿ ನಡೆಯುತ್ತಿರುವುದನ್ನು ನಾನು ನೋಡುತ್ತಿರುವಾಗ, ಖಹರ್ ಮತ್ತೆ ಪೀಡಿಸುತ್ತಿದೆ. ಆದರೆ ಆಳವಾದ ಕೋಪ ಮತ್ತು ಹತಾಶೆ ಕೂಡಾ. ನಿಮ್ಮ ನಾಯಕರಾದ ಪ್ರಿಯ ಯುರೋಪಿಯನ್ನರ ಪ್ರತಿಕ್ರಿಯೆಗಳು ಮತ್ತೊಮ್ಮೆ ಆಯ್ದ ಸೌಹಾರ್ದತೆ, ನೈತಿಕ ವೈಫಲ್ಯ ಮತ್ತು ಕಡು ಗೋಸುಂಬೆತನಗಳು ಢಾಳಾಗಿ ಕಾಣುತ್ತಿವೆ.



ಅಕ್ಟೋಬರ್ 11 ರಂದು, ಗಾಜಾದ ಮೇಲೆ ವಿವೇಚನೆಯಿಲ್ಲದ ಇಸ್ರೇಲಿ ಬಾಂಬ್ ದಾಳಿಯಿಂದ 1,000 ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರು ಕೊಲ್ಲಲ್ಪಟ್ಟಾಗ, ಯುರೋಪಿಯನ್ ಆಯೋಗದ ಅಧ್ಯಕ್ಷ ಉರ್ಸುಲಾ ವಾನ್ ಡೆರ್ ಲೀನ್ ಇಸ್ರೇಲಿಗೆ ಬೇಷರತ್ತಾದ ಬೆಂಬಲವನ್ನು ನೀಡಿದರು. "ಯುರೋಪ್ ಇಸ್ರೇಲ್ ಜೊತೆ ನಿಂತಿದೆ. ತನ್ನನ್ನು ತಾನು ರಕ್ಷಿಸಿಕೊಳ್ಳುವ ಇಸ್ರೇಲ್ ಹಕ್ಕನ್ನು ನಾವು ಸಂಪೂರ್ಣವಾಗಿ ಬೆಂಬಲಿಸುತ್ತೇವೆ," ಕಾನೂನು ತಜ್ಞರು ಯುದ್ಧ ಅಪರಾಧ ಎಂದು ವ್ಯಾಖ್ಯಾನಿಸುವ ಗಾಜಾದ ಮೇಲೆ ಇಸ್ರೇಲ್ ಹೇರಿದ ಸಂಪೂರ್ಣ – ವಿದ್ಯುತ್, ನೀರು, ಆಹಾರ ಮತ್ತು ಔಷಧ ಪೂರೈಕೆ ಮೇಲೆ – ದಿಗ್ಬಂಧನದ ಬಗ್ಗೆ ಯಾವುದೇ ಉಲ್ಲೇಖವಿಲ್ಲ.

ಜಗದ ಸುತ್ತ

ವಸಂತರಾಜ ಎನ್.ಕೆ.

ಕೆಲವೇ ದಿನಗಳ ಹಿಂದೆ, ಅವರ ಸಹೋದ್ಯೋಗಿ, ಆಯುಕ್ತ ಒಲಿವರ್ ವರ್ಹೆಲಿ, "ಇಸ್ರೇಲ್ ಮತ್ತು ಅದರ ಜನರ ವಿರುದ್ಧದ ಭಯೋತ್ಪಾದನೆ ಮತ್ತು ಕ್ರೂರತೆಯ ಪ್ರಮಾಣವು ಒಂದು ಮಹತ್ವದ ಅಂಶವಾಗಿದೆ. ಎಂದಿನಂತೆ ವ್ಯವಹಾರ ಇರಲು ಸಾಧ್ಯವಿಲ್ಲ" ಎಂದು ಸಾಮೂಹಿಕ ಶಿಕ್ಷೆಯ ಸ್ಪಷ್ಟ ಕ್ರಿಯೆಯಲ್ಲಿ ಪ್ಯಾಲೇಸ್ಟಿನಿಯನ್ ಜನರಿಗೆ ಎಲ್ಲಾ ಸಹಾಯವನ್ನು ಅಮಾನತುಗೊಳಿಸುವುದನ್ನು ಘೋಷಿಸಲಾಯಿತು. ಈ ನಿರ್ಧಾರವನ್ನು ಆ ನಂತರ ಹಿಂತೆಗೆಯಲಾಯಿತು. ಆದರೆ ಆಗಲೇ ಹಾನಿ ಸಂಭವಿಸಿದೆ. ಎಲ್ಲಾ ಪ್ಯಾಲೆಸ್ಟೀನಿಯರನ್ನು "ಕ್ರೂರ ಭಯೋತ್ಪಾದಕರು" ಎಂದು ಚಿತ್ರಿಸಲಾಗಿದೆ.

ಸಹಜವಾಗಿ, ಪ್ಯಾಲೆಸ್ಟೀನಿನ "ಪ್ರಾಣಿಗಳು" ಮತ್ತು "ಮಾನವ ವರ್ತನೆಗೆ ಅಯೋಗ್ಯರು " ಮತ್ತು ಅಂತಹ ಭಾಷೆ ಹೊಂದಿರುವ ಜನಾಂಗೀಯ ಪರಿಣಾಮಗಳಿಗೆ ಇಸ್ರೇಲಿ ಅಧಿಕಾರಿಗಳಿಗೆ ಯಾವುದೇ ಅಧಿಕೃತ ಯುರೋಪಿಯನ್ ಪ್ರತಿಕ್ರಿಯೆ ಇರಲಿಲ್ಲ; ಅಚ್ಚರಿಯೇನಲ್ಲ, ಇಸ್ರೇಲಿ ವಸಾಹತುಗಾರರು "ಅರಬ್ಬರನ್ನು ಕೊಲ್ಲು" ಎಂದು ಕೂಗುವ ಮೆರವಣಿಗೆಗಳನ್ನು ಅವರು ಎಂದಿಗೂ ಖಂಡಿಸಿಲ್ಲ.

ಆದರೆ ವಲಸಿಗ ಪ್ಯಾಲೆಸ್ಟೀನಿಯರನ್ನು ಮತ್ತು ಅವರ ಯುರೋಪಿಯನ್ ಮಿತ್ರರನ್ನು ಗಾಜಾದ ಜನರೊಂದಿಗೆ ಶೋಕ ಮತ್ತು ಸೌಹಾರ್ದ ಬೆಂಬಲ ಪ್ರದರ್ಶಿಸದಂತೆ ಸೆನ್ಸಾರ್ ಮಾಡಲು ಮತ್ತು ತಡೆಯಲು ಒಂದು ಏಕೀಕೃತ ಪ್ರಯತ್ನ ನಡೆದಿದೆ. ವಿವಿಧ ಯುರೋಪಿಯನ್ ಸರಕಾರಗಳು ಪ್ರತಿಭಟನಾ ನಿಷೇಧ ಹೇರಿವೆ ಮತ್ತು ಪೊಲೀಸ್ ಪಡೆಗಳು ಪ್ರತಿಭಟನಾಕಾರರಿಗೆ ಕಿರುಕುಳ ನೀಡಿ ಹೊಡೆದವು.

ಅನೇಕ ಉದಾರವಾದಿಗಳು ಮತ್ತು 'ಗ್ರೀನ್' ಗಳು – ಸೇರಿದಂತೆ ರಾಜಕೀಯ ವರ್ಣಪಟಲದ ಯುರೋಪಿಯನ್ ರಾಜಕಾರಣಿಗಳು, ಪ್ಯಾಲೆಸ್ಟೀನಿಯರನ್ನು 'ಅಮಾನವೀಯ' ಗೊಳಿಸುವ ಸಾಮೂಹಿಕ ಅಭಿಯಾನಕ್ಕೆ ಸೇರಿದ್ದಾರೆ. ಆದರೂ, ರಷ್ಯಾದ ಆಕ್ರಮಣದ ವಿರುದ್ಧದ ಹೋರಾಟದಲ್ಲಿ ಉಕ್ರೇನ್ ಗೆ ಬೆಂಬಲ ನೀಡುವಲ್ಲಿ ಇದೇ ವ್ಯಕ್ತಿಗಳು ಮುಂದೆ ಇದ್ದರು.

ಅವರ ಪ್ರಕಾರ, ಉಕ್ರೇನಿಯನ್ನರಿಗೆ ಪ್ರತಿರೋಧಿಸುವ ಹಕ್ಕಿದೆ, ಪ್ಯಾಲೆಸ್ಟೀನಿಯರಿಗೆ ಆ ಹಕ್ಕು ಇಲ್ಲ. ಉಕ್ರೇನಿಯನ್ನರು "ಸ್ವಾತಂತ್ರ್ಯ ಹೋರಾಟಗಾರರು", ಪ್ಯಾಲೆಸ್ಟೀನಿಯನ್ನರು "ಭಯೋತ್ಪಾದಕರು" ನಾಗರಿಕ ಮನೆಗಳು ಮತ್ತು ಮೂಲಸೌಕರ್ಯಗಳ ವಿವೇಚನೆಯಿಲ್ಲದ ಬಾಂಬ್ ದಾಳಿಯಲ್ಲಿ ಸತ್ತ ಉಕ್ರೇನಿಯನ್ ಜನ ಶೋಕಕ್ಕೆ ಯೋಗ್ಯರು, ಅಂತಹುದೇ ಭಾಂಬ್ ದಾಳಿಗಳಲ್ಲಿ ಸತ್ತ ಪ್ಯಾಲೇಸ್ಟಿನಿ ಜೀವಗಳನ್ನು ನಿರ್ಲಕ್ಷಿಸಬಹುದು – ಅಥವಾ ಇಸ್ರೇಲ್ ತನ್ನ "ತನ್ನನ್ನು ತಾನು ರಕ್ಷಿಸಿಕೊಳ್ಳುವ ಹಕ್ಕನ್ನು ಚಲಾಯಿಸುತ್ತಿದೆ" ಎಂದು ಕೆಟ್ಟದಾಗಿ ಸಮರ್ಥಿಸಬಹುದು. ಈ ಯುರೋಪಿಯನ್ ಗೋಸುಂಬೆತನ ನಿಜವಾಗಿಯೂ ಮಾರಕವಾಗಿದೆ.

ಯುರೋಪಿಯನ್ ನಾಯಕರು ಮತ್ತು ರಾಜಕಾರಣಿಗಳು ಇದೀಗ ನೈತಿಕ ನೆಲೆಯಲ್ಲಿ ಮಾತಾಡುತ್ತಿದ್ದಾರೆ ಮತ್ತು ಪ್ಯಾಲೆಸ್ಟೀನಿಯರು, "ಕ್ರೂರ ಭಯೋತ್ಪಾದಕರು" ಎಂದು ಲೇಬಲ್ ಮಾಡುತ್ತಿದ್ದಾರೆ. ವಿಶೇಷವಾಗಿ ಈಗಿನ ವಿದ್ಯಮಾನಗಳ ಪೂರ್ವೇತಿಹಾಸವನ್ನು ಪರಿಗಣಿಸಿದರೆ, ಇದು ನಿಜವಾಗಿಯೂ ಚೋದ್ಯದ ವಿಷಯ,

ಪ್ರಿಯ ಯುರೋಪಿಯನ್ನರೇ!

ನಿಮ್ಮ ಖಂಡದಲ್ಲಿ, ಶತಮಾನಗಳ ಕಾಲ ಕ್ರೂರ ಯೆಹೂದಿ–ವಿರೋಧಿ ಧೋರಣೆ ಕಾಡ್ಗಿಚ್ಚಿನಂತೆ ಹಬ್ಬಿತ್ತು. ಇದರ ಪರಿಣಾಮವಾಗಿ ಯುರೋಪಿಯನ್ ಯಹೂದಿಗಳ ರಕ್ತಸಿಕ್ತ ಹತ್ಯಾಕಾಂಡಗಳು, ಸಾಮೂಹಿಕ ಹತ್ಯೆಗಳು, ಉಚ್ಚಾಟನೆಗಳು, ಲೂಟಿ ಮತ್ತು ಕಿರುಕುಳ ಅವ್ಯಾಹತವಾಗಿ ನಡೆದಿತ್ತು. ಪ್ಯಾಲೆಸ್ಟೈನ್ ಗೆ ➚

ಸಾಮೂಹಿಕ ವಲಸೆ ಹೋಗಬೇಕೆಂದು ಯಹೂದಿ ಸಮುದಾಯದೊಳಗೆ ಒಂದು ಚಳುವಳಿ ಹೊರಹೊಮ್ಮಿದಾಗ, ಯುರೋಪಿಯನ್ ಯೆಹೂದ್ಯ ವಿರೋಧಿಗಳು ಅದನ್ನು ಪ್ರೋತ್ಸಾಹಿಸಿದರು.

ಅವರಲ್ಲಿ ಒಬ್ಬ, ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಆರ್ಥರ್ ಬಾಲ್ಫೋರ್ 1917 ರಲ್ಲಿ ಪ್ಯಾಲೆಸ್ತೈನ್ ನಲ್ಲಿ, ಸ್ಥಳೀಯ ಪ್ಯಾಲೇಸ್ಟಿನಿಯನ್ ಜನರ ಭೂಮಿಯ ಮೇಲೆ. ಯುರೋಪಿಯನ್ ಯಹೂದಿ ಜನರಿಗೆ ರಾಷ್ಟ್ರೀಯ ಮನೆ ಸ್ಥಾಪಿಸಲು ಬ್ರಿಟಿಷ್ ಸರ್ಕಾರ ಬೆಂಬಲಿಸುತ್ತದೆ ಎಂಬ ಪ್ರತಿಜ್ಞೆಗೆ ಸಹಿ ಹಾಕಿದರು, ಯುರೋಪಿಯನ್ ಕೊಲೆಗಾರ ಯೆಹೂದಿ-ವಿರೋಧದ ಶಿಖರವಾದ 'ಮಹಾ ಹತ್ಯಾಕಾಂಡ' ವನ್ನು ತಲುಪಿದಾಗ, ಯುರೋಪಿಯನ್ ರಾಷ್ಟ್ರಗಳು ವಿಶ್ವಸಂಸ್ಥೆಯ ಮತದಾನದಲ್ಲಿ ಇಸ್ರೇಲ್ ರಚನೆಗೆ ಸರ್ವಾನುಮತದಿಂದ ಬೆಂಬಲಿಸಿದವು. - ಇನ್ನೂ ವಸಾಹತುಶಾಹಿ ಆಳ್ವಿಕೆಯಲ್ಲಿದ್ದ ವಿಶ್ವದ ಅರ್ಧಕ್ಕಿಂತ ಹೆಚ್ಚು ದೇಶಗಳಿಗೆ ಮತ ಚಲಾಯಿಸಲು ಸಾಧ್ಯವಾಗಲಿಲ್ಲ.

ಸ್ಥಳೀಯ ಪ್ಯಾಲೇಸ್ಟಿನಿಯನ್ ಜನರನ್ನು ಯುರೋಪಿಯನ್ ಯೆಹೂದಿ-ವಿರೋಧಿ ಕ್ರೌರ್ಯಕ್ಕೆ ಬೆಲೆ ತೆರಲು ಬಯಸುತ್ತಾರೋ ಎಂದು ಕೇಳಲಿಲ್ಲ. ಮುಂದಿನ ವರ್ಷ, ಇಸ್ರೇಲಿ ಸೇನಾಪಡೆಗಳು ಜನಾಂಗೀಯ ಶುದ್ಧೀಕರಣಕ್ಕೆ ತೊಡಗಿ 7.5 ಲಕ್ಷಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರನ್ನು ತಮ್ಮ ತಾಯ್ನಾಡಿನಿಂದ ಹೊಡೆದೋಡಿಸಿದರು. ಇದನ್ನು ನಾವು 'ನಕ್ಬಾ ದುರಂತ' ಎಂದು ಕರೆಯುತ್ತೇವೆ.

ಅಮೆರಿಕನ್ ಬರಹಗಾರ ಜೇಮ್ಸ್ ಬಾಲ್ಡಿನ್ ಈ ವಾಸ್ತವವನ್ನು ಪ್ರತಿಬಿಂಬಿಸುವ 1979 ರ ಲೇಖನದಲ್ಲಿ ಸೂಕ್ತವಾಗಿ ಹೇಳಿದಂತೆ: "ಯಹೂದಿಗಳ ಉದ್ಧಾರಕ್ಕಾಗಿ ಇಸ್ರೇಲ್ ರಾಜ್ಯವನ್ನು ರಚಿಸಲಾಗಿಲ್ಲ; ಪಾಶ್ಚಿಮಾತ್ಯ ಹಿತಾಸಕ್ತಿಗಳ ಉದ್ಧಾರಕ್ಕಾಗಿ ಇದನ್ನು ರಚಿಸಲಾಗಿದೆ ಬ್ರಿಟಿಷ್ 'ವಿಭಜನೆ ಮತ್ತು ನಿಯಮ'ದ ನೀತಿಗೆ ಮತ್ತು ಯುರೋಪಿನ ತಪ್ಪಿತಸ್ಥ ಕ್ರಿಶ್ಚಿಯನ್ ಆತ್ಮಸಾಕ್ಷಿಗೆ ಪ್ಯಾಲೇಸ್ಟಿನಿಯರು ಮೂವತ್ತು ವರ್ಷಗಳಿಗಿಂತ ಹೆಚ್ಚು ಕಾಲ ಬೆಲೆ ತೆರುತ್ತಿದ್ದಾರೆ."

ಪ್ರಿಯ ಯುರೋಪಿಯನ್ನರೇ!

ಈ "ತಪ್ಪಿತಸ್ಥ ಕ್ರಿಶ್ಚಿಯನ್ ಆತ್ಮಸಾಕ್ಷಿ"ಗೆ ಈಗ 75 ವರ್ಷಗಳು,. ಪ್ಯಾಲೇಸ್ಟೀನಿನ ನಮಗೆ ಏನಾಗುತ್ತಿದೆ ಎಂಬುದಕ್ಕೆ ನಿಮಗೆ ಕಿಂಚಿತ್ತಾದರೂ ಅಪರಾಧಿ ಭಾವನೆ ಇದೆಯಾ ಎಂದು ನಾವು ಆಶ್ಚರ್ಯಪಡಬೇಕು.

ಪ್ಯಾಲೆಸ್ಟೀನಿನ ಮೇಲಿನ ಕ್ರೌರ್ಯವನ್ನು ವಿಮರ್ಶಾತ್ಮಕವಾಗಿ ನೋಡುವುದು ಅಷ್ಟು ಕಷ್ಟವಾಗಬಾರದು ಮತ್ತು ಅದು ಸರಿಯೇ ಎಂದು ನಿಮ್ಮನ್ನು ಕೇಳಿಕೊಳ್ಳಿ, ಇತಿಹಾಸ ಪುಸ್ತಕವನ್ನು ತೆರೆಯುವುದು ಮತ್ತು ಪ್ಯಾಲೆಸ್ತೈನ್ ನಲ್ಲಿ ಏನಾಗಿದೆ ಎಂಬುದರ ಬಗ್ಗೆ ಓದುವುದು ಮತ್ತು ಕಲಿಯುವುದು ಹಾಗೂ ಸ್ವ-ನಿರ್ಣಯ ಮತ್ತು ಮರಳುವಿಕೆಗಾಗಿ ನಮ್ಮ ಹೋರಾಟವನ್ನು ಅರ್ಥಮಾಡಿಕೊಳ್ಳುವುದು ಅಷ್ಟು ಕಷ್ಟವಲ್ಲ. ದಮನವನ್ನು ಪ್ರತಿರೋಧಿಸಲು, ಅತಿಕ್ರಮಣದಿಂದ ಮುಕ್ತರಾಗಲು, ನಮ್ಮ ತಾಯ್ನಾಡಿಗೆ ಮರಳಲು. ನಮ್ಮ ಹಕ್ಕುಗಳನ್ನು ಪುನರುಚ್ಚರಿಸುವ ವಿಶ್ವಸಂಸ್ಥೆಯ ಅಸಂಖ್ಯಾತ ನಿರ್ಣಯಗಳನ್ನು ಓದುವುದು ಕಷ್ಟವಾಗಬಾರದು.

ಮಾನವ ಹಕ್ಕುಗಳು, ಸಮಾನತೆ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು ಮತ್ತು ನಂತರ ವಲಸಿಗ ವಸಾಹತುಶಾಹಿ ಮತ್ತು ವರ್ಣಭೇದ ನೀತಿಯಲ್ಲಿ ತೊಡಗಿರುವ ದೇಶದ ಕ್ರೂರ ನೀತಿಗಳನ್ನು ಪ್ರಶ್ನಿಸುವಲ್ಲಿ ವಿಫಲವಾಗುವುದು ನಾಚಿಕೇಗೇಡಿನ ಸಂಗತಿಯಾಗಿದೆ.

ಯುದ್ಧದ ಮೊದಲ ಆರು ದಿನಗಳಲ್ಲಿ, ಇಸ್ರೇಲ್ ಜನನಿಬಿಡ ಗಾಜಾ ಪಟ್ಟಿಯ ಮೇಲೆ 6,000 ಬಾಂಬ್ ಗಳನ್ನು ಹಾಕಿತು. ಅದು ತಜ್ಞರ ಪ್ರಕಾರ, ಅಣು ಬಾಂಬ್ ನ ಕಾಲು ಭಾಗಕ್ಕೆ ಸಮಾನವಾಗಿರುತ್ತದೆ. ಪ್ಯಾಲೇಸ್ಟಿನಿಯನ್ ಆರೋಗ್ಯ ಸಚಿವಾಲಯದ ಪ್ರಕಾರ, 1,000 ಕ್ಕೂ ಹೆಚ್ಚು ಮಕ್ಕಳು ಸೇರಿದಂತೆ 3,000 ಕ್ಕೂ ಹೆಚ್ಚು ಜನರು ಕೊಲ್ಲಲ್ಪಟ್ಟರು; ಆದರೆ ನಿಜವಾದ ಸಾವು ನಮಗೆ ನಿಜವಾಗಿಯೂ ತಿಳಿದಿಲ್ಲ, ಅನೇಕ ಜನರು ಕಲ್ಲುಮಣ್ಣುಗಳ ಕೆಳಗೆ ಉಳಿದಿದ್ದಾರೆ, ಅವರನ್ನು ಹೊರಗೆ ಎಳೆಯಲು ಯಾರೂ ಇಲ್ಲ.

ಕಳೆದ ವಾರ, ಇಸ್ರೇಲ್ ಗಾಜಾದ 1.1 ದಶಲಕ್ಷಕ್ಕೂ ಹೆಚ್ಚು ಪ್ಯಾಲೆಸ್ಟೀನಿಯರಿಗೆ ನಿರಂತರ ಬಾಂಬ್ ದಾಳಿಯ ನಡುವೆ ತಮ್ಮ ಮನೆಗಳನ್ನು ಸ್ಥಳಾಂತರಿಸುವಂತೆ ಆದೇಶಿಸಿತು. ಪ್ಯಾಲೆಸ್ಟೀನಿಯರು ತಮ್ಮ ಮನೆಗಳನ್ನು ತೊರೆದು ಭ್ರಾಂತಿಯ ಸುರಕ್ಷತೆಯ ಕಡೆಗೆ ಕಲ್ಲುಮಣ್ಣುಗಳ ಮೂಲಕ ಸಾಗುವ ಚಿತ್ರಗಳು ನಮಗೆ ನಕ್ಬಾವನ್ನು ನೆನಪಿಸಿವೆ. ಅವರಲ್ಲಿ ನನ್ನ ಕುಟುಂಬವಿದೆ, ಅವರು ನಮ್ಮ ಭಾಗಶಃ ಹಾನಿಗೊಳಗಾದ ಮನೆಯನ್ನು, ತಮ್ಮ ಜೀವಮಾನ ಕಳೆದ ಕಟ್ಟಡವನ್ನು ಭಾರವಾದ ಹೃದಯದಿಂದ ಬಿಟ್ಟರು.

ನಾನು ಈ ಸಾಲುಗಳನ್ನು ಬರೆಯುವಾಗ, ನನ್ನ ಕುಟುಂಬದ ಸಾವಿನ ಬಗ್ಗೆ ಯಾವುದೇ ಕ್ಷಣದಲ್ಲಿ ಸಂದೇಶ ಬರಬಹುದೆಂದು ನಾನು ಹೆದರುತ್ತೇನೆ: ಇಸ್ಮಾಯಿಲ್ ನನ್ನ ತಂದೆ, ಹ್ಯಾಲಿಮಾ ನನ್ನ



ತಾಯಿ, ಮೊಹಮ್ಮದ್ ನನ್ನ ಸಹೋದರ, ಅಸ್ಮಾ ನನ್ನ ಅತ್ತಿಗೆ, ಮತ್ತು ನನ್ನ ಅತ್ಯಂತ ಸುಂದರವಾದ ಸೊಸೆಯರಾದ ಎಲಿಯಾ (6 ವರ್ಷ) ಮತ್ತು ನಯಾ (2 ತಿಂಗಳು).

ನೀವು ಅವರ ಹೆಸರುಗಳನ್ನು ನೆನಪಿಟ್ಟುಕೊಳ್ಳಬೇಕೆಂದು ನಾನು ಬಯಸುತ್ತೇನೆ. ಅವರು ಕೊಲ್ಲಲ್ಪಟ್ಟರೆ ನಾನು ಅವರನ್ನು ಕೇವಲ ಸಂಖ್ಯೆಗಳಾಗಲು ಬಿಡುವುದಿಲ್ಲ.

ಪ್ರಿಯ ಯುರೋಪಿಯನ್ನರೇ!

ಇಸ್ರೇಲಿ ಅಪರಾಧಗಳಲ್ಲಿ ನಿಮ್ಮ ಮೌನ ಮತ್ತು ಶಾಮೀಲು, ಬೆಂಬಲ ಇಲ್ಲದಿದ್ದರೆ ಮತ್ತು ನೀವು ಆಯ್ಕೆ ಮಾಡಿದ ಯುರೋಪಿಯನ್ ಸರ್ಕಾರಗಳಿಂದ ಇಸ್ರೇಲ್ ಪಡೆಯುವ ಆರ್ಥಿಕ ಮತ್ತು ರಾಜಕೀಯ ಬೆಂಬಲವಿಲ್ಲದಿದ್ದರೆ, ನಾನು ಇಂದು ನನ್ನ ಕುಟುಂಬದವರ ಸಾವಿಗೆ ಹೆದರುತ್ತಿರಲಿಲ್ಲ.

ಪ್ಯಾಲೆಸ್ತೈನ್ ವಿಮೋಚನೆಗೊಳ್ಳುವ ದಿನ ಬರುತ್ತದೆ. ಅದು ಲೆಕ್ಕಾಚಾರದ ದಿನವಾಗಿರುತ್ತದೆ. ಇಸ್ರೇಲಿ ಆಕ್ರಮಣ ಮತ್ತು ವರ್ಣಭೇದ ನೀತಿಯು ಪ್ಯಾಲೆಸ್ಟೀನಿಯರನ್ನು ಪುಡಿ ಮಾಡುತ್ತಿರುವಾಗ, ನೀವು ಏನು ಮಾಡುತ್ತಿದ್ದಿರಿ ಎಂದು ನಿಮ್ಮನ್ನು ಕೇಳಲಾಗುತ್ತದೆ? ಆಗ ನಿಮ್ಮ ನಿಷ್ಕ್ರಿಯತೆಯ ಬಗ್ಗೆ ನೀವು ಏನು ಹೇಳುತ್ತೀರಿ?

ಇತಿಹಾಸದ ತಪ್ಪು ಬದಿಯಲ್ಲಿರುವ ಅವಮಾನದಿಂದ ತಪ್ಪಿಸಿಕೊಳ್ಳಲು ಇನ್ನೂ ಸಮಯವಿದೆ. ಬೆಲ್ ಹುಕ್ಸ್ ಹೇಳಿದಂತೆ, "ಸೋದರತೆ ಕ್ರಿಯಾಪದ" ವಾಗಿದೆ. ಗಾಜಾದಲ್ಲಿ ನಡೆದ ನರಮೇಧವನ್ನು ತಡೆಯಲು ನೀವು ಈಗ ತೊಡಗುತ್ತೀರಾ??

ಮೆಕಾರ್ಥಿವಾದಿ ಬೇಟೆಯ ಜಾಗತೀಕರಣ -ಚೀನಾ ಗುಮ್ಮದ ಆವಾಹನೆ.......

ಪುಟ 13 ರಿಂದ

ಪ್ರಯತ್ನಿಸಿದರೂ ಸಹ- ಸಾಮ್ರಾಜ್ಯಶಾಹಿ ವಿರೋಧಿಗಳು, ಯುದ್ಧ-ವಿರೋಧಿಗಳು ಹಾಗೂ ಎಡಪಂಥೀಯ ಗುಂಪುಗಳ ಮೇಲೆ ಮೆಕಾರ್ಥಿ ರೀತಿಯ ಬೇಟೆಯನ್ನು ನಿಸ್ಸಂದೇಹವಾಗಿ ಪ್ರೋತ್ಸಾಹಿಸಿದೆ ಮತ್ತು ಆ ಮೂಲಕ ಸಮಾಜದಲ್ಲಿ ಫ್ಯಾಸಿಸ್ಟ್ ಶಕ್ತಿಗಳನ್ನು ಬಲಪಡಿಸುತ್ತದೆ ಎಂಬ ಅಂಶವು ಮೊದಲನೆಯ ರೀತಿಯ ದ್ವಂದ್ವವನ್ನು ಸ್ಪಷ್ಟಪಡಿಸುತ್ತದೆ.

ಫ್ಯಾಸಿಸ್ಟ್-ತೆರನ ಶಕ್ತಿಗಳು ಆಳ್ವಿಕೆ ನಡೆಸುವ ಸಮಯದಲ್ಲಿ ಎಡಪಂಥೀಯ ಮತ್ತು ಪ್ರಜಾಸತ್ತಾತ್ಮಕ ಚಳುವಳಿಗಳನ್ನು ದಮನಿಸಲು ಬಳಸುವ ಸಾಧನಗಳು, ಸಾಮಾನ್ಯವಾಗಿ, ಇವರಿಗಿಂತ ಮೊದಲು ಆಳ್ವಿಕೆ ನಡೆಸುತ್ತಿದ್ದ ಉದಾರವಾದಿ ಬಂಡವಾಳಶಾಹಿ ಶಕ್ತಿಗಳಿಂದ ರೂಪುಗೊಂಡಿರುತ್ತವೆ. ಈ ಸಂದರ್ಭದಲ್ಲಿ, ಭಾರತದಲ್ಲಿ ಮೋದಿ ಸರ್ಕಾರವು ದುರುಪಯೋಗಪಡಿಸುತ್ತಿರುವ ಮತ್ತು ಭಯಾನಕವಾದ, ಯುಎಪಿಎ ಕಾಯ್ದೆ, ಹಿಂದೆ ಆಳ್ವಿಕೆ ನಡೆಸುತ್ತಿದ್ದ ಮನಮೋಹನ್ ಸಿಂಗ್ ಅವರ ಉದಾರವಾದಿ ಬಂಡವಾಳಶಾಹಿ ಸರ್ಕಾರವು ರೂಪಿಸಿತ್ತು ಎಂಬುದನ್ನು ಗಮನಿಸಬಹುದು. ವ್ಯತ್ಯಾಸವೆಂದರೆ, ಮೋದಿ ಸರ್ಕಾರವು ಈ ಕಾಯ್ದೆಗೆ ತಿದ್ದುಪಡಿ ಮಾಡಿ ಅದನ್ನು ಕೇವಲ ಸಂಘಟನೆಗಳ ವಿರುದ್ಧ ಮಾತ್ರವಲ್ಲ, ವ್ಯಕ್ತಿಗಳ ವಿರುದ್ಧವೂ ಬಳಸುತ್ತಿದೆ. ಕಮ್ಯುನಿಸಂ-ವಿರೋಧಿ ಉದಾರವಾದ ಮತ್ತು ಫ್ಯಾಸಿಸ್ಟ್ ದಬ್ಬಾಳಿಕೆ ಇವುಗಳ ನಡುವಿನ ಈ ದ್ವಂದ್ವವನ್ನು ಮರೆಯಲಾಗದು.

ವಿರೋಧಿಗಳನ್ನು ಹಣಿಯುವ ಮೆಕಾರ್ಥಿಸಂ ರೀತಿಯ ಕಾರ್ಯಾಚರಣೆಯತ್ತ ದೃಷ್ಟಿ ಹೊರಳಿಸಿದ ಅಮೆರಿಕದ ಉದಾರವಾದಿಗಳ ಇಂಗಿತವನ್ನು ಭಾರತದ ಫ್ಯಾಸಿಸ್ಟ್-ತೆರನ ಸರ್ಕಾರವು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದು ಅಂಶವು ಎರಡನೇ ರೀತಿಯ ದ್ವಂದ್ವವನ್ನು ಸ್ಪಷ್ಟಪಡಿಸುತ್ತದೆ. ಮೆಕಾರ್ಥಿಸಂ ಎಂಬುದು ರಾಜಕೀಯ ವಿರೋಧಿಗಳನ್ನು ಬಗ್ಗುಬಡಿಯುವ ಒಂದು ರೀತಿಯ ಕಾರ್ಯಾಚರಣೆ. ಅದರ ಬಗ್ಗೆ ಸಂಕ್ಷಿಪ್ತವಾಗಿ ಹೇಳುವುದಾದರೆ, ಎಡ ಪಂಥೀಯ ವ್ಯಕ್ತಿಗಳ ಮೇಲೆ ದೇಶದ್ರೋಹ, ಗೂಢಚರ್ಯೆ, ವಿಧ್ವಂಸಕ ಕೃತ್ಯ ಮುಂತಾದ ಸುಳ್ಳು ಆರೋಪ ಹೊರಿಸಿ, ಅವುಗಳನ್ನು ವ್ಯಾಪಕವಾಗಿ ಪ್ರಚುರಪಡಿಸುವುದು, ತನಿಖಾ ಸಂಸ್ಥೆಗಳನ್ನು ಅವರ ಮೇಲೆ ಛೂ ಬಿಟ್ಟು ಅವರಿಗೆ ಕಿರುಕುಳ ಕೊಡುವುದು ಮುಂತಾದ ದಮನಕಾರಿ ಕ್ರಮಗಳನ್ನು ಕೈಗೊಳ್ಳುವುದು. ಈ ರೀತಿಯ ಕಾರ್ಯಾಚರಣೆಗೆ ನಾಂದಿ ಹಾಡಿದ ವ್ಯಕ್ತಿಯೇ ಜೋಸೆಫ್ ಮೆಕಾರ್ಥಿ. ಆತ ಅಮೆರಿಕಾದಲ್ಲಿ ಒಬ್ಬ ಸೆನೆಟರ್ ಆಗಿದ್ದ. ಈ ವ್ಯಕ್ತಿಯು ಅಮೆರಿಕದಲ್ಲಿ 'ಕೆಂಪು ಭೀತಿ'(ಕಮ್ಯುನಿಸಂ ಹರಡುತ್ತಿದೆಯೆಂಬ ಭೀತಿ)ಯನ್ನು 1950ರ ದಶಕದಲ್ಲಿ ಸೃಷ್ಟಿಸಿದ್ದ. ಮೆಕಾರ್ಥಿಸಂ ಜಾಗತೀಕರಣಗೊಳ್ಳುವ ಈ ವಿದ್ಯಮಾನವು ಪ್ರಸಕ್ತ ಜಾಗತೀಕರಣದ ಯುಗದ ಒಂದು ನಿರ್ದಿಷ್ಟ ಸಂಗತಿ.

ಬ್ರಿಟನ್‌ನಲ್ಲಿ 'ಕೆಂಪು-ಭೀತಿ'ಯನ್ನು ಸೃಷ್ಟಿಸಲು 1924ರಲ್ಲಿ ಕಮ್ಯೂನಿಸ್ಟ್ ಇಂಟರ್‌ನ್ಯಾಷನಲ್‌ನ ಅಧ್ಯಕ್ಷ ಜಿನೋವಿಯೆವ್ ಅವರ ಹೆಸರಿನಲ್ಲಿ ಸೃಷ್ಟಿಸಿದ ಒಂದು ನಕಲಿ ಪತ್ರವನ್ನು ಬಳಕೆಮಾಡಿಕೊಳ್ಳಲಾಗಿತ್ತು. ಅದು ರಾಮ್ಸೆ ಮ್ಯಾಕ್ಡೊನಾಲ್ಡ್ ನೇತೃತ್ವದ ಬ್ರಿಟನ್ನಿನ ಮೊದಲ ಲೇಬರ್ ಸರ್ಕಾರದ ಸೋಲಿಗೆ ಕಾರಣವಾಗಿತ್ತು. ಮೂಲಭೂತವಾಗಿ ಅದು ಬ್ರಿಟಿಷ್ ವಿದ್ಯಮಾನವಾಗಿತ್ತು. ಅಂತೆಯೇ, 1950ರ ದಶಕದಲ್ಲಿ ಸೆನೆಟರ್ ಮೆಕಾರ್ಥಿ ಸೃಷ್ಟಿಸಿದ್ದ ಕಮ್ಯೂನಿಸಂ ಭೀತಿ ಮತ್ತು ಆ ಸಂದರ್ಭದಲ್ಲಿ ಕೈಗೊಂಡ ದಮನಕಾರಿ ಕ್ರಮಗಳು ಅಮೇರಿಕದ ಸಮಾಜದ ಮೇಲೆ ಅಳಿಸಲಾಗದ ಛಾಪು ಮೂಡಿಸಿದರೂ ಸಹ, ಮೂಲಭೂತವಾಗಿ ಅದು ಅಮೇರಿಕನ್ ವಿದ್ಯಮಾನವಾಗಿತ್ತು ಮತ್ತು ಜಾಗತಿಕ ಮಟ್ಟದಲ್ಲಿ ಅದು ಹೆಚ್ಚು ಪರಿಣಾಮ ಬೀರಲಿಲ್ಲ.

ಆದರೆ ಇಂದಿನ ಜಾಗತೀಕರಣದ ದಿನಮಾನಗಳಲ್ಲಿ, ಈ ರೀತಿಯಲ್ಲಿ "ಸೃಷ್ಟಿಸಿದ" ಭೀತಿಯು ಅದನ್ನು ಸೃಷ್ಟಿಸಿದ ದೇಶಕ್ಕಷ್ಟೇ ಸೀಮಿತವಾಗಿ ಉಳಿಯುವುದಿಲ್ಲ. ವಿಶ್ವದ ಇತರ ಭಾಗಗಳಲ್ಲಿ ಅದನ್ನು ದುರ್ಬಳಕೆಮಾಡಿಕೊಳ್ಳಲಾಗುತ್ತದೆ. ತನ್ನ ಲೇಖನವು ಸಿಂಘಂ ವಿರುದ್ಧವಾಗಲಿ ಅಥವಾ ಅವರು ಕೊಡುಗೆ ನೀಡಿದ ಸಂಸ್ಥೆಗಳ ವಿರುದ್ಧವಾಗಲಿ ಶಿಕ್ಷಾರ್ಹವಾದ ಯಾವ ಆರೋಪವನ್ನೂ ಮಾಡಿಲ್ಲ ಎಂದು ನ್ಯೂಯಾರ್ಕ್ ಟೈಮ್ಸ್ ಹೇಳಬಹುದು. ಆದರೆ, ಈ ಲೇಖನವು ವಿಶ್ವ ಕಣ್ಣೋಟ ಹೊಂದಿರುವ ಪ್ರಗತಿಪರರ, 'ಅಧಿಕಾರಸ್ಥರ ಮುಖಕ್ಕೆ ಸತ್ಯ' ಹೇಳುವ ಧೈರ್ಯವನ್ನು ಹೊಂದಿರುವ ಮತ್ತು ಪ್ರಜಾಪ್ರಭುತ್ವದ ಮನೋಭಾವವನ್ನು ಜೀವಂತವಾಗಿಡಲು ಶ್ರಮಿಸುವ ವ್ಯಕ್ತಿಗಳ ವಿರುದ್ಧ ಭಯಾನಕ ಪರಿಣಾಮ ಬೀರುತ್ತದೆ. ಯುಎಪಿಎಯಂತಹ ಕಠಿಣ ಕಾಯ್ದೆಯನ್ನು ಉಡಾಫೆಯಾಗಿ ಜಾರಿ ಮಾಡುವ ಭಾರತದಂತಹ ಮೂರನೇ ಜಗತ್ತಿನ ಯಾವುದೇ ದೇಶದಲ್ಲಿ ಇಂತಹ ಲೇಖನ ಬಳಕೆಯಾಗಬಹುದು. ವಾಸ್ತವವಾಗಿ, ಮೋದಿ ಸರ್ಕಾರ ಈ ಲೇಖನವನ್ನು ಬಳಸಿಕೊಂಡಿದೆ. ನ್ಯೂಸ್‌ಕ್ಲಿಕ್ ಸ್ಥಾಪಕ ಪುರಕಾಯಸ್ಥ ಮತ್ತು ಅಮಿತ್ ಚಕ್ರವರ್ತಿ ಅವರನ್ನು ಯುಎಪಿಎ ಅಡಿಯಲ್ಲಿ ಬಂಧಿಸಿದೆ. ಅವರ ಮೇಲೆ ತನಿಖಾ ಏಜನ್ಸಿಗಳನ್ನು ಛೂ ಬಿಟ್ಟಿದೆ, ಭಯೋತ್ಪಾದನೆಯ ಆರೋಪವನ್ನು ಹೊರಿಸಿದೆ. ಮತ್ತು ಪತ್ರಿಕೆಯ ಉದ್ಯೋಗಿಗಳಿಗೂ ಕಿರುಕುಳ ನೀಡಿದೆ. ಸಮಕಾಲೀನ ಯುಗದಲ್ಲಿ ಈ ಲೇಖನದ ಪರಿಣಾಮಗಳ ಬಗ್ಗೆ ನ್ಯೂಯಾರ್ಕ್ ಟೈಮ್ಸ್ ಕುರುಡಾಗುವುದು ಸಾಧ್ಯವಿಲ್ಲ. ಆದಾಗ್ಯೂ, ಅಂತಹ ಒಂದು ಲೇಖನವನ್ನು ಪ್ರಕಟಿಸಲು ಅದು ಮುಂದಾಯಿತು ಎಂಬುದು ಸಮಕಾಲೀನ ಪಾಶ್ಚಾತ್ಯ ಉದಾರವಾದದ ಬಗ್ಗೆ ಒಂದು ವಿಷಾದದ ವ್ಯಾಖ್ಯಾನವಾಗುತ್ತದೆ.

ಪ್ರಸಕ್ತ ಯುಗದಲ್ಲಿ ಮೆಕಾರ್ಥಿಸಂ, ಚೀನಾ ಗುಮ್ಮವನ್ನು ಆವಾಹಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಭಾರತ ಭೂಪ್ರದೇಶದ ಒಂದು ಇಂಚು ಭೂಮಿಯನ್ನೂ ಸಹ ಚೀನಾ ಆಕ್ರಮಿಸಿಕೊಂಡಿಲ್ಲ ಎಂದು ಪಟ್ಟು ಹಿಡಿದು ಸಾಧಿಸುವ ಮೋದಿ ಸರ್ಕಾರವು, ಈ ಆಕ್ರಮಣದ ಬಗ್ಗೆ ಬಂದ ವರದಿಗಳಿಂದಾಗಿ ಸೃಷ್ಟಿಯಾಗಿರುವ ಚೀನಾ ವಿರೋಧಿ ಭಾವನೆಯನ್ನು ತಣಿಸಲು, ಮೆಕಾರ್ಥಿಸಂ ರೀತಿಯಲ್ಲಿ, ದೇಶದಲ್ಲಿ ಅಳಿದುಳಿದ ಸ್ವತಂತ್ರ ಮಾಧ್ಯಮವನ್ನು ಗುರಿಯಾಗಿಸಲು ಪ್ರಯತ್ನಿಸುತ್ತದೆ.

ಉದಾರವಾದವು ನಿಜಕ್ಕೂ ಫ್ಯಾಸಿಸ್ಟ್-ವಿರೋಧಿಯಾಗಬೇಕಾದರೆ, ಆಗ, ಕೆಂಪು ಭೀತಿ ಸೃಷ್ಟಿಸುವ ಪ್ರವೃತ್ತಿಯನ್ನು, ಅದರಲ್ಲೂ ಮುಖ್ಯವಾಗಿ ಮೆಕಾರ್ಥಿಸಂ ಒಲವನ್ನು ಅದು ತ್ಯಜಿಸಬೇಕಾಗುತ್ತದೆ. ವಿಶೇಷವಾಗಿ, ಪ್ರಸ್ತುತ ಯುಗದಲ್ಲಿ ಮೆಕಾರ್ಥಿಸಂ ವೇಗವಾಗಿ ಜಾಗತೀಕರಣಗೊಳ್ಳುವ ಪ್ರವೃತ್ತಿಯನ್ನು ಹೊಂದಿರುವ ಮತ್ತು ವಿಶ್ವ ಬಂಡವಾಳಶಾಹಿ ಬಿಕ್ಕಟ್ಟು ವಿಶ್ವದ ಎಲ್ಲೆಡೆ ಫ್ಯಾಸಿಸಂನ ಬೆಳವಣಿಗೆಗೆ ಫಲವತ್ತಾದ ನೆಲವನ್ನು ಹದಗೊಳಿಸಿರುವ ಸಂದರ್ಭದಲ್ಲಿ, ಇಂಥಹ ಮೆಕಾರ್ಥಿ ಶೈಲಿಯ ಬೇಟೆಯ ವಿಧಾನಗಳಿಂದ ಅದು ಪೋಷಣೆ ಪಡೆಯಬಹುದಾಗಿರುವ ಸಂದರ್ಭದಲ್ಲಿ ಅದು ಅಗತ್ಯವಾಗಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE October 23-29, 2023 Price: Rs. 10/- Date of Publication: 20 October 2023 RNI No. KARKAN /2006/17926 Posted on 21-10-2023
Posted at BG PSO, BG - 560026 **Posted at Periodical Rate -** Rs. 2

ದುರ್ಬಲರಿಗಾಗಿ ತುಡಿದ ಜಮೀನ್ದಾರ ಕ್ರಷ್ಣ ಶೆಟ್ಟರ ಬದುಕು

ಪ್ರಮೋದ್ ಕುಮಾರ ರೈಯವರ ಕೃತಿ

'ಸಮಾನತೆಗಾಗಿ ಸಂಘರ್ಷ'

ಬಾಬು ಪಿಲಾರ್

ಇತ್ತೀಚೆಗೆ ಮಂಗಳೂರಿನಲ್ಲಿ ಬಿಡುಗಡೆಗೊಂಡ "ಸಮಾನತೆಗಾಗಿ ಸಂಘರ್ಷ" – ಎ.ಕೃಷ್ಣ ಶೆಟ್ಟಿಯವರ ಜೀವನ ಗಾಥೆಯ ಗ್ರಂಥ ರಚನೆಯಲ್ಲಿ ಇಳಂತಾಜೆ ಪ್ರಮೋದ್ ಕುಮಾರ್ ರೈಯವರು ವಿಶಿಷ್ಟ ರೀತಿಯ ಛಾಪನ್ನು ಮೂಡಿಸಿದ್ದಾರೆ.


ಈ ಗ್ರಂಥ ರಚಿಸಿದ ಪ್ರಮೋದ್ ರೈಯವರ ಸಾಧನೆ ಗಮನಾರ್ಹವಾದುದು. ಸರಿಸುಮಾರು ಐದು ದಶಕಗಳ ಹಿಂದೆ ಅಸ್ತಂಗತರಾಗಿರುವ ಕೃಷ್ಣಶೆಟ್ಟರ ಬಗ್ಗೆ ಮಾಹಿತಿ ಕಲೆ ಹಾಕುವುದು ಅಷ್ಟೇನು ಸುಲಭಸಾಧ್ಯ ವಿಚಾರವಲ್ಲ.. ಅಷ್ಟು ಮಾತ್ರವಲ್ಲದೆ ಇಂದಿಗೆ ಅದು ಪ್ರಸ್ತುತವಾಗಬಲ್ಲುದೇ ಎಂಬ ಚಿಂತೆಯೂ ಕಾಡುವುದು ಸಹಜ.

ಕೃಷ್ಣ ಶೆಟ್ಟರು ತನ್ನ ಜೀವನದುದ್ದಕ್ಕೂ ನಡೆಸಿರುವ ರೈತಪರ ಕಾರ್ಮಿಕ ಪರ ಹೋರಾಟಗಳಾಗಲೀ ಅಥವಾ ತಾನು ಭಾಗಿಯಾದ ಸ್ವಾತಂತ್ರ್ಯ ಚಳವಳಿಗಳಾಗಲೀ ಅವೆಲ್ಲವೂ ವಿಮೋಚನೆಯ ಹಾದಿಯಲ್ಲಿ ತನ್ನ ಕರ್ತವ್ಯದ ಭಾಗವೆಂದೇ ಅವರು ಬಗೆದಿದ್ದರು. ಆದ್ದರಿಂದಲೇ ಅವನ್ನೆಲ್ಲ ದಾಖಲಿಸಿಡಬೇಕೆಂಬ ಯೋಚನೆಯೇ ಅವರ ಬಳಿ ಸುಳಿದಿರಲಿಲ್ಲ. ಪ್ರಮೋದ್ ರೈಯವರನ್ನು ಮದುವೆ ಮಾಡಿಕೊಂಡ ಕ್ರಷ್ಣ ಶೆಟ್ಟರ ಮಗಳು ಶೋಭಾ ಅವರಿಗೂ ತನ್ನ ತಂದೆಯ ಬಗ್ಗೆ ಹೆಚ್ಚು ಮಾಹಿತಿ ತಿಳಿಯಲು ಸಾಧ್ಯವಾಗಿರಲಿಲ್ಲ. ಆಗ ಅವರಿನ್ನೂ ಚಿಕ್ಕವರಿದ್ದರು.

> **ಶ್ರೀಮಂತ ಜಮೀನ್ದಾರನಾಗಿಯೂ ರೈತ ಪರ ಕಾಳಜಿ ವಹಿಸಿ ರೈತ ಕಾರ್ಮಿಕರಿಗಾಗಿಯೇ ತನ್ನ ಬದುಕಿನ ಪ್ರತಿ ಕ್ಷಣವನ್ನು ಸವೆಸಿದ್ದ ಸಂಗಾತಿ ಎ ಕೃಷ್ಣ ಶೆಟ್ಟಿ ಅವರ ವ್ಯಕ್ತಿತ್ವ ಮತ್ತು ನಾಯಕತ್ವದ ಬಗ್ಗೆ ಅಲ್ಪ ಮಾತ್ರವೇ ತಿಳಿದುಕೊಂಡಿದ್ದ ರೈ ಅವರು ಈ ಪುಸ್ತಕದಲ್ಲಿ ದಾಖಲಿಸಿರುವ ಶೆಟ್ಟರ ಬಗೆಗಿನ ಅಷ್ಟೊಂದು ಮಾಹಿತಿಗಳನ್ನು ಕಲೆ ಹಾಕಲು ಏಳೆಂಟು ವರ್ಷಗಳಿಂದ ಶ್ರಮಪಟ್ಟಿದ್ದಾರೆ.**

ಹಾಗಿದ್ದರೂ ಎ. ಕೃಷ್ಣ ಶೆಟ್ಟಿಯವರ ತ್ಯಾಗಮಯ ಜೀವನದ ಪುಟಗಳು ಅವರ ಬದುಕಿನ ಅಂತ್ಯದೊಂದಿಗೆ ಇನ್ನಿಲ್ಲವಾಗಬಾರದೆಂಬ ಸದುದ್ದೇಶಕ್ಕಾಗಿಯೇ ಪ್ರಮೋದ್ ಕುಮಾರ್ ರೈಯವರು ಈ ಗ್ರಂಥ ರಚನೆಯ ಸಾಹಸಕ್ಕೆ ಕೈ ಹಾಕಿ ವಿಷಯ ಸಂಗ್ರಹದಲ್ಲಿ ದೊಡ್ಡ ಮಟ್ಟಿನ ಸಾಧನೆಯನ್ನೇ ಮಾಡಿದ್ದಾರೆ ಎನ್ನಬಹುದು. ಈ ಸಾಧನೆಯಲ್ಲಿ ಅವರು ಯಶಸ್ಸನ್ನು ಗಳಿಸಿದ್ದಾರೆ ಎಂಬುದು ಸ್ತುತ್ಯಾರ್ಹ.

ಒಬ್ಬ ಶ್ರೀಮಂತ ಜಮೀನ್ದಾರನಾಗಿಯೂ ರೈತ ಪರ ಕಾಳಜಿ ವಹಿಸಿ ರೈತ ಕಾರ್ಮಿಕರಿಗಾಗಿಯೇ ತನ್ನ ಬದುಕಿನ ಪ್ರತೀಕ್ಷಣವನ್ನೂ ಸವೆಸಿದ್ದ ಸಂಗಾತಿ ಎ. ಕ್ರಷ್ಣ ಶೆಟ್ಟಿಯವರ ವ್ಯಕ್ತಿತ್ವ ಮತ್ತು ನಾಯಕತ್ವದ ಬಗ್ಗೆ ಅಲ್ಪ ಮಾತ್ರವೇ ತಿಳಿದುಕೊಂಡಿದ್ದ ರೈಯವರು ಈ ಪುಸ್ತಕದಲ್ಲಿ ದಾಖಲಿಸಿರುವ ಶೆಟ್ಟರ ಬಗೆಗಿನ ಅಷ್ಟೊಂದು ಮಾಹಿತಿಗಳನ್ನು ಕಲೆಹಾಕಲು ಏಳೆಂಟು ವರ್ಷಗಳಿಂದ ಶ್ರಮಪಟ್ಟಿದ್ದಾರೆ. ಇಲ್ಲಿ ಮಾಹಿತಿ ನೀಡಿದವರ ಪೈಕಿ ಮೂರ್ನಾಲ್ಕು ಮಂದಿ ನಾಲ್ಕೈದು ವರ್ಷಗಳಿಂದೀಚೆಗೆ ಅಗಲಿದವರಿದ್ದಾರೆ.



ರೈಯವರು ಹೇಳುವಂತೆ ಕೃಷ್ಣಶೆಟ್ಟಿಯವರಿಗೆ ತನ್ನ ತಂದೆ ಜತ್ತಪ್ಪ ರೈಯವರೊಂದಿಗೆ ಸಂಪರ್ಕವಿತ್ತು. ಕೆಲವೊಂದು ಸಂದರ್ಭಗಳಲ್ಲಿ ಶೆಟ್ಟರು ಜತ್ತಪ್ಪ ರೈಯವರ ಮನೆಗೆ ಬಂದು ರಾಜಕೀಯ ವಿಷಯಗಳನ್ನು ಚರ್ಚಿಸುತ್ತಿದ್ದರು. ಪ್ರಮೋದ್ ಕುಮಾರ ರೈಯವರು ಶೆಟ್ಟರ ಕೆಲವೊಂದು ಭಾಷಣಗಳನ್ನು ಕೇಳಿಸಿಕೊಂಡಿದ್ದರು. ಇಷ್ಟು ಮಾತ್ರವಲ್ಲದೆ ಶೆಟ್ಟರ ರಾಜಕೀಯದ ಒಳಹೊರಗನ್ನು ಹೆಚ್ಚು ತಿಳಿದವರಾಗಿರಲಿಲ್ಲ.

ಅವರ ಆಕರ್ಷಕ ದೇಹಪ್ರಕೃತಿಯು ಸದಾ ನೆನಪಲ್ಲಿ ಉಳಿಯುವಂತಿತ್ತು.

ತನ್ನ ತಂದೆಯೂ ಒಬ್ಬ ಸ್ವಾತಂತ್ರ್ಯಹೋರಾಟಗಾರ ಮತ್ತು ರೈತ ಪರ ಚಳವಳಿ ನಡೆಸಿದವರಾಗಿದ್ದರು. ಅವರು ಅಂದಿನ ಕಾಂಗ್ರೇಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಜನಪ್ರಿಯ ನಾಯಕರಾಗಿದ್ದರು. ಅವರ ಜೀವನ ಚರಿತ್ರೆಯನ್ನು ಬರೆದು ಪ್ರಕಟಿಸಬೇಕೆಂಬ ಪ್ರಯತ್ನದಲ್ಲಿ ಯಶಸ್ವಿ ಕಂಡ ಬಳಿಕ ಕೃಷ್ಣಶೆಟ್ಟರ ಜೀವನ ಚರಿತ್ರೆಯನ್ನು ಬರೆಯಬೇಕೆಂಬುದಾಗಿ ಹಲವಾರು ಜನಗಳಿಂದ ಒತ್ತಡ ಬಂತು. ತಂದೆಯವರ ಬಗ್ಗೆ ಬರೆಯಲು ಅವರು ಬರೆದಿಟ್ಟ ದಿನಚರಿಯಾದರು ಸಹಾಯಕ್ಕೆ ಬಂದಿತ್ತು. ಆದರೆ ಕೃಷ್ಣಶೆಟ್ಟರ ಬಗ್ಗೆ ಏನೊಂದು ಕ್ರೋಢೀಕೃತ ದಾಖಲೆಗಳಿಲ್ಲದೆ ಹೇಗೆಂದು ಬರೆಯಲಿ? ಎಂಬ ತಳಮಳವಿತ್ತು.


ಬೇಕು ಬೇಡಗಳೊಂದಿಗೆ ಒಂದೊಮ್ಮೆ ದ್ರಢ ನಿರ್ಧಾರಕ್ಕೆ ಬಂದು ಬರೆಯುವ ಪ್ರಯತ್ನಕ್ಕೆ ಕೈ ಹಚ್ಚಿದರು.

ತನ್ನ ಪಾಲಿನ ಆಸ್ತಿಯ ಭಾಗವನ್ನು ತ್ಯಾಗ ಮಾಡಿ ಸಮಾಜದ ದುರ್ಬಲ ವರ್ಗದ ಜನರಿಗಾಗಿ 'ರೈತ ಕಾರ್ಮಿಕರ ಏಳಿಗೆಗಾಗಿ ಅವಿಶ್ರಾಂತವಾಗಿ ದುಡಿದಿರುವ ಕೃಷ್ಣಶೆಟ್ಟರ ಬದುಕು ಚರಿತ್ರೆಯ ಪುಟಗಳಲ್ಲಿ ದಾಖಲಾಗಬೇಕು. ಅವರ ತ್ಯಾಗವು ಮುಂದಿನ ಪೀಳಿಗೆಗೆ ಸ್ಪೂರ್ತಿಯಾಗಬೇಕು' ಈ ಕಾರ್ಯದಲ್ಲಿ ಎಷ್ಟೇ ಕಷ್ಟವಾದರೂ ಸಾಧಿಸಬೇಕೆಂಬ ಛಲದಿಂದ ಮುಂದಡಿಯಿಟ್ಟರು. ಮತ್ತು ಹಿಡಿದ ಕಾರ್ಯವನ್ನು ಕರ್ತವ್ಯದ ನೆಲೆಯಲ್ಲಿ ಅವರು ಪೂರೈಸಿದ್ದಾರೆ ಕೂಡಾ.

ಕೃಷ್ಣಶೆಟ್ಟರನ್ನು ಕಂಡವರು, ಅವರೊಡನೆ ಒಡನಾಡಿದವರು ಅವರ ಬಗೆಗೆ ಕೇಳಿ ತಿಳಿದುಕೊಂಡವರು ಎಲ್ಲೆಲ್ಲಿ ಇದ್ದಾರೆಂಬ ಮಾಹಿತಿ ಅರಿತು ಅಲ್ಲೆಲ್ಲಾ ಓಡಾಡಿದ್ದಾರೆನ್ನುವುದಕ್ಕಿಂತಲೂ ಅಲೆದಾಡಿದ್ದಾರೆ ಎನ್ನಬಹುದು.

ಶೆಟ್ಟರನ್ನು ಒಡನಾಡಿದವರ ಪೈಕಿ ಸಿಪಿಐಎಂ ನಾಯಕ ಕೆ. ಆರ್. ಶ್ರೀಯಾನ್, ಇನ್ನೊಬ್ಬ ಹಿರಿಯರಾದ ಸಂಗಾತಿ ಕೇಶವ ರಾವ್ ಬಿ.ಕೆ. ಕೃಷ್ಣಪ್ಪ, ಯು.ಬಿ. ಲೋಕಯ್ಯ, ಮೋರ್ಲ ವೆಂಕಪ್ಪ ಶೆಟ್ಟಿ, ಪದ್ಮಾವತಿ ಕುತ್ತಾರು ಸೇರಿದಂತೆ ಸುಮಾರು ಮೂವತ್ತಕ್ಕೂ ಅಧಿಕ ಗಮನಾರ್ಹ ವ್ಯಕ್ತಿಗಳನ್ನು ಸಂಪರ್ಕಿಸಿದ್ದಾರೆ. ಹೋರಾಟಗಳಲ್ಲಿ ಜೋಡೆತ್ತಿನಂತೆ ಹೆಗಲು ಕೊಟ್ಟವರು ಇಂದಿಲ್ಲವಾದರೂ ಅವರ ಮಕ್ಕಳಾದ ಶ್ರೀನಿವಾಸ ಕಕ್ಕಿಲ್ಲಾಯ, ಯಶವಂತ ಮರೋಳಿ, ಪಿ.ವಿ. ಸೋನ್ಸ್, ಮಾಧುರಿರಾವ್ ಮುಂತಾದವರನ್ನು ಸಂಪರ್ಕಿಸಿ ಮಾಹಿತಿ ಸಂಗ್ರಹಿಸಿದ್ದಾರೆ.

ರಾಜಕೀಯದಲ್ಲಿ ಉನ್ನತ ಸ್ಥಾನಗಳಿಗೇರಿರುವ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಮುಖ್ಯಮಂತ್ರಿಗಳಾದ ಎಂ.ವೀರಪ್ಪ ಮೊಯಿಲಿ, ಎಸ್.ಎಂ. ಕೃಷ್ಣ, ಮಾಜಿ ಮಂತ್ರಿಗಳಾದ ಬಿ.ಸುಬ್ಬಯ್ಯ ಶೆಟ್ಟಿ, ಎಂ.ಅಮರನಾಥ ಶೆಟ್ಟಿ, ಹಾಲಿ ವಿಧಾನಸಭಾಧ್ಯಕ್ಷರಾದ ಯು.ಟಿ. ಖಾದರ್, ಹೆಚ್.ಎಸ್. ದೊರೆಸ್ವಾಮಿ, ಸೇರಿದಂತೆ ಹಲವಾರು ರಾಜಕೀಯ ನಾಯಕರುಗಳನ್ನು ಹಾಗೂ ವಿದ್ವಾಂಸರಾದ ಅಮ್ರತ ಸೋಮೇಶ್ವರ ಡಾ.ಎ.ವಿ. ನಾವಡ, ಏರ್ಯ ಲಕ್ಷ್ಮೀನಾರಾಯಣ ಆಳ್ವ ಇನ್ನು ಕೆಲವಾರು ಸಾಹಿತಿಗಳನ್ನು ಭೇಟಿಯಾಗಿ ಕೃಷ್ಣಶೆಟ್ಟರ ಬಗ್ಗೆ ಅವರಿಗಿದ್ದ ಮಾಹಿತಿಗಳನ್ನು ಕಲೆ ಹಾಕಿದ್ದಾರೆ.



ತಾತ್ವಿಕ ವಿಚಾರದಲ್ಲಿ ಕಮ್ಯೂನಿಸಂನ್ನು ವಿರೋಧಿಸುವ ವ್ಯಕ್ತಿಗಳನ್ನು ಸಂಪರ್ಕಿಸಿ ಅವರಿಂದ ಕೃಷ್ಣ ಶೆಟ್ಟರ ಬಗೆಗಿನ ಸದಾಭಿಪ್ರಾಯವನ್ನು ಸಂಗ್ರಹಿಸಿರುವ ಪ್ರಮೋದ್ ರೈಗಳವರ ಪ್ರಯತ್ನವನ್ನು ಮೆಚ್ಚಲೇಬೇಕು.

ರೈಯವರ ಬರಹವು ಈ ಕಾಲಕ್ಕೆ ಪ್ರಸ್ತುತವಾಗುವಂತೆ ಉತ್ತಮ ರೀತಿಯಲ್ಲಿ ಜೋಡಿಸಿದ್ದಾರೆ. ಬೇರೆ ಬೇರೆ ವ್ಯಕ್ತಿಗಳ ಅಭಿಪ್ರಾಯಗಳನ್ನು ಹೆಣೆದಾಗ ಕೆಲವು ವಿಚಾರಗಳು ಪುನರಾವರ್ತನೆಯಾಗಿದೆ. ಆದರೂ ಶೆಟ್ಟರ ಬಗೆಗಿನ ಒಬ್ಬರಿಂದೊಬ್ಬರ ಮಾಹಿತಿಗಳು ಒಂದಕ್ಕೊಂದು ಪೂರಕವಾಗಿರುವುದನ್ನು ಅರ್ಥೈಸಿಕೊಳ್ಳಬಹುದು.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ತಳಮಟ್ಟದಿಂದ ಕಟ್ಟುವಲ್ಲಿ ಶ್ರಮಿಸಿದ ಮಹಾನ್ ನಾಯಕರುಗಳ ಪೈಕಿ ಎ. ಕೃಷ್ಣಶೆಟ್ಟರು ಒಬ್ಬರಾಗಿದ್ದರು.

ಸರಕಾರಿ ಅಧಿಕಾರಿಯಾಗಿದ್ದ ರೈಗಳು ಅಲ್ಲಿನ ಅವ್ಯವಸ್ಥೆ ವಿರುದ್ದ ಮನನೊಂದು ತನ್ನ ಹುದ್ದೆಗೂ ರಾಜೀನಾಮೆ ಕೊಟ್ಟು ಕ್ರಷಿಯನ್ನು ಪ್ರೀತಿಸಿ ಕಾಯಕಕ್ಕೆ ಇಳಿದವರು. ಈ ಇಳಿವಯಸ್ಸಿನಲ್ಲಿ ತನ್ನ ಜೀವಮಾನದ ಸಾಧನೆಯೋ ಎಂಬಂತೆ ಈವೊಂದು ಕ್ರತಿರಚನೆಗಾಗಿ ಬಹಳಷ್ಟು ಶ್ರಮ ಪಟ್ಟಿದ್ದಾರೆ. (ಮಣ್ಣಿಗೆ ಮರಳುವ ಮುನ್ನ ಪ್ರಮೋದ್ ರೈಯವರ ಬದುಕಿನ ಹಂದರಗಳನ್ನು ತೆರೆದಿಟ್ಟ ಪುಸ್ತಕವೂ ಅದೇ ದಿನ ಬಿಡುಗಡೆಗೊಂಡಿದೆ.)

ದುಡಿವ ಜನರ ಪ್ರೀತಿಪಾತ್ರರಾದ ಸಂಗಾತಿ ಎ.ಕೃಷ್ಣಶೆಟ್ಟಿಯವರನ್ನು ವಿಶಾಲ ದ್ರಷ್ಟಿಕೋನದಿಂದ ಪರಿಚಯಿಸಿದ ಇಳಂತಾಜೆ ಪ್ರಮೋದ್ ಕುಮಾರ್ ರೈಯವರು ನಿಜವಾಗಿಯೂ ಅಭಿನಂದನಾರ್ಹರು.

ಪ್ರತಿಗಳು ಬೇಕಾದಲ್ಲಿ... ಜ್ಞಾನಗಂಗಾ ಪುಸ್ತಕ ಮಳಿಗೆ ಪುತ್ತೂರು.
ಮೊ: 8296352905
ವಾಸುದೇವ ಉಚ್ಚಿಲ್.. ಮೊ: 9632095219... ಸಂಪರ್ಕಿಸಿರಿ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**